ಗುರುವಾರ, ಅಕ್ಟೋಬರ್ 20, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೇಳ

ಗುಜರಾತ್‌ನ ಗಾಂಧಿ ನಗರದಲ್ಲಿ ಬುಧವಾರ 12ನೇ ಡೆಫ್‌ಎಕ್ಸ್‌ಪೋ ಮೇಳದಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಯೊಬ್ಬರು 'ರಜಕ್' ಆಯುಧ ಪರಿಶೀಲಿಸಿದರು

ಎಸ್.ಆರ್. ಪಾಟೀಲ ಸಮೂಹ ಸಂಸ್ಥೆಗಳು, ಬಾಡಗಂಡಿ, ಬೀಳಗಿ, ಬಾಗಲಕೋಟೆ

ಬುದ್ಧ, ಬಸವ, ಗಾಂಧಿ, ಅಂಬೇಡ್ಕರರ ತತ್ವ, ಸಿದ್ಧಾಂತಗಳ ಕಟ್ಟಾ ಅನುಯಾಯಿ,
ಶತಮಾನದ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಟ್ಟಾಳು,
ಸಾಮಾಜಿಕ ನ್ಯಾಯದ ಹರಿಕಾರ, ಬಹುತ್ವ ಭಾರತದ ಸಮರ್ಥ ನಾಯಕ,
ಅನನ್ಯ ದೇಶಪ್ರೇಮಿ, ಅಜಾತ ಶತ್ರು, ದೇಶ ಕಂಡ ಅಪರೂಪದ ರಾಜಕಾರಣಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಜೀ

ಅವರು ಮಾಜಿ ಮುಖ್ಯಮಂತ್ರಿಗಳಾದ
ದಿ. ಎಸ್. ನಿಜಲಿಂಗಪ್ಪನವರ ನಂತರ ಅಖಿಲ ಭಾರತ
ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾದ
ಎರಡನೆಯ ಕನ್ನಡಿಗ ಎಂಬ ಬಿರುದಾಂಕಿತರಾಗಿ
ಹೊಸ ಇತಿಹಾಸ ಸೃಷ್ಟಿಸಿದ್ದು ಅವರನ್ನು ಪ್ರೀತಿಸುವ,
ಗೌರವಿಸುವ ಎಲ್ಲರಿಗೂ ಹೆಮ್ಮೆ ಹಾಗೂ
ಅಭಿಮಾನದ ಸಂಗತಿ.
ಕಾಂಗ್ರೆಸ್ ಪಕ್ಷದ ಸಾಮಾನ್ಯ ಕಾರ್ಯಕರ್ತರಾಗಿ
ರಾಜಕೀಯ ಜೀವನ ಪ್ರಾರಂಭಿಸಿ, ರಾಜ್ಯ ಮತ್ತು
ಕೇಂದ್ರದ ಕಾಂಗ್ರೆಸ್ ಪಕ್ಷದ ಸರಕಾರಗಳಲ್ಲಿ
ಉನ್ನತ ಹುದ್ದೆಗಳನ್ನು ದಕ್ಷತೆಯಿಂದ
ನಿಭಾಯಿಸಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ
ಅಧ್ಯಕ್ಷತೆಯಂತಹ ಅತ್ಯುನ್ನತ ಹುದ್ದೆಗೇರಿದ

ಶ್ರೀ ಮಲ್ಲಿಕಾರ್ಜುನ ಖರ್ಗೆ ಜೀ

ಅವರಿಗೆ ನನ್ನ

ಹೃತ್ಪೂರ್ವಕ ಅಭಿನಂದನೆಗಳು

ಅವರ ನೇತೃತ್ವದಲ್ಲಿ ರಾಜ್ಯ ಹಾಗೂ ದೇಶದಲ್ಲಿ
ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬರಲಿ
ಎಂಬುದು ನನ್ನ ಸದಾಶಯ ಹಾಗೂ ಹಾರೈಕೆ

ಸಮಸ್ತ ನಾಡಿನ ಜನತೆಗೆ ಬೆಳಕಿನ ಹಬ್ಬ
ದೀಪಾವಳಿಯ ಶುಭಾಶಯಗಳು

ಎಸ್.ಆರ್. ಪಾಟೀಲ
ಮಾಜಿ ಸಚಿವರು, ಕರ್ನಾಟಕ ಸರಕಾರ
ಸಂಸ್ಥಾಪಕ ಅಧ್ಯಕ್ಷರು,
ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿ., ಬೀಳಗಿ
ಬಾಡಗಂಡಿ ಸಕ್ಕರೆ ಕಾರ್ಖಾನೆ, ನಿ., ಬಾಡಗಂಡಿ
ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ
ಎಸ್.ಆರ್.ಪಾಟೀಲ ಶಿಕ್ಷಣ ಪ್ರತಿಷ್ಠಾನ, ಬಾಡಗಂಡಿ
ಬಾಪೂಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ, ಬಾಗಲಕೋಟೆ
ಶ್ರೀಮತಿ ಶಾಂತಾದೇವಿ ಸ್ಮರಣಾರ್ಥ ಆಯುರ್ವೇದಿಕ ವೈದ್ಯಕೀಯ
ಕಾಲೇಜು ಹಾಗೂ ಆಸ್ಪತ್ರೆ, ಬಾಡಗಂಡಿ
ಎಸ್.ಆರ್. ಪಾಟೀಲ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬಾಡಗಂಡಿ

ಗುರುವಾರ, ಅಕ್ಟೋಬರ್ 20, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @15

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ
ಮುಂಬೈನಲ್ಲಿ ಬುಧವಾರ ನಡೆದ 'ಭೇಡಿಯಾ' ಸಿನಿಮಾ ಪ್ರಚಾರದಲ್ಲಿ ಬಾಲಿವುಡ್ ನಟ ಕೃತಿ ಸನನ್ ಪಾಲ್ಗೊಂಡಿದ್ದರು

This festive season, exchange smiles, love and laughter with HP.

The latest HP Pavilion with 12th Gen Intel® Core™ i5 processor delivers real-world breakthrough performance.

Eyesafe® Certified
Now watch anything, anytime or all the time.

Enhanced Video Call Quality
Get crisp and clear video conferencing experience even in low light with TNR technology.

HP QuickDrop
For seamless, wireless file sharing to any device.

Take home an HP laptop with Festive Bonanza.

Own an Eyesafe® Pavilion in ₹2 417.00 per month	HP Pavilion 15 - EG2036TU
Suggested Retail Price	₹75 999.00
Upfront Discount	₹1 000.00
Exchange Benefits	₹17 000.00
Effective SRP	₹57 999.00
Bajaj One EMI Offer (24/8 Scheme)	₹2 417.00
Effective cost	₹55 582.00
EMI (No cost up to 24 months)	₹2 417.00

Extended warranty at ₹299.00 for students*

Up to ₹17 000.00** off on exchange

5% cashback up to ₹5 000.00^

citi | HDFC BANK | kotak | SBI card

One month EMI free# with BAJAJ FINSERV

HP Pavilion Laptop 15-EG2036TU

Scan QR code to locate nearest HP World
Call: 1800 419 4962 | Visit: www.hp.com/in-en/shop
Also available at Reliance Digital, Croma, Vijay Sales, Harsha Retail and Pai International

intel. CORE i5

*Terms and conditions apply. The above HP Festive Bonanza Offers are valid from 23rd September'22 to 31st October'2022. **Exchange offer benefit up to ₹17 000.00 is available on select HP laptop models in select HP World stores. ₹17 000.00 exchange value is basis old laptop exchange value of ₹11 000.00 (assuming an 8th Gen Intel® Core™ i3 processor laptop and above) and ₹6 000.00 Top up bonus (Assuming new purchase as Pavilion or Victus Notebooks and old laptop model of HP Brand). 10% Cashback upto ₹10 000.00 offer on Spectre,Envy and Omen Notebooks with Citi Bank, HDFC Bank, Kotak & SBI Card or ^5% Cashback upto ₹5 000.00 on rest models with Citi Bank, HDFC Bank, Kotak & SBI Card. Min.trxn for 5% Cashback is ₹40 000.00 and for 10% Cashback is ₹85 000.00 Valid on transactions via Pinelabs/Benow on end customer purchases from authorized HP partners, HP World stores and HP Online store. Cashback offer may differ for different banks/NBFC. Finance offers are valid on end customer purchases from authorized over the counter HP stores. #One month EMI offer with Bajaj on select schemes and models above ₹60 000.00. To redeem the offers or know more about the offer and for offer T&Cs visit: https://www.redeemnow.in/hpfestivebonanzaoffer. Multi-core is designed to improve performance of certain software products. Not all customers or software applications will necessarily benefit from use of this technology. Performance and clock frequency will vary depending on application workload and your hardware and software configurations. Intel's numbering is not a measurement of higher performance. Not all features are available in all editions or versions of Windows. Systems may require ugraded and/or separately purchased hardware, drivers, software or BIOS update to take full advantage of Windows functionality. Windows 11 is automatically updated, which is always enabled. ISP fees may apply and additional requirements may apply over time for updates. See http://www.windows.com. Intel, the Intel logo, and Intel Core are trademarks of Intel Corporation or its subsidiaries. ©Copyright 2022 HP Development Company, L.P

ಗುರುವಾರ, ಅಕ್ಟೋಬರ್ 20, 2022 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 290 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕಾಂಗ್ರೆಸ್ ಅಧ್ಯಕ್ಷ ಹುದ್ದೆಯ ವೈವಿಧ್ಯ
ಓಲಾ-ಉಬರ್‌ಗೆ 'ನಮ್ಮ ಯಾತ್ರಿ' ಸಡ್ಡು? 3F
ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ 7
ಇಂದು ಸ್ಪರ್ಧಾವಾಣಿ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,107 ▲	17,512 ▲	₹51,850 (ಬೆಂಗಳೂರು) ▲	₹57,500 (ಬೆಂಗಳೂರು) ▼	83 ▼

ನೂತನ ಅಧ್ಯಕ್ಷರ ಮುಂದಿವೆ ಬೆಟ್ಟದಷ್ಟು ಸವಾಲುಗಳು • 6,825 ಮತಗಳ ಅಂತರದ ಗೆಲುವು

ಕಾಂಗ್ರೆಸ್‌ಗೆ ಖರ್ಗೆ ಸಾರಥಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ನೂತನ ಅಧ್ಯಕ್ಷರಾಗಿ ಬುಧವಾರ ಆಯ್ಕೆಯಾದರು.

ನೆಹರೂ–ಗಾಂಧಿ ಕುಟುಂಬದ ಹೊರಗಿನವರೊಬ್ಬರು 24 ವರ್ಷಗಳ ಬಳಿಕ ಈ ಹುದ್ದೆಗೆ ಏರಿದ್ದಾರೆ. ಪಕ್ಷದಲ್ಲಿ ಜಗಜೀವನ ರಾಂ ಅವರ ನಂತರ ಮೊದಲ ಬಾರಿಗೆ ದಲಿತ ನಾಯಕರೊಬ್ಬರು ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಇವರು ಅಧ್ಯಕ್ಷ ಸ್ಥಾನಕ್ಕೇರಿದ ಮೂರನೇ ದಲಿತ ನಾಯಕರಾಗಿದ್ದಾರೆ.

ಕರ್ನಾಟಕದಿಂದ ಎಸ್.ನಿಜಲಿಂಗಪ್ಪ ಅವರ ಬಳಿಕ ಖರ್ಗೆ ಅವರು ಪಕ್ಷದ ಅಧ್ಯಕ್ಷರಾಗಿದ್ದಾರೆ. ಅವರು ತಮ್ಮ ಎದುರಾಳಿ ಶಶಿ ತರೂರ್ ಅವರನ್ನು 6,825 ಮತಗಳ ಭಾರಿ ಅಂತರದಿಂದ ಸೋಲಿಸಿ ವಿಜಯಶಾಲಿಯಾದರು.

ಅಕ್ಟೋಬರ್ 17ರಂದು ನಡೆದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಒಟ್ಟು 9,385 ಮಂದಿ ಮತ ಚಲಾಯಿಸಿದ್ದರು. ಈ ಪೈಕಿ, ಖರ್ಗೆ ಅವರಿಗೆ ಶೇ 84.14 ರಷ್ಟು ಮತಗಳು ಬಿದ್ದಿವೆ. ಎದುರಾಳಿ ಶಶಿ ತರೂರ್ ಶೇ 11.42ರಷ್ಟು ಮತ ಗಳಿಸಿದ್ದಾರೆ. ಒಟ್ಟು 416 ಮತಗಳನ್ನು ಅಸಿಂಧು ಎಂದು ಘೋಷಿಸಲಾಗಿದೆ.

ಬೆಳಿಗ್ಗೆ ಮತ ಎಣಿಕೆ ಆರಂಭವಾಗುತ್ತಿದ್ದಂತೆ ಪಕ್ಷದ ಪ್ರಧಾನ ಕಚೇರಿಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರು. ಖರ್ಗೆ ಅವರು ಮೊದಲಿನಿಂದಲೂ ಮುನ್ನಡೆಯಲ್ಲೇ ಇದ್ದರೂ, ತರೂರ್ ಗಳಿಸಿದ ಮತಗಳ ಸಂಖ್ಯೆ ಕೂಡ ಎಲ್ಲರಲ್ಲೂ ಅಚ್ಚರಿ ಮೂಡಿಸಿತ್ತು.

ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಗೆದ್ದ ಮಲ್ಲಿಕಾರ್ಜುನ ಖರ್ಗೆ ಅವರ ನವದೆಹಲಿಯ ನಿವಾಸಕ್ಕೆ ಬುಧವಾರ ತೆರಳಿದ ಶಶಿ ತರೂರ್ ಅಭಿನಂದನೆ ಸಲ್ಲಿಸಿದರು —ಪಿಟಿಐ ಚಿತ್ರ

3Aನೇ ಪುಟ ನೋಡಿ

'ಪಕ್ಷದ ನೈಜ ಯೋಧನಂತೆ ಕೆಲಸ'

'ಪಕ್ಷದಲ್ಲಿ ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಪಕ್ಷದ ಸಂಘಟನೆ ಯನ್ನು ಬಲಪಡಿಸಲು ಕಾಂಗ್ರೆಸ್‌ನ ನೈಜ ಯೋಧನಂತೆ ದುಡಿಯುತ್ತೇನೆ' ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನಗೆ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರು ಸಮಾನರು. ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಮೇಲೆ ದಾಳಿ ಮಾಡುತ್ತಿರುವ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ನಾವೆಲ್ಲ ಒಗ್ಗಟ್ಟಾಗಿ ಹೋರಾಟ ಮಾಡಬೇಕು. ನಾವೆಲ್ಲರೂ ಒಟ್ಟಾಗಿ ವಿನಾಶಕಾರಿ ಶಕ್ತಿಗಳ ವಿರುದ್ಧ ಹೋರಾಡಬೇಕು' ಎಂದರು.

'ಚುನಾವಣೆ ನಡೆಸುವ ಮೂಲಕ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಪ್ರಬಲವಾಗಿದೆ ಎಂಬುದನ್ನು ತೋರಿಸಲಾಗಿದೆ' ಎಂದು ಅವರು ಪ್ರತಿಪಾದಿಸಿದರು.

ಸೋನಿಯಾ ಗಾಂಧಿ ನಾಯಕತ್ವವನ್ನು ಶ್ಲಾಘಿಸಿದ ಅವರು, 'ಅವರ ಅಧಿಕಾರದ ಅವಧಿಯು ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ' ಎಂದ ಅವರು, 'ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಎಲ್ಲ ಕಾರ್ಯಕರ್ತರು ಪಾಲ್ಗೊಳ್ಳಬೇಕು' ಎಂದು ಅವರು ಮನವಿ ಮಾಡಿದರು.

> **ಪಕ್ಷಕ್ಕೆ ಅಧ್ಯಕ್ಷರೇ ಸರ್ವೋಚ್ಚ. ಪಕ್ಷದ ಮುಂದಿನ ದಾರಿಯನ್ನು ಅವರೇ ನಿರ್ಧರಿಸುತ್ತಾರೆ**
> **ರಾಹುಲ್ ಗಾಂಧಿ,** ಪಕ್ಷದ ನಾಯಕ

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೀಟ್, ಸಿಇಟಿ ಅವ್ಯವಸ್ಥೆ ಅಭ್ಯರ್ಥಿಗಳ ಪರದಾಟ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವೈದ್ಯಕೀಯ (ನೀಟ್), ಎಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಕೋರ್ಸ್‌ಗಳ (ಸಿಇಟಿ) ಪ್ರವೇಶ ಪ್ರಕ್ರಿಯೆಯಲ್ಲಿ ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ತಾಂತ್ರಿಕ ದೋಷ, ಸರ್ವರ್ ಸಮಸ್ಯೆಗಳಿಂದಾಗಿ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಸಾಧ್ಯವಾಗದೆ ಅಭ್ಯರ್ಥಿಗಳು ಹೈರಾಣಾಗಿದ್ದಾರೆ.

ಸಮಸ್ಯೆಗಳಿಂದ ಕಂಗಾಲಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಹಾಯವಾಣಿಗಳಿಗೆ ಕರೆ ಮಾಡಿದರೂ, ಅಲ್ಲಿನ ಸಿಬ್ಬಂದಿ ಕರೆಗಳನ್ನು ಸ್ವೀಕರಿಸುತ್ತಿಲ್ಲ. ಇದರಿಂದ ರಾಜ್ಯದ ಮೂಲೆಮೂಲೆಗಳಿಂದ ಅಭ್ಯರ್ಥಿಗಳು ಹಾಗೂ ಪೋಷಕರು ಮಲ್ಲೇಶ್ವರದ ಕೆಇಎ ಕಚೇರಿಗೆ ಎಡತಾಕುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಸರದಿಯಲ್ಲಿ ನಿಂತರೂ ಸಮಸ್ಯೆ ಬಗೆಹರಿದಿಲ್ಲ ಎಂದು ಹಲವರು ಆಕ್ರೋಶ ವ್ಯಕ್ತಪಡಿಸಿದರು.

'ಸಾಕಷ್ಟು ಸಮಯ ವ್ಯಯಮಾಡಿದ ನಂತರ ನೀಟ್ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದೆವು.

7ನೇ ಪುಟ ನೋಡಿ

ನೇಮಕಾತಿ ಅಕ್ರಮ 38 ಶಿಕ್ಷಕರ ಬಂಧನ

ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆ 2012–13 ಹಾಗೂ 2014–15ನೇ ಸಾಲಿನಲ್ಲಿ ನಡೆಸಿದ ಸಹ ಶಿಕ್ಷಕರ ನೇಮಕಾತಿ ಅಕ್ರಮ ಪ್ರಕರಣದ ಬೆನ್ನುಹತ್ತಿರುವ ಸಿಐಡಿ ಅಧಿಕಾರಿಗಳು, ಬುಧವಾರ ಬೆಳಿಗ್ಗೆ ಏಕಕಾಲದಲ್ಲಿ ದಾಳಿ ನಡೆಸಿ 38 ಸಹ ಶಿಕ್ಷಕರನ್ನು ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ 24, ಬೆಂಗಳೂರು ದಕ್ಷಿಣ ವಿಭಾಗದ 5, ಚಿಕ್ಕಬಳ್ಳಾಪುರ ಜಿಲ್ಲೆಯ 3 ಹಾಗೂ ಚಿತ್ರದುರ್ಗ ಜಿಲ್ಲೆಯ 5 ಸಹ ಶಿಕ್ಷಕರು ಸೇರಿದಂತೆ ಒಟ್ಟು 38 ಶಿಕ್ಷಕರನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದ ಬಹುತೇಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಡೆದಿದ್ದ ನೇಮ ಕಾತಿಯಲ್ಲಿ ಅಕ್ರಮ ನಡೆದಿರುವ ಕುರಿತು ವಿಧಾನಸೌಧ ಠಾಣೆಯಲ್ಲಿ ಕಳೆದ ಆಗಸ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಸಿಐಡಿ ತಂಡವು ಪ್ರಕರಣದ ತನಿಖೆ ನಡೆಸುತ್ತಿದೆ.

6ನೇ ಪುಟ ನೋಡಿ

ನಗರದ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಕಾಂಗ್ರೆಸ್ ಆಗ್ರಹ ● ಮೆರವಣಿಗೆಯಲ್ಲಿ ತೆರಳಿ ಮನವಿ ಸಲ್ಲಿಸುತ್ತೇವೆ ರಾಮಲಿಂಗಾ ರೆಡ್ಡಿ ಹೇಳಿಕೆ

ನಾಳೆ ಸಿ.ಎಂ ನಿವಾಸಕ್ಕೆ ಪ್ರತಿಭಟನಾ ರ‍್ಯಾಲಿ

ಪಿ.ಜೆ ಡಿಸೋಜಾನಗರದ ಮುಖ್ಯರಸ್ತೆಯಲ್ಲಿನ ಮಹಾಗುಂಡಿ –ಪ್ರಜಾವಾಣಿ ಚಿತ್ರ/ರಂಜು ಪಿ.

ಜಯಮಹಲ್ ರಸ್ತೆಯಲ್ಲಿನ ಸಾಲುಸಾಲು ಗುಂಡಿಗಳು –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಹನುಮಂತ ನಗರದ ಕೊಹಿನೂರ್ ಆಟದ ಮೈದಾನದ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು. – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ. (ಎಡಚಿತ್ರ) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಬಳಿಯ ಸಿಎನ್‌ಆರ್ ಅಂಡರ್‌ಪಾಸ್ ಮೇಲಿನ ರಸ್ತೆ ಮೇಲಿನ ಮೃತ್ಯುಕೂಪ. –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಪಿ.ಜೆ ಡಿಸೋಜಾನಗರದಲ್ಲಿ ರಸ್ತೆ ಅಂಚಿಗೆ ವಾಹನದ ಚಕ್ರ ಬಂದರೆ ಅಪಾಯ ಕಟ್ಟಿಟ್ಟಬುತ್ತಿ –ಪ್ರಜಾವಾಣಿ ಚಿತ್ರ/ರಂಜು ಪಿ.

ಗುಂಡಿ ಗಂಡಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ರಸ್ತೆ ಗುಂಡಿ ಗಳನ್ನು ಮುಚ್ಚುವಂತೆ ಆಗ್ರಹಿಸಿ ಆನಂದ ರಾವ್ ವೃತ್ತದಿಂದ ಮುಖ್ಯಮಂತ್ರಿ ಮನೆಯ ವರೆಗೂ ಪಕ್ಷದ ವತಿಯಿಂದ ಇದೇ 21ರಂದು ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗುವುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಅಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಶಾಸಕರು, ಮಾಜಿ ಮೇಯರ್‌ಗಳು, ಪಾಲಿಕೆಯ ಮಾಜಿ ಸದಸ್ಯರು ಮೆರವಣಿಗೆಯಲ್ಲಿ ತೆರಳಿ ಮುಖ್ಯಮಂತ್ರಿಗೆ ಮನವಿ ಸಲ್ಲಿಸುತ್ತೇವೆ' ಎಂದರು.

'ಬೆಂಗಳೂರಿನ ರಸ್ತೆಗಳು ಗುಂಡಿಮಯವಾಗಿವೆ. ಒಂದೂವರೆ ವರ್ಷದಿಂದ ಹೈಕೋರ್ಟ್ ಕೂಡ ಈ ವಿಚಾರವಾಗಿ ಚಾಟಿ ಬೀಸುತ್ತಲೇ ಇದೆ. ರಸ್ತೆ ಗುಂಡಿ ಮುಚ್ಚದಿದ್ದರೆ ಜೈಲಿಗೆ ಹಾಕುವುದಾಗಿಯೂ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳಿಗೆ ಎಚ್ಚರಿಕೆ ನೀಡಿದೆ. ನಂತರವೂ ಬೆಂಗಳೂರಿನಲ್ಲಿ ರಸ್ತೆಗುಂಡಿ ಕಡಿಮೆ ಆಗಿಲ್ಲ' ಎಂದು ದೂರಿದರು.

'ಪಾಲಿಕೆಯ 198 ವಾರ್ಡ್‌ಗಳಿಗೆ 2020-21ರಲ್ಲಿ ಸರ್ಕಾರವು ನಯಾಪೈಸೆ ಅನುದಾನ ಬಿಡುಗಡೆ ಮಾಡಲಿಲ್ಲ. 2022-23ಕ್ಕೆ ಬಜೆಟ್‌ನಲ್ಲಿ ಹೊಸ ವಾರ್ಡ್‌ಗೆ ₹ 6 ಕೋಟಿ, ಹಳೆ ವಾರ್ಡ್‌ಗಳಿಗೆ ₹ 4 ಕೋಟಿ ಘೋಷಿಸಿದ್ದಾರೆ. ಈ ಅನುದಾನ ಕನ್ನಡಿಯೊಳಗಿನ ಗಂಟಿನಂತೆ ಕೇವಲ ಕಾಗದ ಮೇಲೆ ಇದೆಯೇ ಹೊರತು ಹಣ ಬಿಡುಗಡೆ ಆಗಿಲ್ಲ. ಎಂಜಿನಿಯರ್‌ಗಳಿಗೆ ಟೆಂಡರ್ ಕರೆಯಲು ಸರ್ಕಾರ ಇನ್ನೂ ಅನುಮತಿ ನೀಡಿಲ್ಲ' ಎಂದರು.

'ಬೆಂಗಳೂರು ಅಭಿವೃದ್ಧಿ ಜವಾಬ್ದಾರಿಯನ್ನು ಮುಖ್ಯಮಂತ್ರಿಯವರೇ ಇಟ್ಟುಕೊಂಡಿದ್ದು, ಅವರ ಬೆಂಬಲಕ್ಕೆ ಏಳು ಸಚಿವರೂ ಇದ್ದಾರೆ. ಇನ್ನು ಬಿಡಿಎ ಮುಖ್ಯಸ್ಥರು, ಮುಖ್ಯ ಸಚೇತಕರು ಬೆಂಗಳೂರಿನ ಶಾಸಕರೇ ಆಗಿದ್ದಾರೆ. ಆದರೂ ಬೆಂಗಳೂರಿನ ರಸ್ತೆಗಳಲ್ಲಿ ಲಕ್ಷಗಟ್ಟಲೇ ಗುಂಡಿಗಳು ಬಿದ್ದಿವೆ. ಈ ಹಿಂದಿನ ಸರ್ಕಾರದ ಅವಧಿಯಲ್ಲೂ ಮಳೆ ಬಿದ್ದು, ರಸ್ತೆ ಗುಂಡಿ ಬೀಳುತ್ತಿದ್ದವು. ತಕ್ಷಣ ಅವುಗಳನ್ನು ಮುಚ್ಚುವ ಕೆಲಸ ಆಗುತ್ತಿತ್ತು' ಎಂದರು.

ವಿಧಾನಪರಿಷತ್ ಸದಸ್ಯ ಪಿ.ಆರ್. ರಮೇಶ್ ಮಾತನಾಡಿ, 'ಬೆಂಗಳೂರಿನ ರಸ್ತೆಗಳ ಪೈಕಿ ಯಾವುದಾದರೂ ಒಂದು ರಸ್ತೆ ಒಂದು ಕಿ.ಮೀ.ನಷ್ಟು ಗುಂಡಿರಹಿತವಾಗಿ ಇದೆಯೇ ಎಂದು ಕೇಳಿದ್ದೆ. ಅಧಿಕಾರಿಗಳಿಂದ ಇಲ್ಲ ಎಂಬ ಉತ್ತರ ಸಿಕ್ಕಿದೆ. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಬೆಂಗಳೂರು ಗಾರ್ಬೇಜ್ ಸಿಟಿ ಎಂದು ಗುರುತಿಸಲಾಯಿತು. ನಂತರ ನೆರೆ ನಗರವಾಯಿತು. ಈಗ ಡೆತ್ ಹೋಲ್ ಸಿಟಿ ಆಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಬಗ್ಗೆ ಮಾತನಾಡುತ್ತಿದ್ದು, ನಾವು 70 ವರ್ಷಗಳ ಕಾಲ ಬೆಂಗಳೂರಿಗೆ ತಂದಿದ್ದ ಬ್ರ್ಯಾಂಡ್ ಅನ್ನು ಬಿಜೆಪಿ ಸರ್ಕಾರ ಕೆಳಗೆ ತರುತ್ತಿದೆ' ಎಂದು ದೂರಿದರು.

'ರಸ್ತೆ ಗುಂಡಿಗಳ ಶೃಂಗ ನಡೆಸಿದರೆ ಚೆನ್ನಾಗಿತ್ತು'

ಬಿಜೆಪಿ ಸರ್ಕಾರಕ್ಕೆ ರಸ್ತೆ ಗುಂಡಿಗಳೆಂದರೆ ಇಷ್ಟ: ಕುಮಾರಸ್ವಾಮಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆಗಳಲ್ಲಿ ಗುಂಡಿಗಳು ಬಿದ್ದಷ್ಟೂ ಕಿಸೆಗೆ ಹೆಚ್ಚು ದುಡ್ಡು ಹರಿದು ಬರುತ್ತದೆ. ಹೀಗಾಗಿ ಬಿಜೆಪಿ ಸರ್ಕಾರಕ್ಕೆ ರಸ್ತೆ ಗುಂಡಿಗಳೆಂದರೆ ಬಲು ಇಷ್ಟ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ರಸ್ತೆ ಗುಂಡಿಗಳಿಂದಾಗಿ ಸಂಭವಿಸುತ್ತಿರುವ ಅಪಘಾತಗಳಲ್ಲಿ ಸಾವಿನ ಸಂಖ್ಯೆ ಹೆಚ್ಚುತ್ತಿರುವ ಕುರಿತು ಬುಧವಾರ ಸರಣಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, 'ಉದ್ಯಾನ ನಗರ, ಸಿಲಿಕಾನ್ ಸಿಟಿ ಎಂದು ಖ್ಯಾತಿ ಪಡೆದಿದ್ದ ಬೆಂಗಳೂರು ಈಗ ಗುಂಡಿಗಳೂರು, ಅಧ್ವಾನ ನಗರ ಎಂಬ ಸ್ಥಿತಿಗೆ ತಲುಪಿದೆ. ಕಾಮಗಾರಿಗಳಲ್ಲಿ ಪರ್ಸೆಂಟೇಜ್ ವ್ಯವಸ್ಥೆಯೇ ಇಂಥ ಕುಖ್ಯಾತಿಗೆ ಕಾರಣ' ಎಂದಿದ್ದಾರೆ.

ಲುಲು ಮಾಲ್ ಎದುರಿನ ರಸ್ತೆ ಗುಂಡಿಗೆ ಇನ್ನೊಂದು ಜೀವ ಬಲಿಯಾದ ಬಳಿಕ ಎಚ್ಚೆತ್ತುಕೊಳ್ಳುವ ನಾಟಕ ನಡೆದಿದೆ. ಶಾಶ್ವತ ಪರಿಹಾರ ಎಲ್ಲಿ? ರಸ್ತೆ ಗುಂಡಿಗಳು ಸರಣಿ ಸಾವುಗಳಿಗೆ ಕಾರಣವಾಗಿದ್ದರೆ, ಅದೇ ಗುಂಡಿಗಳು ಕೆಲವರಿಗೆ ಕಲ್ಪವೃಕ್ಷವಾಗಿವೆ. ಹೈಕೋರ್ಟ್ ಛೀಮಾರಿ ಹಾಕಿದರೂ ನಾಚಿಕೆ, ಸಂಕೋಚ ಇಲ್ಲ. ಜೈಲಿಗೆ ಅಟ್ಟುವುದಾಗಿ ಎಚ್ಚರಿಕೆ ಕೊಟ್ಟರೂ ಭಂಡತನ ಬಿಡುತ್ತಿಲ್ಲ ಎಂದು ಟೀಕಾಪ್ರಹಾರ ನಡೆಸಿದ್ದಾರೆ.

'ಗುಂಡಿಬಿದ್ದ ರಸ್ತೆಗಳು ರಾಜ್ಯದ ಗೌರವವನ್ನು ಮೂರಾಬಟ್ಟೆ ಮಾಡುತ್ತಿವೆ. ಇನ್ನೊಂದೆಡೆ ಸರ್ಕಾರ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸುತ್ತಿದೆ. 'ರಸ್ತೆ ಗುಂಡಿಗಳ ಶೃಂಗ'ವನ್ನೂ ನಡೆಸಿದರೆ ಚೆನ್ನಾಗಿರುತ್ತಿತ್ತು. ರಸ್ತೆ ಗುಂಡಿಗಳಿಂದ ಆಗುತ್ತಿರುವ ಸರಣಿ ಸಾವುಗಳಿಗೆ ಬಿಜೆಪಿ ಸರ್ಕಾರವೇ ನೇರ ಕಾರಣ. ಮುಗ್ಧ ಜನರ ಸಾವು, ನೋವುಗಳಿಗೆ ಬಿಬಿಎಂಪಿ ಸಂಪೂರ್ಣ ಹೊಣೆ. ಸಂಬಂಧಿಸಿದ ಸಚಿವರು ಮತ್ತು ಮುಖ್ಯಮಂತ್ರಿ ಇದಕ್ಕೆ ಉತ್ತರದಾಯಿಗಳು ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಪಾಲಿಕೆ ಮಾಡಿದ ಪಾಪಕ್ಕೆ ನತದೃಷ್ಟ ಮಹಿಳೆ ಉಮಾದೇವಿ ಬಲಿಯಾಗಿದ್ದಾರೆ. ಅವರ ಕುಟುಂಬಕ್ಕೆ ಪರಿಹಾರ ಕೊಟ್ಟು ಕೈತೊಳೆದುಕೊಳ್ಳುವುದಲ್ಲ. ಇನ್ನಾದರೂ ಗುಂಡಿಗಳನ್ನು ಮುಚ್ಚಬೇಕು ಹಾಗೂ ರಸ್ತೆಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

'ಪೈಥಾನ್' ಗುತ್ತಿಗೆ ರದ್ದತಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅತ್ಯಾಧುನಿಕ ತಂತ್ರಜ್ಞಾನದಿಂದ ರಸ್ತೆಗಳ ಗುಂಡಿಗಳನ್ನು ಕ್ಷಿಪ್ರಗತಿಯಲ್ಲಿ ದುರಸ್ತಿ ಮಾಡುವ 'ಪೈಥಾನ್ ಯಂತ್ರ'ಗಳ ಗುತ್ತಿಗೆಯನ್ನು ತಕ್ಷಣದಿಂದ ರದ್ದುಗೊಳಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಬಿಬಿಎಂಪಿ ಶಿಫಾರಸು ಮಾಡಿದೆ.

ಅಮೆರಿಕನ್ ರೋಡ್ ಟೆಕ್ನಾಲಜಿ ಆ್ಯಂಡ್ ಸಲ್ಯೂಷನ್ಸ್ (ಎಆರ್‌ಟಿಎಸ್) ಸಂಸ್ಥೆ 182 ಕಿ.ಮೀ. ರಸ್ತೆಗಳನ್ನು ಗುಂಡಿಮುಕ್ತವನ್ನಾಗಿ ನಿರ್ವಹಣೆ ಮಾಡುವ ಗುತ್ತಿಗೆಯನ್ನು 2017ರಲ್ಲಿ ಐದು ವರ್ಷಕ್ಕೆ ಪಡೆದುಕೊಂಡಿತ್ತು. 'ಪೈಥಾನ್' ಯಂತ್ರಗಳನ್ನು ಬಳಸಿ ಗುಂಡಿಗಳನ್ನು ದುರಸ್ತಿ ಮಾಡಲಾಗುತ್ತಿತ್ತು. ಇದಾದ ನಂತರ, 2022ರಲ್ಲಿ ಮತ್ತೆ ಎರಡು ವರ್ಷಕ್ಕೆ ಈ ಗುತ್ತಿಗೆಯನ್ನು ಎಆರ್‌ಟಿಎಸ್ ಪಡೆದುಕೊಂಡಿದೆ. ಆದರೆ, ರಸ್ತೆ ಗುಂಡಿಗಳನ್ನು ದುರಸ್ತಿ ಮಾಡುವ ಕೆಲಸ ಮಾಡುತ್ತಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ದೂರಿದ್ದಾರೆ.

'142 ಕಿ.ಮೀ. ರಸ್ತೆಯನ್ನು ಗುತ್ತಿಗೆಗೆ ನೀಡಿ, ವರ್ಷಪೂರ್ತಿ ಗುಂಡಿಮುಕ್ತ ರಸ್ತೆಯನ್ನಾಗಿ ನಿರ್ವಹಣೆ ಮಾಡಬೇಕು ಎಂದು ಹೇಳಲಾಗಿದೆ. ಪ್ರತಿ ಕಿ.ಮೀ. ರಸ್ತೆಗೆ ತಿಂಗಳಿಗೆ ₹19 ಸಾವಿರ ನೀಡಲಾಗುತ್ತಿದೆ. ಆದರೆ, 8ರಿಂದ 10 ಕಿ.ಮೀ. ರಸ್ತೆ ಮಾತ್ರ ಗುಂಡಿಮುಕ್ತವಾಗಿದೆ. ಇನ್ನುಳಿದ ರಸ್ತೆ ಗುಂಡಿಮಯವಾಗಿವೆ. ಈ ಬಗ್ಗೆ ಅವರಿಗೆ ಹಲವು ಬಾರಿ ನೋಟಿಸ್ ನೀಡಿದ್ದರೂ ಕಾರ್ಯನಿರ್ವಹಣೆ ಮಾಡುತ್ತಿಲ್ಲ. ಹೀಗಾಗಿ, ಸರ್ಕಾರಕ್ಕೆ ಈ ಗುತ್ತಿಗೆಯನ್ನು ರದ್ದು ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

'ಮೂರು ಯಂತ್ರಗಳ ಮೂಲಕ ರಸ್ತೆ ಗುಂಡಿಗಳ ದುರಸ್ತಿ ಕಾರ್ಯ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅವರ ಬಳಿ ಇರುವುದೇ ಒಂದು ಯಂತ್ರ. ಹೀಗಾಗಿ ಗುತ್ತಿಗೆಯಲ್ಲಿ ನಮೂದಿಸಿರುವ ರಸ್ತೆಗಳಲ್ಲಿ ಗುಂಡಿಗಳು ಹಾಗೆಯೇ ಇವೆ. ನಮ್ಮ ವಿಭಾಗದಲ್ಲಿ ಗುಂಡಿ ದುರಸ್ತಿಗೆ ಇದಲ್ಲದೆ ಬೇರೆ ನಿಧಿ ಇಲ್ಲ. ಗುತ್ತಿಗೆದಾರರು ಕಾರ್ಯನಿರ್ವಹಿಸದಿರುವುದರಿಂದ ನಮಗೆ ಕೆಟ್ಟ ಹೆಸರು. ಜನರು, ಸಂಚಾರ ಪೊಲೀಸರೆಲ್ಲ ನಮ್ಮನ್ನೇ ದೂರುತ್ತಿದ್ದಾರೆ' ಎಂದರು.

ಹೊಳೆಯಂತಾದ ರಸ್ತೆಗಳು: ವಾಹನ ಸವಾರರ ಪರದಾಟ

ಗುಡುಗು ಸಹಿತ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬ್ರಿಗೇಡ್ ಜಂಕ್ಷನ್ ಬಳಿ ಬುಧವಾರ ರಾತ್ರಿ ಸುರಿದ ಮಳೆಯಲ್ಲೇ ಸಾಗಿದ ವಾಹನಗಳು ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ನಗರದಲ್ಲಿ ಬುಧವಾರವೂ ಧಾರಾಕಾರ ಮಳೆ ಸುರಿಯಿತು. ಗುಡುಗು ಸಮೇತ ಅಬ್ಬರದ ಮಳೆಯಿಂದ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಕೆಲದಿನಗಳಿಂದ ನಗರದಲ್ಲಿ ಸತತ ಮಳೆಯಾಗುತ್ತಿದೆ. ಬುಧವಾರ ಹಗಲು ಹೊತ್ತಿನಲ್ಲಿ ಮಳೆ ಬಿಡುವು ನೀಡಿ ದ್ದರೂ ಮೋಡ ಕವಿದ ವಾತಾವರಣವಿತ್ತು.

ರಾತ್ರಿ ಒಂಬತ್ತರ ನಂತರ ಭಾರಿ ಮಳೆಯಾಯಿತು. ಹಲವು ಪ್ರದೇಶಗಳಲ್ಲಿ ಕಾಲುವೆಗಳು ತುಂಬಿ, ರಸ್ತೆ ಮೇಲೆಯೇ ಹರಿಯುವ ನೀರಿನಲ್ಲೇ ವಾಹನಗಳು ಸಂಚರಿಸಿದವು.

ಮಲ್ಲೇಶ್ವರ, ಆರ್‌.ಟಿ. ನಗರ, ಬನಶಂಕರಿ, ಕೆಂಗೇರಿ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ, ದೀಪಾಂಜಲಿ ನಗರ, ಹನುಮಂತನಗರ, ಬಸವನಗುಡಿ, ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಗಾಂಧಿನಗರ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ಎಂ.ಜಿ. ರಸ್ತೆ, ಅಶೋಕನಗರ, ಶಿವಾಜಿ ನಗರ, ಹಲಸೂರು, ಇಂದಿರಾನಗರ, ದೊಮ್ಮಲೂರು, ಹೆಣ್ಣೂರು, ಬಾಣಸವಾಡಿ, ಶಾಂತಿನಗರ, ಲಾಲ್‌ಬಾಗ್, ವಿಲ್ಸನ್ ಗಾರ್ಡನ್, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಇತರೆಡೆಯೂ ಮಳೆ ಸುರಿಯಿತು.

ಶಿವಾನಂದ ವೃತ್ತ, ಆನಂದ ರಾವ್ ವೃತ್ತದಲ್ಲಿನ ರಸ್ತೆಗಳು ಸಂಪೂರ್ಣ ಜಲಾವೃತಗೊಂಡಿದ್ದವು.

ಮೆಜೆಸ್ಟಿಕ್ ರೈಲ್ವೆ ಸೇತುವೆ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಬಿವಿಕೆ ಅಯ್ಯಂಗಾರ್ ರಸ್ತೆ ಸೇರಿ ಹಲವೆಡೆ ರಸ್ತೆ ಮೇಲೆಯೇ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ಮಳೆ: ಎಲ್ಲಿ, ಎಷ್ಟು? (ಮಿ.ಮೀ ಗಳಲ್ಲಿ)

ದೊಡ್ಡನೆಕ್ಕುಂದಿ	69	ಸಂಪಂಗಿರಾಮನಗರ	56
ಎಚ್‌ಎಎಲ್ ವಿಮಾನ ನಿಲ್ದಾಣ	66.5	ನಾಗಪುರ	24.5
ವರ್ತೂರು	39	ನಾಯಂಡಹಳ್ಳಿ	36
ಮಾರತಹಳ್ಳಿ	52	ನಾಗರಬಾವಿ	21.5
ಕೆ.ಆರ್.ಪುರ	48	ರಾಜಾಜಿನಗರ	24
ಪುಲಕೇಶಿನಗರ	60	ದೊರೆಸಾನಿ ಪಾಳ್ಯ	56
ರಾಜಮಹಲ್ ಗುಟ್ಟಹಳ್ಳಿ	62.5	ರಾಜರಾಜೇಶ್ವರಿನಗರ	44

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

WANTED M/S.V&V ASSOCIATES, BANGALORE
invites application from the eligible candidates for the post State Programme Manager-(Mobilization, Counseling and job Fairs), State Programme Manager-(Finance & Proposal Examination), State Programme Manager-Pedagogy& Learning Management, State Programme Manager-(PIA Co-Ordination and Development), State Programme Manager -Inspection Quality Assurance & Branding, State Programme Manager-(IT& Biometrics), State Programme Manager-Co-ordination on Outsource basis for Sanjeevini-Karnataka State Rural Livelihood Promotion Society, Department of Skill Development, Entrepreneurship &Livelihood, Govt of Karnataka.
The details of the Post, Qualification & Experience is available on the website https://jobsksrlps.karnataka.gov.in. Interested candidates may register and submit their resumes/ details through the said website, on or before 30.10.2022 @ 5.30 pm
Ph: 080- 23218970

WANTED
Admin, HR Manager, Computer operator and Accountant's to work in
Poojyaya Security Services
@ R T Nagar, Bangalore
contact @
raghu_sgr2@yahoo.co.in
poojyaya2005@gmail.com
9844006744

EXCLUSIVELY FOR Retired, Sr.Citizens, VRS, Pensioner's, Homemaker's & Entrepreneurs. Opportunity to Earn Income upto 1.5 Lac p.m. Contact:- 9972488230/ 9972580339

Accounts & Finance

REQUIRED: SENIOR ACCOUNTS EXECUTIVE with 2-5 years experience for Company in Jaynagar 3rd block, Bangalore. Salary: 25-30k. Call- 9901392058, 7259277726. Mail: shrilakshmik7@gmail.com

Multiple Vacancy

IMMEDIATE APPOINTMENT HRD,Administration, Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Teachers/ Professors

REQUIRED SOCIAL and PE TEACHER for High School. Contact: ROYAL PUBLIC SCHOOL. Jnanabharathi. Phone: 8867569333

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Marketing & Sales

WANTED SALES Executives (M/F) Good Communication Skills, PU/Degree for Retail Showroom Koramangala. 9945083900, 9731028676.

RENTAL PROPERTIES

Accommodation Available

Commercial

OFFICE FOR RENT: 5000 Sqft. on First Floor, Fully Furnished with A/c.+ Generator on Airport Road, Gokul Road, HUBBALLI. Genuine Parties Contact 9448058896/ 7483008018

REAL ESTATE SELLING

Sites

Vijayanagar

PROPERTY FOR sale on Service Road, 17th cross, Vijayanagar, Bangalore Size 60*90. Prime Location. Contact: Sharma- 9449171142

Intl Airport Road

BIAAPA APPROVED SITES SALE TELECOM LAYOUT PHASE-1 500 METRES FROM STONE HILL INTERNATIONAL SCHOOL 7337616557.

BUSINESS

Business to Business

Financial Services

LOANS AVAILABLE against properties (mortgage, purchase, personal loans) preferred direct owners. Interested Please contact: 8296092609.

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

CHANGE OF NAME
I, **Adi Venkateshwarlu Lakshmikanth**, Residing at #S/4, Jana Jeeva Enclave, Thimmareddy Layout, Kaggadasapura, Bangalore-93, have changed my name to **AVIUKU VENKATESHWARLU LAKSHMIKANTH**, vide affidavit dated 19.10.2022, before notary C. Sasikala, Bangalore.

CHANGE OF NAME
I, **SHARMILA DASS @ A SHERMILA MARY MARGARET**, Residing at Flat No. 2, YafaZircon, 92 KSFC Layout, 9th cross, AA1 Mata Temple Road, Lingarajapuram, Bengaluru 560084, declare that both the names pertain to me and henceforth I shall be known as **SHARMILA DASS** only vide affidavit dated 14.10.2022 before Notary Uday Kumar K., Bangalore.

SUKHE SINGH, JC682040H, SUB, Vill- Shekhpur Garhwa, Lakhaoti, Bulandshahr, Uttar Pradesh, changed Son's name SAURABH KUMAR to SOURABH KUMAR, 18/10/2022, Notary K.V. Mani Bangalore

CHANGE OF NAME
I, **MUJEEB BASHA MOHAMED** Residing at No. 268, 6th Cross, Oil Mill Road, Lingarajapuram, Bangalore North, Bangalore-560084, have changed my name to **MUJEEB BASHA,** vide affidavit dated 30.09.2022, before notary M. Rajendra, Bangalore.

SUKHE SINGH, JC682040H, SUB, Vill- Shekhpur Garhwa, Lakhaoti, Bulandshahr, Uttar Pradesh, changed Son's name BIPIN KUMAR to VIPIN KUMAR, 18/10/2022, Notary K.V. Mani Bangalore

I, CHAMUNDAMMA w/o Mohanraj 35 years residing at #131/1 Govindashetty palya, Electronic City post Bangalore-100. have changed my name to Kavitha vide affidavit dated 11.08.2022 sworn before notary Narayanareddy Bangalore

I, GADDIGAPPA HEGGADE, aged 47 years, S/o. Yomakeswrappa, residing at No.32, 8th Cross, Laxmi Layout, Munnekolala, Bangalore-560037. have changed my father's name from ONKESHAPPA to YOMAKESWRAPPA vide Affidavit dated 17/10/2022 sworn before Advocate and Notary C.V. Earappa, Bangalore

DH DECCAN HERALD ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU ON FRIDAY + SATURDAY + SUNDAY
@ 1070/-* Per Sqcm Single Column
conditions apply*
For More Details Contact:
9731810277 | 9901641752 | 9886213331 | 9845114560
080- 45557163 | 45557164

ಗುತ್ತಿಗೆದಾರರಿಂದ ನಕಲಿ ಸಹಿ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯ ಕಾಟನ್‌ಪೇಟೆ ವಾರ್ಡ್‌ನ ಘನತ್ಯಾಜ್ಯ ನಿರ್ವಹಣೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಹಿಯನ್ನು ನಕಲಿ ಮಾಡಿರುವ ಸಾರ್ವಜನಿಕ ಶೌಚಾಲಯದ ಗುತ್ತಿಗೆದಾರರಾದ ಶ್ರೀನಿವಾಸ ಹಾಗೂ ಅವರ ಸೋದರ ವಡಿವೇಲು ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಪಶ್ಚಿಮ ವಲಯದ ಕಾಟನ್ ಪೇಟೆ ವಾರ್ಡ್ 120ರಲ್ಲಿ ಬೆಂಗಳೂರು ಒನ್ ಪಕ್ಕದ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯದ ಸ್ವಚ್ಛತಾ ಕೆಲಸವನ್ನು ಶ್ರೀನಿವಾಸ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸುತ್ತಿದ್ದರು. ಶ್ರೀನಿವಾಸ ಹಾಗೂ ಸಹೋದರ ವಡಿವೇಲು ಅವರು ಗಾಂಧಿನಗರ ವಿಭಾಗದ ಘನತ್ಯಾಜ್ಯ ವಿಭಾಗದಲ್ಲಿ ಈ ಹಿಂದೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದ ಇದೀಗ ರಾಣೆಬೆನ್ನೂರು ನಗರಸಭೆಯ ಪೌರಾಯುಕ್ತ ಉದಯ್ ಕುಮಾರ್ ಬಿ. ತಳವಾರ್ ಅವರ ಸಹಿಯನ್ನು ಫೋರ್ಜರಿ ಮಾಡಿದ್ದಾರೆ ಎಂದು ಪಶ್ಚಿಮ ವಲಯ ಜಂಟಿ ಆಯುಕ್ತರು ಸೆ.16ರಂದು ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಶ್ರೀನಿವಾಸ್ ಹಾಗೂ ವಡಿವೇಲು ಅವರು 2020ರ ಜುಲೈನಿಂದ ಡಿಸೆಂಬರ್‌ವರೆಗೆ ಬಿಲ್ ಸಲ್ಲಿಸುವ ಸಂದರ್ಭದಲ್ಲಿ ಹಾಜರಾತಿ ಪುಸ್ತಕಕ್ಕೆ ಎಇಇ ಅವರ ಸಹಿಯನ್ನು ಫೋರ್ಜರಿ ಮಾಡಿದ್ದಾರೆ ಎಂಬುದು ಬೆಳಕಿಗೆ ಬಂದಿದೆ. ಈ ಬಗ್ಗೆ ಉದಯ್‌ಕುಮಾರ್ ಅವರನ್ನು ಸಹಿ ದೃಢೀಕರಣಕ್ಕೆ ಮಾಹಿತಿ ಕೇಳಲಾಗಿದೆ. ಅವರು ಸಹಿ ತಮ್ಮದಲ್ಲ, ನಕಲು ಮಾಡಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಿ ಎಂದು ಹೇಳಿದ್ದಾರೆ. ಇದರಂತೆ ಜಂಟಿ ಆಯುಕ್ತರು ಕ್ರಿಮಿನಲ್ ಪ್ರಕರಣ ದಾಖಲಿಸಲು ಪಶ್ಚಿಮ ವಲಯದ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸ್ವಪ್ನ ಹಾಗೂ ಅಧೀಕ್ಷಕ ಎಂಜಿನಿಯರ್ ಸ್ವಯಂಪ್ರಭ ಅವರಿಗೆ 2021ರ ಅ.10ರಂದು ಸೂಚಿಸಿದ್ದಾರೆ. ಅವರು ತಡ ಮಾಡಿದ್ದು, ಅವರಿಗೆ ಮತ್ತೆ ಆ.3ರಂದು ನೋಟಿಸ್ ಜಾರಿ ಮಾಡಲಾಗಿದೆ. ನಂತರ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

‘ನಕಲಿ ಸಹಿ ಮಾಡಿರುವ ಪ್ರಕರಣದಂತೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರಿಗೆ ಸೂಚಿಸಲಾಗಿತ್ತು. ಅವರು ಸ್ವಲ್ಪ ತಡ ಮಾಡಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ’ ಎಂದು ಪಶ್ಚಿಮ ವಲಯದ ಜಂಟಿ ಆಯುಕ್ತ ಯೋಗೇಶ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಫಲಿತಾಂಶ ಪ್ರಕಟ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಸೆ.22ರಿಂದ ಅ.17ರವರೆಗೆ ನಡೆಸಿದ್ದ ಪದವಿಯ 4 ಮತ್ತು 6ನೇ ಸೆಮಿಸ್ಟರ್‌ಗಳ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿದೆ.

ಜತೆಗೆ, ಬಿಸಿಎ 6ನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಸಹ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.in ವೀಕ್ಷಿಸಬೇಕು ಎಂದು ಕುಲಸಚಿವ (ಮೌಲ್ಯಮಾಪನ) ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಶುಕ್ಲಯಜುಃಶಾಖಾ ಟ್ರಸ್ಟ್‌ನಿಂದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ ಮತ್ತು ಉನ್ನತ ವ್ಯಾಸಂಗದಲ್ಲಿ ಶೇ 85ರಷ್ಟು ಅಂಕ ಗಳಿಸಿದ ಅರ್ಹ ಬ್ರಾಹ್ಮಣ ಶುಕ್ಲಯಜುರ್ವೇದ ವಿದ್ಯಾರ್ಥಿಗಳು ಅಕ್ಟೋಬರ್ 28ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 080 26677055 ಸಂಪರ್ಕಿಸಿ.



Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; Website: www.honda2wheelersindia.com; Customer Care: customercare@honda2wheelersindia.com

#ಪ್ರಸ್ತಾಪಿಸಿದ ಕ್ಯಾಶ್‌ಬ್ಯಾಕ್ ರೂ. 30000 ವಹಿವಾಟಿನ ಮೇಲೆ ರೂ. 5000 ವರೆಗೆ 5% ಕ್ಯಾಶ್‌ಬ್ಯಾಕ್ ಆಗಿದ್ದು (ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ ರೂ. 40000) ಕೊಡುಗೆ ಅವಧಿಯಲ್ಲಿ ಒಮ್ಮೆ ಪ್ರತಿ ಕಾರ್ಡ್‌ಗೆ ಕಾರ್ಡ್ ವಿತರಕರು/ಬ್ಯಾಂಕ್‌ಗಳ ನೀತಿ ಪ್ರಕಾರ ಆಯ್ದ ಕ್ರೆಡಿಟ್ ಕಾರ್ಡ್‌ಗಳ ಮೂಲಕ EMI ವಹಿವಾಟಿನ ಮೇಲೆ ಮಾತ್ರ ಅನ್ವಯಿಸುತ್ತದೆ. ಕೊಡುಗೆ ಅವಧಿಯು 1 ಜುಲೈ 2022ರಿಂದ 31 ಅಕ್ಟೋಬರ್ 2022ರ ವರೆಗೆ ಮಾತ್ರ ಇರುತ್ತದೆ. *ಹಣಕಾಸು ಸ್ಕೀಮ್‌ಗಳು ಆಯ್ದ ಮಾಡೆಲ್‌ಗಳ ಮೇಲೆ ಆಯ್ದ ಗ್ರಾಹಕರ ಪ್ರೊಫೈಲ್‌ಗಳಿಗೆ ಆಯ್ದ ಹಣಕಾಸು ಪಾಲುದಾರರ ಮೂಲಕ ಅವರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಅನ್ವಯಿಸುತ್ತದೆ ಮತ್ತು ನಿಜವಾದ ಡೌನ್ ಪೇಮೆಂಟ್ ಹಣಕಾಸು ಕಂಪನಿ ನೀತಿಗೆ ಬದಲಾಗಬಹುದು. ಹಣಕಾಸು ಸ್ಕೀಮ್‌ಗಳು 31 ಅಕ್ಟೋಬರ್ 2022 ರ ವರೆಗೆ ಆಯ್ದ ಡೀಲರ್‌ಶಿಪ್‌ಗಳಲ್ಲಿ ಮಾತ್ರ ಲಭ್ಯವಿದೆ ಮತ್ತು ಯಾವುದೇ ಪೂರ್ವ ಸೂಚನೆ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದಾಗಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ಕಾಣಿಸುವ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. SIAM ಡೇಟಾ ಪ್ರಕಾರ ಒಂದು ಕೋಟಿ.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; Haiku Honda - **DOMLUR:** 49656565, 9342432156; **INDIRANAGAR:** 9343796289, 080 - 41133737; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 49499299, 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 8105597877, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 9731414444.

For Bulk/Institutional enquiries, please write us at: institutionalsales@honda2wheelersindia.com

ಹೋರಾಟದಲ್ಲೇ ಮೂಡಿದ ನಾಯಕ

● ಅಮೃತ ಕಿರಣ್ ಬಿ.ಎಂ.

‘ಕಾಂಗ್ರೆಸ್ ಈಗ ಇರುವಂತೆಯೇ ಇರಬೇಕು ಎಂದಿದ್ದರೆ, ಖರ್ಗೆ ಅವರಿಗೆ ಮತ ನೀಡಿ. ಕಾಂಗ್ರೆಸ್ ಬದಲಾಗಬೇಕು ಎಂದಿದ್ದರೆ ನನಗೆ ಮತ ನೀಡಿ’ ಎಂದು ಶಶಿ ತರೂರ್ ಹೇಳಿದ್ದರು. ಖರ್ಗೆ ಅವರು ಕಾಂಗ್ರೆಸ್ ಅಧ್ಯಕ್ಷರಾಗುವುದರಿಂದ ಪಕ್ಷದಲ್ಲಿ ಯಾವುದೇ ಬದಲಾವಣೆ ಸಾಧ್ಯವಿಲ್ಲ ಎಂಬುದು ಅವರ ಮಾತಿನ ಧ್ವನಿಯಾಗಿತ್ತು. ಆದರೆ, ಖರ್ಗೆ ಅವರ ರಾಜಕೀಯ ಜೀವನವನ್ನು ಗಮನಿಸಿದವರಿಗೆ ತರೂರ್ ಅವರ ಮಾತು ಉತ್ಪ್ರೇಕ್ಷೆ ಎನಿಸದೆ ಇರಲಾರದು.

ಹಿಂದುಳಿದ ಸಮುದಾಯಗಳ ಕಣ್ಮಣಿ ಎನಿಸಿದ್ದ ಮುಖ್ಯಮಂತ್ರಿ ದೇವರಾಜ ಅರಸು ಅವರ ಬಳಿಕ ರಾಜ್ಯದ ದಲಿತ ಚಿಂತನೆಯ ಪ್ರಖರ ಕಿರಣವಾಗಿ ಕಾಣಿಸುವುದು ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು. ಬೀದರ್‌ನ ವರವಟ್ಟಿ ಬಿ ಗ್ರಾಮದ ದಲಿತ ಕುಟುಂಬದಲ್ಲಿ 1942ರಲ್ಲಿ ಖರ್ಗೆ ಜನಿಸಿದರು. ತಂದೆ ಮಾಪಣ್ಣ ಅವರು ಎಂಎಸ್‌ಕೆ ಮಿಲ್‌ನಲ್ಲಿ ಕೆಲಸ ಮಾಡಿ ಮಗನನ್ನು ಓದಿಸಿದರು. ಪ್ರೌಢಶಾಲೆಯಲ್ಲಿ ಓದುವಾಗ ಮಿಲ್ ಮಾಲೀಕನ ಮಗನಿಗೆ ಪ್ರತ್ಯೇಕ ಮಣೆ ಹಾಕಿಸಿದ್ದನ್ನು ಖರ್ಗೆ ವಿರೋಧಿಸಿದ್ದರು. ಅವರಲ್ಲಿ ಅಸಮಾನತೆ ವಿರುದ್ಧ ಹೋರಾಟದ ಕಿಡಿ ಹೊತ್ತಿದ್ದು ಅಲ್ಲಿಂದಲೇ.

ಕ್ರೀಡೆಯಲ್ಲಿ ಮುಂಚೂಣಿಯಲ್ಲಿದ್ದ ಅವರು, ಹಾಕಿ, ಖೋಖೋ, ಕಬ್ಬಡ್ಡಿ ಪಂದ್ಯಗಳಲ್ಲಿ ತಂಡದ ನಾಯಕತ್ವ ವಹಿಸಿಕೊಂಡಿದರು. ನಾಯಕತ್ವ ಗುಣ ಮೈಗೂಡಿಸಿಕೊಳ್ಳಲು ಬಿಎ ಪದವಿಯ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆ ಅಡಿಗಲ್ಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದ ಅವರು, ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕೊಡಿಸುವಲ್ಲಿ ಮುಂದಿದ್ದರು. ವಾಕ್ಪಟು ಆಗಿ ಗಮನ ಸೆಳೆದರು. ಕಾಲೇಜಿನಲ್ಲಿ ಡಾ. ಅಂಬೇಡ್ಕರ್ ಚಿಂತನೆಗಳು ಅವರಲ್ಲಿ ಪ್ರೇರಣೆ ಮೂಡಿಸಿದವು. ಕಾನೂನು ಪದವಿ ಪಡೆದ ಅವರ ಒಲವು, ದಮನಿತ ನೆಲೆಯ ಸಂಘಟನೆಗಳತ್ತ ಹೊರಳಿತು. ದಲಿತೋದ್ಧಾರದ ಕನಸಿನೊಂದಿಗೆ ವಕೀಲಿಕೆ ಆರಂಭಿಸಿದರು.

ಭೀಮಸೇನೆಯನ್ನು ಕಟ್ಟಿದ ಬಿ. ಶ್ಯಾಮಸುಂದರ್, ಶಿವರಾಮ ಮೋಘಾ ಜತೆಗೂಡಿ ಹಳ್ಳಿಹಳ್ಳಿ ಸುತ್ತಿ ಅಂಬೇಡ್ಕರ್ ಚಿಂತನೆಗಳನ್ನು ಪ್ರಚಾರ ಮಾಡಿದರು. ಕಲಬುರಗಿಯಲ್ಲಿ ನಡೆದ ಭೂಚಳವಳಿಯ ಭಾಗವಾಗಿದ್ದರು. ಇಂತಹ ಹಲವು ಹೋರಾಟಗಳು ಅವರ ನಾಯಕತ್ವಕ್ಕೆ ಸಾಣೆ ಹಿಡಿದವು. ಅಂಬೇಡ್ಕರ್ ಕನಸುಗಳನ್ನು ಜಾರಿಗೆ ತರುವ ಉದ್ದೇಶದಿಂದ ರಾಜಕೀಯ ಪಕ್ಷ ಸೇರುವ ನಿರ್ಧಾರ ಮಾಡಿ, ಕಾಂಗ್ರೆಸ್ ಸೇರಿದರು.

ಖರ್ಗೆಯವರ ಚುನಾವಣಾ ರಾಜಕೀಯ ಶುರುವಾಗಿದ್ದು ಕಾಂಗ್ರೆಸ್ ಇಬ್ಭಾಗವಾದ ಬಳಿಕ. ಇಂದಿರಾ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಖರ್ಗೆ ಅವರಿಗೆ ಗುರುಮಿಟಕಲ್ ವಿಧಾನಸಭಾ ಕ್ಷೇತ್ರದ ಟಿಕೆಟ್ ಸಿಕ್ಕಿತು. ಸಂಸ್ಥಾ ಕಾಂಗ್ರೆಸ್‌ನ ಘಟಾನುಘಟಿಗಳ ಜೊತೆ ಸೆಣಸುವ ಸವಾಲಿತ್ತು. ಆದರೆ, ಕ್ಷೇತ್ರದ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಬೆನ್ನಿಗೆ ನಿಂತಿದ್ದರಿಂದ ಮೀಸಲು ಕ್ಷೇತ್ರದಲ್ಲಿ ಖರ್ಗೆ ತಮ್ಮ ಮೊದಲ ಚುನಾವಣಾ ಗೆಲುವು ದಾಖಲಿಸಿದರು. ಅಲ್ಲಿಂದ ಅವರು ಹಿನ್ನಡೆ ಅನುಭವಿಸಿದ್ದು ಕಡಿಮೆಯೇ. ದೇವರಾಜ ಅರಸು ಅವರು, ಶಿಕ್ಷಣ ಖಾತೆ ನೀಡಿದರು. ಹಿಂದುಳಿದ ಸಮುದಾಯಗಳು ಶೈಕ್ಷಣಿವಾಗಿ ಬೆಳೆಯಲು ಅಡಿಪಾಯ ಹಾಕಿದರು. ಪರಿಶಿಷ್ಟರು ಶಿಕ್ಷಣ ಸಂಸ್ಥೆ ಸ್ಥಾಪಿಸಲು ಇದ್ದ ಕಠಿಣ ನಿಯಮಗಳನ್ನು ಸರಳಗೊಳಿಸಿದರು.

ಗುಂಡೂರಾವ್ ಹಾಗೂ ಬಂಗಾರಪ್ಪ ಅವರ ಸರ್ಕಾರಗಳ ಅವಧಿಯಲ್ಲೂ ಹಿಂದುಳಿದವರ ಪರ ಕೆಲಸ ನಿಲ್ಲಲಿಲ್ಲ. ಕಂದಾಯ ಇಲಾಖೆಗೆ ಸೇರಿದ ಸಾವಿರಾರು ಎಕರೆ ಜಮೀನಿನ ಒಡೆತನದ ಹಕ್ಕನ್ನು ಪರಿಶಿಷ್ಟರಿಗೆ ದೊರಕಿಸಿದರು. 300ಕ್ಕೂ ಹೆಚ್ಚು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ, ಸೌಲಭ್ಯಗಳನ್ನು ಒದಗಿಸಿದ್ದರು. ಸಾವಿರಾರು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿದರು. ಬ್ಯಾಂಕ್‌ಗಳಿಂದ ಪರಿಶಿಷ್ಟರು ಸಾಲ ಪಡೆಯುವುದು ಸಾಧ್ಯವೇ ಇಲ್ಲ ಎಂಬಂತಿದ್ದ ಪರಿಸ್ಥಿತಿಯನ್ನು ಬದಲಿಸಿದರು. ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ದಲಿತರಿಗೆ ಪ್ರಾತಿನಿಧ್ಯ ಕಲ್ಪಿಸಿಕೊಟ್ಟರು. ಕೈಗಾರಿಕಾ ಖಾತೆ ಸಚಿವರಾಗಿ ರಾಜ್ಯದಲ್ಲಿ ಕೈಗಾರಿಕೆಗಳನ್ನು ಪೋಷಿಸಿದರು.

1999ರಲ್ಲಿ ಪಕ್ಷ ಅಧಿಕಾರಕ್ಕೆ ಬಂದಾಗ ಖರ್ಗೆ ಅವರು ಮುಖ್ಯಮಂತ್ರಿಯಾಗುತ್ತಾರೆ ಎಂಬ ಆಸೆ ಚಿಗುರೊಡೆದಿತ್ತು. ಆದರೆ ಅವರು ಗೃಹಸಚಿವ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. 2005ರಲ್ಲಿ ಪಕ್ಷದ ರಾಜ್ಯ ಘಟಕದ ಚುಕ್ಕಾಣಿ ಹಿಡಿದ ಅವರು ಕ್ಷೇತ್ರ ಮರುವಿಂಗಡಣೆ ಬಳಿಕ ಚಿತ್ತಾಪುರ ಕ್ಷೇತ್ರದಿಂದ ಸ್ಪರ್ಧಿಸಿ ಸತತ 9ನೇ ಬಾರಿ ವಿಧಾನಸಭೆಯನ್ನು ಪ್ರವೇಶಿಸಿ ಸೋಲಿಲ್ಲದ ಸರದಾರ ಎನಿಸಿಕೊಂಡರು. ವರಿಷ್ಠರ ಆಜ್ಞೆಯನ್ನು ಚಾಚೂತಪ್ಪದೆ ಪಾಲಿಸುವ ಅವರು, 2009ರಲ್ಲಿ ಕಲಬುರಗಿ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ರಾಷ್ಟ್ರ ರಾಜಕಾರಣಕ್ಕೆ ಅಡಿಯಿಟ್ಟರು. ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಪಕ್ಷದ ನೇತೃತ್ವ ವಹಿಸಿ ಬಿಜೆಪಿ ಸರ್ಕಾರಕ್ಕೆ ಚಾಟಿ ಬೀಸಿದರು. ತಮ್ಮ 80ನೇ ವಯಸ್ಸಿನಲ್ಲಿ ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಡ ಬಂದಾಗ, ಎಂದಿನಂತೆ ಶಿರಸಾವಹಿಸಿ ಪಾಲಿಸಿದ್ದಾರೆ. ಸತತ 50 ವರ್ಷಗಳಿಂದ ಪಕ್ಷವನ್ನು ಬದಲಿಸದೇ ನಿಷ್ಠೆಯಿಂದ ಕೆಲಸ ಮಾಡಿದ ಖರ್ಗೆ ಅವರಿಗೆ ಈಗ ಅದರ ಸಾರಥ್ಯ ಸಿಕ್ಕಿದೆ.

ರೈಲ್ವೆ ಸಚಿವರಾಗಿದ್ದಾಗ ರಾಜ್ಯಕ್ಕೆ ಹೆಚ್ಚು ಕೊಡುಗೆ ನೀಡಿಲ್ಲ, ಕಲಬುರಗಿಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿಲ್ಲ ಎಂಬ ಟೀಕೆಗಳು ಖರ್ಗೆ ವಿರುದ್ಧ ಕೇಳಿಬರುತ್ತವೆ. ಈಗ ಸೋನಿಯಾ ಗಾಂಧಿ ಕುಟುಂಬದ ಕೈಗೊಂಬೆ ಆಗಲಿದ್ದಾರೆ ಎಂಬ ಟೀಕೆಯೂ ಇದೆ. ಈ ಟೀಕೆಯನ್ನು ಮೀರುವ ದೊಡ್ಡ ಸವಾಲು ಖರ್ಗೆ ಅವರ ಮುಂದೆ ಇದೆ.

ಆಧಾರ: ಪ್ರೊ.ಎಚ್‌.ಟಿ. ಪೋತೆ ಅವರ ‘ಬಾಬಾ ಸಾಹೇಬರೆಡೆಗೆ ಖರ್ಗೆ ಜೀವನಕಥನ’ ಪುಸ್ತಕ, ಪಿಟಿಐ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಿವೃತ್ತಿ ಉಪದಾನ 2006 ಏಪ್ರಿಲ್ 1 ರಿಂದಲೇ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ಮರಣ ಮತ್ತು ನಿವೃತ್ತಿ ಉಪದಾನ (ಡಿಸಿಆರ್‌ಜಿ) ಸೌಲಭ್ಯವನ್ನು 2006 ಏಪ್ರಿಲ್ 1ರಿಂದಲೇ ಅನ್ವಯವಾಗುವಂತೆ ಜಾರಿಗೊಳಿಸಿ ರಾಜ್ಯ ಸರ್ಕಾರ ಬುಧವಾರ ಆದೇಶವನ್ನು ಹೊರಡಿಸಿದೆ.

2018ರ ಜೂನ್ 23ರಂದು ಹೊರಡಿದ್ದ ಆದೇಶದಲ್ಲಿ 2018ರ ಏಪ್ರಿಲ್ 1ರಿಂದ ಜಾರಿಗೊಳಿಸಿ ಆದೇಶ ಹೊರಡಿಸಲಾಗಿತ್ತು. ಆ ಆದೇಶವನ್ನು ಪರಿಷ್ಕರಿಸಲಾಗಿದೆ. ಇದೀಗ 2006ರಿಂದಲೇ ವಿಸ್ತರಿಸಿರುವ ಸೌಲಭ್ಯವನ್ನು ಇತ್ಯರ್ಥಪಡಿಸಲು ಪ್ರತ್ಯೇಕ ಮಾರ್ಗಸೂಚಿಯನ್ನೂ ಹೊರಡಿಸಲಾಗಿದೆ.

‘ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ನಿರಂತರ ಹೋರಾಟದ ಫಲವಾಗಿ ಸರ್ಕಾರ ಈ ಆದೇಶ ಹೊರಡಿಸಿದೆ. ಆದರೆ, ಹಳೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ.

ಡಿಸೆಂಬರ್ 19ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾಡು ಇಲ್ಲವೆ ಮಡಿ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಳ್ಳಲಾಗಿದೆ’ ಎಂದು ಸಂಘದ ಅಧ್ಯಕ್ಷ ಶಾಂತರಾಮ ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಹಾಲು ದರ ಹೆಚ್ಚಳಕ್ಕೆ ಒಕ್ಕೂಟಗಳ ಮನವಿ: ಸೋಮಶೇಖರ್

ಬೆಂಗಳೂರು: ಹಾಲಿನ ದರ ಹೆಚ್ಚಿಸಬೇಕು ಎಂದು 15 ಹಾಲು ಒಕ್ಕೂಟಗಳು ಮನವಿ ಮಾಡಿವೆ ಎಂದು ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ಹೇಳಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದರವನ್ನು ಹೆಚ್ಚಿಸಿದರೆ ರೈತರಿಗೆ ಹಣ ವರ್ಗಾಯಿಸುವುದಾಗಿ ಸಂಘಗಳು ತಿಳಿಸಿವೆ ಎಂದರು.

‘ಯಾವುದೇ ಕಾರಣಕ್ಕೂ ಹಾಲಿನ ದರ ಹೆಚ್ಚಿಸಬಾರದು ಎಂದು ಗ್ರಾಹಕರು ಒತ್ತಡ ಹಾಕುತ್ತಿದ್ದಾರೆ. ಈ ವಿಷಯದ ಬಗ್ಗೆ ಮುಖ್ಯಮಂತ್ರಿಯವರ ಜತೆ ಚರ್ಚಿಸುತ್ತೇನೆ. ಹಾಲು ಒಕ್ಕೂಟಗಳ ಮನವಿಯ ವಿಚಾರ ಮುಖ್ಯಮಂತ್ರಿಯವರ ಗಮನದಲ್ಲಿದ್ದು, ಸೂಕ್ತ ಸಮಯದಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಿದ್ದಾರೆ ಎಂದು ಒಕ್ಕೂಟಗಳಿಗೆ ಭರವಸೆ ನೀಡಿದ್ದೇನೆ’ ಎಂದು ಹೇಳಿದರು.

ಸಹಕಾರ ಸಪ್ತಾಹ: 69 ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಲಬುರಗಿಯಲ್ಲಿ ನ.14 ರಿಂದ 20 ರವರೆಗೆ ನಡೆಯಲಿದ್ದು, ‘ಭಾರತ 75 ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಮುಂದಿನ ಭವಿಷ್ಯ’ ಈ ಬಾರಿಯ ಘೋಷ ವಾಕ್ಯವಾಗಿದೆ ಎಂದು ಸೋಮಶೇಖರ್ ಹೇಳಿದರು.

ನ 14 ರಂದು ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಅದೇ ದಿನ ಹಿರಿಯ ಸಹಕಾರಿಗಳಿಗೆ ‘ಸಹಕಾರ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಗುವುದು. ನ. 20 ರಂದು ಮೈಸೂರಿನಲ್ಲಿ ಸಮಾರೋಪ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

‘ಮುಳುಗುವ ಹಡಗಿಗೆ ಖರ್ಗೆ ನಾಯಕತ್ವ ಒಪ್ಪಲಾಗದು: ಬಸವರಾಜ ಬೊಮ್ಮಾಯಿ

ಕಲಬುರಗಿ: ‘ದೇಶದಲ್ಲಿ ಕಾಂಗ್ರೆಸ್ ಮುಳುಗುತ್ತಿರುವ ಹಡಗು. ದುರ್ದೈವದ ಸಂಗತಿ ಎಂದರೇ ನಮ್ಮ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಂತಹ ಸಂದರ್ಭದಲ್ಲಿ ಪಕ್ಷದ ಅಧ್ಯಕ್ಷ ಸ್ಥಾನ ಕೊಟ್ಟಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಮಲಾಪುರ ತಾಲ್ಲೂಕಿನ ಮಹಾಗಾಂವನಲ್ಲಿ ಬುಧವಾರ ನಡೆದ ಜನಸಂಕಲ್ಪ ಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪಕ್ಷ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ಕೊಟ್ಟಿದ್ದರೆ ನಾವೂ ಒಪ್ಪಿಕೊಳ್ಳುತ್ತಿದ್ದೆವು. ಇಂತಹ ಸ್ಥಿತಿಯಲ್ಲಿ ಕರ್ನಾಟಕದ ನಾಯಕರೊಬ್ಬರಿಗೆ ನಾಯಕತ್ವ ಕೊಟ್ಟದ್ದನ್ನು ನಾವು ಒಪ್ಪಿಕೊಳ್ಳುವುದಿಲ್ಲ’ ಎಂದರು.

ಇದಕ್ಕೂ ಮುನ್ನ ಹುಣಸಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಭಾಗದ ಬಹುದೊಡ್ಡ ನಾಯಕರೊಬ್ಬರು ಅಧಿಕಾರ ಅನುಭವಿಸಿದರು. ರಾಜ್ಯ ಮತ್ತು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದರು. ಆಯಕಟ್ಟಿನ ಸ್ಥಾನದಲ್ಲಿದ್ದರು. ಆದರೂ ಕಾಂಗ್ರೆಸ್‌ನಿಂದ ಈ ಭಾಗದಲ್ಲಿ ಅಭಿವೃದ್ಧಿ ಆಗಿಲ್ಲ’ ಎಂದು ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಪ್ರಸ್ತಾಪಿಸದೇ ಹೇಳಿದರು.



ಬುದ್ಧ, ಬಸವ, ಅಂಬೇಡ್ಕರ್ ತತ್ವಗಳನ್ನು ಪಾಲಿಸುವ ನಾಯಕ
‘ಖರ್ಗೆ ಸಾಬ್’ಗೆ ಒಲಿದ ಅಧ್ಯಕ್ಷ ಹುದ್ದೆ

● ಮನೋಜಕುಮಾರ್ ಗುದ್ದಿ

ಕಲಬುರಗಿ: ಉರ್ದು ಮಿಶ್ರಿತ ಕನ್ನಡದಲ್ಲಿ ಮಾತನಾಡುವ ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಮತ್ತು ಯಾದಗಿರಿ ಸೀಮೆಯಲ್ಲಿ ಅಪಾರ ಬೆಂಬಲಿಗರು, ಪಕ್ಷದ ಕಾರ್ಯಕರ್ತರು ಮತ್ತು ಸಾರ್ವಜನಿಕರು ‘ಖರ್ಗೆ ಸಾಬ್ (ಸಾಹೇಬ)’ ಎಂದೇ ಕರೆಯುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೇಶದ ಅತ್ಯಂತ ಹಳೆಯ ರಾಜಕೀಯ ಪಕ್ಷ ಕಾಂಗ್ರೆಸ್‌ನ ಅಧ್ಯಕ್ಷ ಹುದ್ದೆ ಒಲಿದಿದೆ.

ಸದಾ ಗಂಭೀರ ಮುಖಮುದ್ರೆಯ ಖರ್ಗೆ ಅವರು ಒಮ್ಮೊಮ್ಮೆ ಲಹರಿಯಲ್ಲಿದ್ದಾಗ ಹಲವು ರಸಪ್ರಸಂಗಗಳನ್ನು ಆಲಿಸುವುದೇ ಸೊಗಸು. ಅದರಲ್ಲೂ ಅವರು ಉರ್ದು ಭಾಷೆಯಲ್ಲಿ ಆಡುವ ಮಾತುಗಳನ್ನು ಕೇಳುವುದೇ ಚಂದ.

ಬುದ್ಧ, ಬಸವ, ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವಗಳನ್ನು ಪಾಲಿಸುವ ಅವರು ಕಲಬುರಗಿಯಲ್ಲಿ ಬುದ್ಧ ವಿಹಾರ ಸ್ಥಾಪಿಸಿ, ಬುದ್ಧನ ಚಿಂತನೆಗಳನ್ನು ಪಸರಿಸಿದ್ದಾರೆ. ಪ್ರತಿ ವರ್ಷ ಬುದ್ಧ ಪೂರ್ಣಿಮೆಗೆ ಅವರು ಪತ್ನಿ ರಾಧಾಬಾಯಿ ಖರ್ಗೆ ಜೊತೆಗೆ ಬುದ್ಧ ವಿಹಾರಕ್ಕೆ ಬಂದು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಾರೆ.

ಕೌಟುಂಬಿಕ ಹಿನ್ನೆಲೆ: ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ವರವಟ್ಟಿ ಗ್ರಾಮದ ಖರ್ಗೆ ಅವರ ತಂದೆ ಮಾಪಣ್ಣ ಅವರು ಕಲಬುರಗಿಯ ಅಂದಿನ ಪ್ರಸಿದ್ಧ ಬಟ್ಟೆ ಗಿರಣಿಯಾದ ಎಂಎಸ್‌ಕೆ ಮಿಲ್‌ನಲ್ಲಿ ಕಾರ್ಮಿಕರಾಗಿದ್ದರು. ಹೀಗಾಗಿ, ಖರ್ಗೆ ಅವರೂ ತಮ್ಮ ಶಾಲಾ, ಕಾಲೇಜು ಶಿಕ್ಷಣವನ್ನು ಕಲಬುರಗಿಯಲ್ಲಿ ಪೂರೈಸಿದರು. ಕಾರ್ಮಿಕ ನಾಯಕರಾಗಿ, ವಿದ್ಯಾರ್ಥಿ ನಾಯಕರಾಗಿ ವ್ಯಕ್ತಿತ್ವ ರೂಪಿಸಿಕೊಂಡರು.

ಇಂದಿರಾಗಾಂಧಿ ಮತ್ತು ಡಿ. ದೇವರಾಜ ಅರಸು ಅವರೊಂದಿಗೆ ಮಲ್ಲಿಕಾರ್ಜುನ ಖರ್ಗೆ (ಸಂಗ್ರಹ ಚಿತ್ರ)

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 371 (ಜೆ) ಕಲಂ ಅನುಷ್ಠಾನಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಚಿವರಾಗಿ ಪ್ರಮುಖ ಪಾತ್ರ ವಹಿಸಿದರು. ಸಚಿವರು ಮತ್ತು ಶಾಸಕರಾಗಿ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸಿದರು ಎಂದು ಕಾಂಗ್ರೆಸ್ ನಾಯಕರು ಹೇಳುತ್ತಾರೆ.

ಅಪಾರ ಓದು, ವಿದ್ವತ್ತಿನ ಮಿತಭಾಷಿ: ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ಮಲ್ಲಿಕಾರ್ಜುನ ಖರ್ಗೆ ಅವರು ನಿತ್ಯ ದಿನಪತ್ರಿಕೆಗಳು, ನಿಯತಕಾಲಿಕೆಗಳನ್ನು ಓದುತ್ತಾರೆ. ಪ್ರಯಾಣದಲ್ಲಿ ಯಾವಾಗಲೂ ಓದಲು ಪುಸ್ತಕಗಳನ್ನು ಜೊತೆಯಾಗಿ ಇರಿಸಿಕೊಳ್ಳುವ ಅವರು ಭಾಷಣಗಳಲ್ಲಿ ಇಂಗ್ಲಿಷ್ ಸಾಹಿತಿಗಳ ಬರಹಗಳನ್ನು ಉದಾಹರಿಸುತ್ತಾರೆ ಮತ್ತು ಆಪ್ತಮಿತ್ರ ದಿ. ಎನ್. ಧರ್ಮಸಿಂಗ್ ಅವರಂತೆ ಉರ್ದು ಭಾಷೆ ಮಾತನಾಡುತ್ತಾರೆ.

ದೀಪಾವಳಿ: ಮುಜರಾಯಿ ದೇವಸ್ಥಾನಗಳಲ್ಲಿ ಗೋಪೂಜೆ ಸಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿಯ ಪ್ರಯುಕ್ತ ಬಲಿಪಾಡ್ಯಮಿಯಂದು ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಎಲ್ಲ ದೇವಾಲಯಗಳಲ್ಲಿ ಗೋಪೂಜೆ ನೆರವೇರಿಸುವಂತೆ ಧಾರ್ಮಿಕ ದತ್ತಿ ಆಯುಕ್ತರು ಮಂಗಳವಾರ ಸುತ್ತೋಲೆ ಹೊರಡಿಸಿದ್ದಾರೆ.

2021ರಲ್ಲೂ ದೀಪಾವಳಿಯ ಬಲಿಪಾಡ್ಯಮಿಯಂದು ಗೋಪೂಜೆ ನೆರವೇರಿಸಲಾಗಿತ್ತು. ಅದೇ ಮಾದರಿಯಲ್ಲಿ ಈ ವರ್ಷದ ದೀಪಾವಳಿಯ ಬಲಿಪಾಡ್ಯಮಿ ದಿನವಾದ ಅಕ್ಟೋಬರ್ 26ರಂದು ಎಲ್ಲ ಅಧಿಸೂಚಿತ ದೇವಾಲಯಗಳಲ್ಲಿ ಶಾಸ್ತ್ರೋಕ್ತವಾಗಿ ಗೋಪೂಜೆ ನೆರವೇರಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಆ ದಿನ ಸಂಜೆ 5.30ರಿಂದ 6.30ರವರೆಗೆ ಗೋಧೂಳಿ ಲಗ್ನದಲ್ಲಿ ಗೋಪೂಜೆ ನೆರವೇರಿಸಬೇಕು. ಗೋವುಗಳನ್ನು ಸ್ನಾನ ಮಾಡಿಸಿ ದೇವಸ್ಥಾನಕ್ಕೆ ಕರೆತಂದು ಅರಿಶಿನ, ಕುಂಕುಮ, ಹೂವುಗಳಿಂದ ಅಲಂಕರಿಸಬೇಕು. ಅಕ್ಕಿ, ಬೆಲ್ಲ, ಸಿಹಿ ತಿನಿಸು ಸೇರಿದಂತೆ ಗೋಗ್ರಾಸವನ್ನು ಹಸುವಿಗೆ ನೀಡಿ ಪೂಜಿಸಬೇಕು. ಸಾರ್ವಜನಿಕರು ಗೋಪೂಜೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು ಎಂದು ಸೂಚಿಸಿದ್ದಾರೆ.

ನವದೆಹಲಿಯಲ್ಲಿ ಬುಧವಾರ ಕಾಂಗ್ರೆಸ್‌ನ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪಕ್ಷದ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಅಭಿನಂದಿಸಿದರು. (ಎಡದಿಂದ) ಮಗ ಪ್ರಿಯಾಂಕ್ ಖರ್ಗೆ, ಪತ್ನಿ ರಾಧಾಬಾಯಿ ಖರ್ಗೆ, ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಚಿತ್ರದಲ್ಲಿದ್ದಾರೆ –ಪಿಟಿಐ ಚಿತ್ರ

ಸಿ.ಎಂಗೆ ದಮ್ ಇದ್ದರೆ ತನಿಖೆ ಮಾಡಿಸಲಿ: ಸಿದ್ದರಾಮಯ್ಯ

ಮಂಡ್ಯ: ‘ವಿರೋಧ ಪಕ್ಷದಲ್ಲಿದ್ದಾಗ ಸುಮ್ಮನಿದ್ದ ಬಸವರಾಜ ಬೊಮ್ಮಾಯಿ ಈಗ ಕಾಂಗ್ರೆಸ್ ಅಕ್ರಮಗಳ ಬಗ್ಗೆ ಮಾತನಾಡುತ್ತಿದ್ದಾರೆ. ಅವರಿಗೆ ದಮ್ ಇದ್ದರೆ ತನಿಖೆ ಮಾಡಿಸಲಿ. ಜೊತೆಗೆ ಬಿಜೆಪಿಯ ಶೇ 40 ಕಮಿಷನ್ ಹಗರಣದ ಬಗ್ಗೆಯೂ ತನಿಖೆ ನಡೆಸಲಿ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬೊಮ್ಮಾಯಿ ಅತ್ಯಂತ ದುರ್ಬಲ ಮುಖ್ಯಮಂತ್ರಿ. ಅಕ್ರಮ ನಡೆದಿದೆ ಎಂದು ಗೊತ್ತಾದಾಗ, ವಿರೋಧ ಪಕ್ಷದಲ್ಲಿದ್ದುಕೊಂಡು ಏನು ಮಾಡುತ್ತಿದ್ದರು? ಆಗಲೂ ಮಾತನಾಡಲಿಲ್ಲ; ಈಗ ಬಿಜೆಪಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದರೂ ಮಾತನಾಡುತ್ತಿಲ್ಲ’ ಎಂದು ಆರೋಪಿಸಿದರು.

‘ನನ್ನ ಮಗ ಡಾ.ಯತೀಂದ್ರ ವರುಣಾ ಕ್ಷೇತ್ರ ಬಿಟ್ಟುಕೊಡುವುದಾಗಿ ತಿಳಿಸಿದ್ದಾನೆ. ಕೋಲಾರ, ಕೊಪ್ಪಳ, ಬಾದಾಮಿಯಲ್ಲೂ ಕರೆಯುತ್ತಿದ್ದಾರೆ. ಎಲ್ಲಿ ಸ್ಪರ್ಧಿಸಬೇಕು ಎನ್ನುವುದನ್ನು ಡಿಸೆಂಬರ್‌ನಲ್ಲಿ ನಿರ್ಧರಿಸುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

ಇನ್ನೂ ಎರಡು ದಿನ ಮಳೆ

ಬೆಂಗಳೂರು: ರಾಜ್ಯದಲ್ಲಿ ಇನ್ನೂ ಎರಡು ದಿನ ಮಳೆ ಮುಂದುವರಿಯಲಿದ್ದು, ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಗುರುವಾರ 9 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ರಾಮನಗರ, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಪ್ರಜಾವಾಣಿ @75
ಫೋನ್-ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಸೌಲಭ್ಯಗಳು ಸಕಾಲದಲ್ಲಿ ಸಿಗುತ್ತಿಲ್ಲವೇ?
- ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಯೋಜನೆಗಳು ತಲುಪುತ್ತಿಲ್ಲವೇ?
- ನಿಗಮದ ಸೌಲಭ್ಯಗಳನ್ನು ಪಡೆಯುವಲ್ಲಿ ಮಧ್ಯವರ್ತಿಗಳ ಕಾಟ ಇದೆಯೇ?
- ಎಸ್‌ಟಿ ಅಲೆಮಾರಿ, ಅರೆಅಲೆಮಾರಿ ಪಂಗಡದವರಿಗೆ ಮನೆ ಸಿಗುವಲ್ಲಿ ತೊಂದರೆಯೇ?
- ಭೂ ಒಡೆತನ ಯೋಜನೆಯಡಿ ಭೂಮಿ ಸಿಗುತ್ತಿಲ್ಲವೇ?
- ಗ್ರಾಮೀಣ ಪ್ರದೇಶಗಳಲ್ಲಿ ಸರಿಯಾದ ಸಮಯಕ್ಕೆ ಬಸ್‌ಗಳು ಬರುತ್ತಿಲ್ಲವೇ?

ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ

ಬಿ. ಶ್ರೀರಾಮುಲು, ಸಚಿವರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಸಾರಿಗೆ ಇಲಾಖೆ

ದಿನಾಂಕ: 20.10.2022 ಗುರುವಾರ
ಸಮಯ: ಮಧ್ಯಾಹ್ನ 12.30 ರಿಂದ ಮಧ್ಯಾಹ್ನ 01.30ರವರೆಗೆ
ದೂರವಾಣಿ: 080 45557261

LIVE f/prajavani.net / prajavani

ಕಾಂಗ್ರೆಸ್‌ಗೆ ಮಲ್ಲಿಕಾರ್ಜುನ ಖರ್ಗೆ ಸಾರಥಿ

ಒಂದನೇ ಪುಟದಿಂದ...

ಶಶಿ ತರೂರ್ ಬಣವು 500–800 ಮತಗಳನ್ನು ನಿರೀಕ್ಷೆ ಮಾಡಿತ್ತು. ಆದರೆ, ಅವರು 1,000ಕ್ಕೂ ಹೆಚ್ಚಿನ ಮತ ಗಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಅಕ್ಟೋಬರ್ 22ರಂದು ಕರ್ನಾಟಕದ ರಾಯಚೂರಿನಲ್ಲಿ ‘ಭಾರತ್ ಜೋಡೊ ಯಾತ್ರೆ’ ಸೇರಿಕೊಳ್ಳುವ ನಿರೀಕ್ಷೆಯಿದೆ. ಅವರು ಅಕ್ಟೋಬರ್ 26ರಂದು ಅಧಿಕೃತವಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಪಕ್ಷದ ಮಧ್ಯಂತರ ಅಧ್ಯಕ್ಷೆ ಸೋನಿಯಾ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹಾಗೂ ಇತರ ನಾಯಕರು ನೂತನ ಅಧ್ಯಕ್ಷರ ನಿವಾಸಕ್ಕೆ ಭೇಟಿ ನೀಡಿ ಅಭಿನಂದನೆ ಸಲ್ಲಿಸಿದರು. ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ದೂರವಾಣಿ ಕರೆ ಮಾಡಿ ಶುಭ ಕೋರಿದರು.

ಜಗಜೀವನ್ ರಾಮ್ ಅವರ ನಂತರ ಕಾಂಗ್ರೆಸ್ ಅಧ್ಯಕ್ಷರಾಗುತ್ತಿರುವ ಎರಡನೇ ದಲಿತ ನಾಯಕ ಖರ್ಗೆ ಅವರು. ಆಸಕ್ತಿಕರ ವಿಶೇಷವೆಂದರೆ, 1969ರಲ್ಲಿ ಜಗಜೀವನ್ ರಾಮ್ ಅವರು ಪಕ್ಷದ ಅಧ್ಯಕ್ಷರಾದ ವರ್ಷವೇ ಖರ್ಗೆ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಆಗ ಅವರು, ಗುಲ್ಬರ್ಗ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. 9 ಬಾರಿ ಶಾಸಕ ಹಾಗೂ ಎರಡು ಸಲ ಸಂಸದರಾಗಿದ್ದ ಖರ್ಗೆ ಪ್ರಸ್ತುತ ರಾಜ್ಯಸಭಾ ಸದಸ್ಯರಾಗಿದ್ದಾರೆ.

‘ಶಶಿ ತರೂರ್ ಚುನಾವಣೆಯಲ್ಲಿ ಸೋತಿರಬಹುದು. ಆದರೆ, ಅವರನ್ನು ಸೋತ ಅಭ್ಯರ್ಥಿ ಎಂದು ನಿರ್ಲಕ್ಷಿಸಿದರೆ ಬಹುದೊಡ್ಡ ತಪ್ಪಾಗುತ್ತದೆ. ಚುನಾವಣೆಯಲ್ಲಿ ಒಟ್ಟು ಶೇ 11.42 ಮತಗಳನ್ನು ಪಡೆಯುವ ಮೂಲಕ ಪಕ್ಷದೊಳಗೆ ತನ್ನ ಪರವಾಗಿ ಸಾಕಷ್ಟು ಜನರಿದ್ದಾರೆ ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ. ಏಕಪಕ್ಷೀಯ ಎಂದೇ ಹೇಳಲಾಗಿದ್ದ ಚುನಾವಣೆಯಲ್ಲಿ ತರೂರ್ ಗಳಿಸಿರುವ ಮತಗಳು ಅವರನ್ನು ಪಕ್ಷದ ಪ್ರಮುಖ ನಾಯಕರಲ್ಲಿ ಒಬ್ಬರನ್ನಾಗಿಸಿದೆ. ಅವರಿಗೆ ಉಪಾಧ್ಯಕ್ಷ ಅಥವಾ ಕಾರ್ಯಾಧ್ಯಕ್ಷ ಸ್ಥಾನ ನೀಡಿ ಸಂಘಟನೆಗೆ ಬಳಸಿಕೊಳ್ಳಬೇಕು’ ಎಂದು ಜಿ 23 ನಾಯಕರೊಬ್ಬರು ಅಭಿಪ್ರಾಯಪಟ್ಟರು.

ಖರ್ಗೆ ಮುಂದಿರುವ ಸವಾಲುಗಳು

- 2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತ ಬಳಿಕ ಪಕ್ಷವು ಜಾರು ಹಾದಿಯಲ್ಲಿದೆ. ದೇಶದಲ್ಲಿ ಎರಡು ರಾಜ್ಯಗಳಲ್ಲಷ್ಟೇ ಪಕ್ಷ ಸ್ವಂತ ಬಲದ ಮೇಲೆ ಅಧಿಕಾರದಲ್ಲಿದೆ. ಪಕ್ಷದ ನಾಯಕರು ಹಾಗೂ ಕಾರ್ಯಕರ್ತರ ನಡುವೆ ಸಂಪರ್ಕ ಕೊಂಡಿಯೇ ತಪ್ಪಿ ಹೋದ ಸ್ಥಿತಿ ನಿರ್ಮಾಣವಾಗಿದೆ. ಇವುಗಳನ್ನು ಸರಿಪಡಿಸಿ ಪಕ್ಷವನ್ನು ಪುನರುಜ್ಜೀವನಗೊಳಿಸುವುದು.
- ಗಾಂಧಿ ಕುಟುಂಬದ ಆಣತಿಯಂತೆ ನೂತನ ಅಧ್ಯಕ್ಷರು ಕಾರ್ಯನಿರ್ವಹಿಸಲಿದ್ದಾರೆ ಎಂದು ಬಿಜೆಪಿ ಟೀಕಿಸುತ್ತಲೇ ಇದೆ. ಖರ್ಗೆ ಅವರ ಮುಂದಿರುವ ಬಹು ದೊಡ್ಡ ಸವಾಲೆಂದರೆ ‘ರಿಮೋಟ್ ಕಂಟ್ರೋಲ್’ ಮೂಲಕ ನಿಯಂತ್ರಿಸಲ್ಪಡುವ ಅಧ್ಯಕ್ಷ ಎಂಬ ಹಣೆಪಟ್ಟಿಯಿಂದ ಹೊರಬರುವುದು.
- ಪಕ್ಷದ ನಾಯಕತ್ವದ ವಿರುದ್ಧ ಜಿ–23 ನಾಯಕರು ಹರಿಹಾಯುತ್ತಲೇ ಇದ್ದಾರೆ. ಗುಲಾಂ ನಬಿ ಅಜಾದ್, ಕಪಿಲ್ ಸಿಬಲ್ ಸೇರಿದಂತೆ ಹಲವು ನಾಯಕರು ಪಕ್ಷ ತ್ಯಜಿಸಿದ್ದಾರೆ. ಅತೃಪ್ತ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದು. ಪಕ್ಷದಲ್ಲಿನ ಹಿರಿಯ ನಾಯಕರನ್ನು ಸಂಬಾಳಿಸುವುದು, ರಾಜಸ್ಥಾನದಲ್ಲಿನ ಭಿನ್ನಮತವನ್ನು ಬಗೆಹರಿಸುವುದು, ಪಕ್ಷದ ನೀತಿ ಹಾಗೂ ಕಾರ್ಯತಂತ್ರದಲ್ಲಿ ಬದಲಾವಣೆ ತರುವುದು, ಪದಾಧಿಕಾರಿಗಳ ನೇಮಕ ಮಾಡುವುದು.
- ಹಿಮಾಚಲ ಪ್ರದೇಶ ವಿಧಾನಸಭೆಗೆ ಚುನಾವಣೆ ವೇಳಾಪಟ್ಟಿ ಘೋಷಣೆಯಾಗಿದೆ. ಕೆಲವೇ ದಿನಗಳಲ್ಲಿ ಗುಜರಾತ್ ವಿಧಾನಸಭಾ ಚುನಾವಣೆ ಘೋಷಣೆಯಾಗಲಿದೆ. ಮುಂದಿನ ವರ್ಷ ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ ಮತ್ತಿತರ ರಾಜ್ಯಗಳಿಗೆ ಚುನಾವಣೆ ನಡೆಯಲಿದೆ. ಈ ರಾಜ್ಯಗಳಲ್ಲಿ ಸಂಘಟನೆ ಬಲಪಡಿಸಿ ಪಕ್ಷವನ್ನು ಅಧಿಕಾರಕ್ಕೆ ತರುವುದು.
- ಗಾಂಧಿ ಕುಟುಂಬದ ಜತೆಗೆ ನಿಕಟ ನಂಟು ಹೊಂದಿರುವ ಖರ್ಗೆ ಅವರು, ಹುದ್ದೆಯ ಸ್ವಾತಂತ್ರ್ಯ ಹಾಗೂ ಗಾಂಧಿ ಕುಟುಂಬದ ಒಲವು. ಎರಡನ್ನೂ ಹೇಗೆ ಸಮತೋಲಿತವಾಗಿ ಕಾಪಾಡಿಕೊಳ್ಳುತ್ತಾರೆ ಎಂಬ ಚರ್ಚೆಯೂ ಪಕ್ಷದೊಳಗೆ ಆರಂಭವಾಗಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆಯು ಗಳಿಸಿರುವ ಜನಮನ್ನಣೆಯನ್ನು ಪಕ್ಷದ ಮತಗಳನ್ನಾಗಿ ಪರಿವರ್ತಿಸುವ ಮಹತ್ವದ ಹೊಣೆಗಾರಿಕೆ.

ಕಾರ್ಯಕರ್ತರಿಗೆ ಶಕ್ತಿ: ತರೂರ್

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಒಡ್ಡುವ ಸವಾಲುಗಳನ್ನು ಎದುರಿಸಲು ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಯು ಪಕ್ಷದ ಕಾರ್ಯಕರ್ತರಿಗೆ ಶಕ್ತಿ ತುಂಬಿದೆ ಎಂದು ಶಶಿ ತರೂರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಎಂದಿಗೂ ಭಿನ್ನಮತದ ಅಭ್ಯರ್ಥಿಯಲ್ಲ. ಬದಲಾವಣೆ ಬಯಸಿ ಕಣಕ್ಕೆ ಇಳಿದಿದ್ದೆ. ಖರ್ಗೆ ಅವರ ಗೆಲುವು ಕಾಂಗ್ರೆಸ್‌ನ ಗೆಲುವು. ಬಲಿಷ್ಠ ಭಾರತ ನಿರ್ಮಾಣಕ್ಕೆ ಬಲಿಷ್ಠ ಕಾಂಗ್ರೆಸ್ ಬೇಕು’ ಎಂದರು.

‘ಈ ಚುನಾವಣೆಯು ಕಾಂಗ್ರೆಸ್‌ಗೆ ಶುಭ ಸೂಚನೆ. ಇಲ್ಲಿಂದ ನಾವು ಮುನ್ನಡೆಯುತ್ತೇವೆ. ಪಕ್ಷದ ಕಾರ್ಯಕರ್ತರು ಹೊಸ ಚೈತನ್ಯ ಪಡೆಯಲಿದ್ದಾರೆ’ ಎಂದರು.

ಅಭ್ಯರ್ಥಿಗಳು ಪಡೆದ ಮತಗಳು

9,385 ಚಲಾವಣೆಯಾದ ಒಟ್ಟು ಮತಗಳು

7,897 ಮಲ್ಲಿಕಾರ್ಜುನ ಖರ್ಗೆ

1,072 ಶಶಿ ತರೂರ್

416 ಅಸಿಂಧು

ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷಕ್ಕೆ ಸಮರ್ಥ ನಾಯಕತ್ವ ನೀಡುವ ವಿಶ್ವಾಸ ಇದೆ. ಸಾಂಘಿಕ ಪ್ರಯತ್ನದಿಂದ ನಾವು ಪಕ್ಷವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತೇವೆ

ಶಶಿ ತರೂರ್, ಕಾಂಗ್ರೆಸ್ ಮುಖಂಡ

ಕೆರೆ ಏರಿ ಒಡೆದು ನುಗ್ಗಿದ ನೀರು, ಅಪಾರ ಪ್ರಮಾಣದ ಬೆಳೆ ಹಾನಿ
ವ್ಯಕ್ತಿ ಸಾವು, ಬಸ್‌ನಲ್ಲಿದ್ದ ಪ್ರಯಾಣಿಕರ ರಕ್ಷಣೆ

ಬೆಂಗಳೂರು: ರಾಜ್ಯದ ಕಲಬುರ್ಗಿ, ಬೀದರ್, ಬೆಳಗಾವಿ, ಉತ್ತರ ಕನ್ನಡ ಸೇರಿದಂತೆ ವಿವಿಧೆಡೆ ಬುಧವಾರ ಮಳೆಯಾಗಿದ್ದು, ಮನೆಯ ಗೋಡೆ ಕುಸಿದು ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ. ಸಿಡಿಲಿಗೆ 17 ಜಾನುವಾರು ಮೃತಪಟ್ಟಿವೆ. ತುಮಕೂರು ಜಿಲ್ಲೆಯ ಹಳ್ಳವೊಂದರಲ್ಲಿ ಸಿಲುಕಿದ್ದ ಬಸ್‌ನಲ್ಲಿದ್ದ ಪ್ರಯಾಣಿಕರನ್ನು ರಕ್ಷಿಸಲಾಗಿದೆ.

ಸಂಡೂರು (ಬಳ್ಳಾರಿ ಜಿಲ್ಲೆ): ಮಳೆಯಿಂದಾಗಿ ಮನೆಯ ಗೋಡೆ ಕುಸಿದು, ಗೋಡೆಯ ಪಕ್ಕದಲ್ಲಿ ಮಲಗಿದ್ದ ಸೋಮಶೇಖರ್ (46) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಪ್ರಯಾಣಿಕರ ರಕ್ಷಣೆ: ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೆಂಕಟಾಪುರ ಗ್ರಾಮದ ಬಳಿ ಬುಧವಾರ ಹಳ್ಳದ ನೀರಿನಲ್ಲಿ ಸಿಲುಕಿದ್ದ ಬಸ್‌ನಲ್ಲಿದ್ದ ಪ್ರಯಾಣಿಕರನ್ನು ಸಾರ್ವಜನಿಕರು ರಕ್ಷಿಸಿದರು. ಆಂಧ್ರದ ಹಿಂದೂಪುರಕ್ಕೆ ತೆರಳುತ್ತಿದ್ದ ಖಾಸಗಿ ಬಸ್ ಹಳ್ಳದಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಬಸ್‌ನಲ್ಲಿ ಸುಮಾರು 50ಕ್ಕೂ ಹೆಚ್ಚು ಪ್ರಯಾಣಿಕರು ಇದ್ದರು. ಮತ್ತೊಂದು ವಾಹನದ (ಜೆಸಿಬಿ) ನೆರವಿನೊಂದಿಗೆ ಹಳ್ಳದಿಂದ ಬಸ್ ಹೊರಕ್ಕೆ ಎಳೆದು ತರಲಾಯಿತು.

ಪಾವಗಡ ತಾಲ್ಲೂಕಿನ ಮದ್ದೆ ಗ್ರಾಮದ ದೊಡ್ಡ ಹಳ್ಳ ದಾಟಲು ಹೋಗಿ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ಬೈಕ್ ಸವಾರರೊಬ್ಬರನ್ನು ಸಾರ್ವಜನಿಕರು ರಕ್ಷಿಸಿದ್ದಾರೆ. ಮತ್ತೊಂದು ಘಟನೆಯಲ್ಲಿ ಹನುಮಯ್ಯನಪಾಳ್ಯ ಹಳ್ಳದಲ್ಲಿ ಬೈಕ್ ಸಹಿತ ಕೊಚ್ಚಿಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ರಕ್ಷಿಸಲಾಗಿದೆ. ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಉದ್ದೂರು ಹೊಸಹಳ್ಳಿ ಗೌರಿಕೆರೆ ಏರಿ ಒಡೆದು ಸುತ್ತಮುತ್ತಲ ಜಮೀನಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನ ಲಕ್ಷ್ಮಣ ನಾಯಕ ತಾಂಡಾದ ಬಳಿ ಬುಧವಾರ ಸಿಡಿಲಿಗೆ 10 ಹಸು, 6 ಎತ್ತು ಮತ್ತು ಆಳಂದ ತಾಲ್ಲೂಕಿನ ಮದಗುಣಕಿ ಗ್ರಾಮದಲ್ಲಿ ಒಂದು ಹಸು ಸೇರಿ 17 ಜಾನುವಾರುಗಳು ಮೃತಪಟ್ಟಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	26,190	25,939
ಹಾರಂಗಿ	2,859	2,854.62	1,418	250
ಕಬಿನಿ	2284	2,283.89	3,290	3,000
ಹೇಮಾವತಿ	2,922	2,921.75	5,004	4,942
ಲಿಂಗನಮಕ್ಕಿ	1,819	1,814	4,046	7,373
ಸೂಪಾ (ಮೀ)	564	553.76	1,780	1,358
ಮಾಣಿ	595	589.62	189	752
ತುಂಗಭದ್ರಾ	1,633	1,632.99	27,411	29,507
ಮಲಪ್ರಭಾ	2079.5	2,079.50	1,394	1,394
ಘಟಪ್ರಭಾ	2175	2,175	2,008	2,008
ಭದ್ರಾ	186	185.5	2,895	4,110
ಆಲಮಟ್ಟಿ (ಮೀ)	519.6	519.58	48,782	30,658
ನಾರಾಯಣಪುರ (ಮೀ)	492.25	492.08	30,000	30,400

* ನೆಲಮಟ್ಟದಿಂದ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಪ್ರೀತಿಸದೇ ಇರುವ ಕೆಲಸವನ್ನು ಮಾಡುವುದು ಗುಲಾಮಗಿರಿ.

–ಮದರ್ ತೆರೇಸಾ

ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಖರ್ಗೆ ಸ್ವತಂತ್ರವಾಗಿ ಕೆಲಸ ಮಾಡಲು ಆದೀತೇ?

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯ ಫಲಿತಾಂಶ ಏನಿರುತ್ತದೆ ಎಂಬುದು ರಾಜಕೀಯದಲ್ಲಿ ಆಸಕ್ತಿ ಇರುವವರಿಗೆ ಮೊದಲೇ ಗೊತ್ತಿತ್ತು. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ ಸಲ್ಲಿಸಲು ಅಣಿಯಾದಾಗಲೇ ಮಲ್ಲಿಕಾರ್ಜುನ ಖರ್ಗೆ ಅವರು ಚುನಾವಣೆ ಗೆದ್ದುಬಿಟ್ಟಿದ್ದರು, ಎದುರಾಳಿ ಶಶಿ ತರೂರ್ ಅವರು ಸೋಲು ಕಂಡಿದ್ದರು. ಹಾಗೆಂದ ಮಾತ್ರಕ್ಕೆ, ಚುನಾವಣೆಯು ಪಕ್ಷದ ಪಾಲಿಗೆ ಏನೂ ಅಲ್ಲ ಎಂಬುದು ಇದರ ಅರ್ಥವಲ್ಲ. ಎರಡು ದಶಕಗಳಿಗೂ ಹೆಚ್ಚಿನ ಅವಧಿಯ ನಂತರ ಇದೇ ಮೊದಲ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಪಕ್ಷದಲ್ಲಿ ಚುನಾವಣೆ ನಡೆದಿದೆ. ಅಲ್ಲದೆ, ಈ ಚುನಾವಣೆಯು ಸಾಂಕೇತಿಕ ಎಂಬಷ್ಟಕ್ಕೆ ಸೀಮಿತವಾಗಲಿಲ್ಲ. ತರೂರ್ ಅವರು ಒಟ್ಟು 1,072 ಮತಗಳನ್ನು ಪಡೆದಿದ್ದಾರೆ. ಇದು ಒಟ್ಟು ಮತಗಳ ಪೈಕಿ ಶೇಕಡ 12ರಷ್ಟು. ಖರ್ಗೆ ಅವರು 7,897 ಮತಗಳನ್ನು ಪಡೆದಿದ್ದಾರೆ. ಅಂದರೆ ಖರ್ಗೆ ಅವರಿಗೆ ಬಹಳ ದೊಡ್ಡ ಪ್ರಮಾಣದ ಬೆಂಬಲ ಇದೆ ಎಂದು ಅರ್ಥ. ಖರ್ಗೆ ಅವರನ್ನು ನೆಹರೂ– ಗಾಂಧಿ ಕುಟುಂಬದ ಬೆಂಬಲ ಇರುವ, ಯಥಾಸ್ಥಿತಿವಾದದ ಪರವಿರುವ ಅಭ್ಯರ್ಥಿಯಂತೆ ಕಾಣಲಾಗಿತ್ತು. ಆದರೆ, ಪಕ್ಷದ ಒಳಗೆ ಬದಲಾವಣೆ ತರುವುದಾಗಿ ತರೂರ್ ಅವರು ಹೇಳಿದ್ದರು. ಅವರಿಗೆ ಸಿಕ್ಕಿರುವ ಮತಗಳ ಪ್ರಮಾಣವನ್ನು ಗಮನಿಸಿದರೆ, ಬದಲಾವಣೆ ಬಯಸಿದವರ ಪ್ರಮಾಣ ತೀರಾ ಕಡಿಮೆಯೇನೂ ಅಲ್ಲ ಎಂಬುದು ಗೊತ್ತಾಗುತ್ತದೆ.

ಖರ್ಗೆ ಅವರು ನುರಿತ ರಾಜಕಾರಣಿ. ದಲಿತ ಅಸ್ಮಿತೆಯೂ ಅವರಿಗೆ ಇದೆ. ಅವರ ಎದುರು ಇರುವ ಸವಾಲುಗಳು ಬೆಟ್ಟದಷ್ಟು ದೊಡ್ಡದಾಗಿವೆ

ಪಕ್ಷದ ಪಾಲಿಗೆ ಇಬ್ಬರೂ ಅಭ್ಯರ್ಥಿಗಳು ಸಮಾನರು. ಹೀಗಿದ್ದರೂ, ಖರ್ಗೆ ಅವರು ತರೂರ್ ಅವರಿಗಿಂತ ಹೆಚ್ಚು ಸಮಾನರಾಗಿದ್ದರು ಎಂಬುದು ಪಕ್ಷದ ಒಳಗನ್ನು ಬಲ್ಲವರಿಗೆ ಗೊತ್ತಿತ್ತು. ಚುನಾವಣೆಯಲ್ಲಿ ಸ್ಪರ್ಧಿಸದೆ, ಅಭ್ಯರ್ಥಿಗಳ ಪೈಕಿ ತನ್ನ ಒಲವು ಯಾರ ಕಡೆಗಿದೆ ಎಂಬುದನ್ನು ಬಹಿರಂಗವಾಗಿ ಹೇಳದೆ ನೆಹರೂ– ಗಾಂಧಿ ಕುಟುಂಬವು ಸರಿಯಾದ ಹೆಜ್ಜೆ ಇರಿಸಿತು. ಪಕ್ಷದ ಮೇಲೆ ಈ ಕುಟುಂಬ ಹೊಂದಿರುವ ಹಿಡಿತವು ಈಗಲೂ ಭದ್ರವಾಗಿಯೇ ಇದೆ. ಅಲ್ಲದೆ, ಕುಟುಂಬವು ಖರ್ಗೆ ಅವರ ಪರ ಇತ್ತು ಎಂಬ ಭಾವನೆಯು ಖರ್ಗೆ ಅವರಿಗೆ ಪೂರಕವಾಗಿ ಕೆಲಸ ಮಾಡಿದೆ ಎಂಬುದರಲ್ಲಿ ಅನುಮಾನ ಇಲ್ಲ. ಖರ್ಗೆ ಅವರು ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ ಸಲ್ಲಿಸಿದ ಸಂದರ್ಭವೇ, ಅವರಿಗೆ ಬೆಂಬಲವಾಗಿ ನೆಹರೂ– ಗಾಂಧಿ ಕುಟುಂಬ ಇದ್ದಿರಬಹುದು ಎಂಬ ನಂಬಿಕೆಗೆ ಪುಷ್ಟಿ ನೀಡುವಂತಿತ್ತು. ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಪಕ್ಷದ ಅಧ್ಯಕ್ಷರಾಗಲಿ ಎಂಬ ಬಯಕೆ ಸೋನಿಯಾ ಗಾಂಧಿ ಅವರಲ್ಲಿ ಇತ್ತು. ಆದರೆ, ರಾಜಸ್ಥಾನದ ಕಾಂಗ್ರೆಸ್ ಘಟಕದಲ್ಲಿ ನಡೆದ ಅನಿರೀಕ್ಷಿತ ಬಂಡಾಯವು ಖರ್ಗೆ ಅವರು ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವಂತಹ ಸನ್ನಿವೇಶವನ್ನು ಸೃಷ್ಟಿ ಮಾಡಿತು. ರಾಜಸ್ಥಾನದಲ್ಲಿನ ಬೆಳವಣಿಗೆಗಳು ಪಕ್ಷದ ಮೇಲೆ ನೆಹರೂ– ಗಾಂಧಿ ಕುಟುಂಬದ ಹಿಡಿತ ತುಸು ಸಡಿಲವಾಗುವಂತೆ ಮಾಡಿದವು ಎಂಬ ಮಾತು ಇದೆಯಾದರೂ, ಪಕ್ಷದ ಬಹುತೇಕ ಕಾರ್ಯಕರ್ತರು ಈ ಕುಟುಂಬದ ಜೊತೆ ಭಾವನಾತ್ಮಕ ಬೆಸುಗೆ ಹೊಂದಿದ್ದಾರೆ ಎಂಬುದರಲ್ಲಿ ಅನುಮಾನವೇ ಇಲ್ಲ. ತಾವು ನೆಹರೂ– ಗಾಂಧಿ ಕುಟುಂಬದ ಮಾರ್ಗದರ್ಶನ ಪಡೆಯುವುದಾಗಿ ಖರ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅವರ ಮಾತಿನ ಅರ್ಥ ಪಕ್ಷದ ಸಂಘಟನೆಯ ವಿಚಾರವಾಗಿ ಎಲ್ಲದಕ್ಕೂ ಈ ಕುಟುಂಬದ ಕಡೆ ಮುಖ ಮಾಡುವುದು ಅಥವಾ ಕುಟುಂಬದ ಜೊತೆ ಸಮಾಲೋಚನೆ ನಡೆಸುವುದು ಎಂದಾದರೆ ಚುನಾವಣೆ ನಡೆಸಿದ್ದು ವ್ಯರ್ಥವಾಗುತ್ತದೆ. ಹೊಸ ಅಧ್ಯಕ್ಷರು ಮುಕ್ತವಾಗಿ ಹಾಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಈ ಕುಟುಂಬವು ಅವಕಾಶ ಮಾಡಿಕೊಡಬೇಕು. ಹೊಸ ಅಧ್ಯಕ್ಷರೇ ಪಕ್ಷದ ಮುಖವಾಣಿ ಆಗಿರಬೇಕು.

ಖರ್ಗೆ ಅವರು ನುರಿತ ರಾಜಕಾರಣಿ. ಅವರು ಪಕ್ಷದಲ್ಲಿ ಹಲವು ಹುದ್ದೆಗಳನ್ನು ಕಂಡವರು. ಸಚಿವರಾಗಿ ರಾಜ್ಯ ಸರ್ಕಾರದಲ್ಲಿ ಹಾಗೂ ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡಿದವರು. ಯಾವತ್ತೂ ಅವರು ಹೆಸರಿಗೆ ಕಳಂಕ ಅಂಟಿಸಿಕೊಂಡವರಲ್ಲ. ದಲಿತ ಅಸ್ಮಿತೆಯೂ ಅವರಿಗೆ ಇದೆ. ಆದರೆ ಈಗ ಅವರ ಎದುರು ಇರುವ ಸವಾಲುಗಳು ಬೆಟ್ಟದಷ್ಟು ದೊಡ್ಡದಾಗಿವೆ. ಚುನಾವಣೆಗಳಲ್ಲಿ ಒಂದಾದ ನಂತರ ಒಂದರಂತೆ ಸೋಲು ಕಾಣುತ್ತಿರುವ, ನಾಯಕರನ್ನು ಕಳೆದುಕೊಂಡಿರುವ ಹಾಗೂ ನೀತಿ ಮತ್ತು ಕಾರ್ಯತಂತ್ರಗಳ ವಿಚಾರದಲ್ಲಿ ಎಡವುತ್ತಿರುವ ಪಕ್ಷಕ್ಕೆ ಅವರು ಶಕ್ತಿ ತುಂಬಬೇಕಿದೆ. ತಕ್ಷಣಕ್ಕೆ ಅವರು ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆ ಎದುರಿಸಲು ಪಕ್ಷವನ್ನು ಸಜ್ಜುಗೊಳಿಸಬೇಕಿದೆ. ರಾಜಸ್ಥಾನದಲ್ಲಿನ ಆಂತರಿಕ ಸಮಸ್ಯೆಗಳನ್ನು ನಿವಾರಿಸಬೇಕಿದೆ. ಪಕ್ಷದ ವಿವಿಧ ಹುದ್ದೆಗಳಿಗೆ ಪದಾಧಿಕಾರಿಗಳನ್ನು ನೇಮಕ ಮಾಡಬೇಕಿದೆ. ಮುಂದಿನ ವರ್ಷದಲ್ಲಿ ಹಲವು ರಾಜ್ಯಗಳಲ್ಲಿ ಚುನಾವಣೆಗಳು ಇವೆ. 2024ರಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಇವೆಲ್ಲವುಗಳಿಗೆ ಪಕ್ಷವನ್ನು ಸನ್ನದ್ಧವಾಗಿಸಬೇಕಿದೆ.

ದಿನದ ಟ್ವೀಟ್

ಸನ್ನಡತೆ ಅಂದರೆ?

‘ಸನ್ನಡತೆ’ ಎಂದರೆ ಏನು ಎಂಬ ಪ್ರಶ್ನೆಯನ್ನು ನರೇಂದ್ರ ಮೋದಿ, ಅಮಿತ್ ಶಾ ಮತ್ತು ಪ್ರಲ್ಹಾದ ಜೋಶಿ ಅವರಲ್ಲಿ ಕೇಳುತ್ತಿದ್ದೇನೆ. ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿ ಮಿತೇಶ್ ಭಟ್ 2020ರಲ್ಲಿ ಪೆರೋಲ್‌ನಲ್ಲಿ ಇದ್ದಾಗ ಲೈಂಗಿಕ ದೌರ್ಜನ್ಯ ಎಸಗಿದ್ದರು, ಇದರ ಬಗ್ಗೆ ಐಪಿಸಿ ಸೆಕ್ಷನ್ 354ರ ಅಡಿ ವಿಚಾರಣೆ ಬಾಕಿ ಇದೆ. ಈ ವ್ಯಕ್ತಿಯನ್ನೂ ನೀವು ಬಿಡುಗಡೆ ಮಾಡಿದ್ದೀರಿ. ಒಳ್ಳೆಯ ದಿನ, ಒಳ್ಳೆಯ ಮನುಷ್ಯರು. ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವುದು ನಿಮ್ಮ ಪ್ರಕಾರ ‘ಸನ್ನಡತೆ’ಯೇ?

ಮಹುವಾ ಮೊಯಿತ್ರಾ, ಸಂಸದೆ, ಟಿಎಂಸಿ ನಾಯಕಿ

ಕಿಡಿನುಡಿ

ಬಸವರಾಜ ಬೊಮ್ಮಾಯಿಯವರೇ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೇಮಕಾತಿಯಲ್ಲಿ ನಡೆದಿರುವ ಅಕ್ರಮ ವ್ಯವಹಾರಗಳ ದಾಖಲೆಗಳನ್ನು ರಾಹುಲ್ ಗಾಂಧಿಗೆ ಕಳುಹಿಸುತ್ತೀರೇಕೆ? ನಿಮಗೆ ದಮ್ ಇದ್ದರೆ ಸಚಿವ ಸಂಪುಟ ದಲ್ಲಿಟ್ಟು, ತನಿಖೆ ಮಾಡಿಸಿ. ನೀನು ಅತ್ತಂತೆ ಮಾಡು, ನಾನು ಹೊಡೆದಂತೆ ಮಾಡುತ್ತೇನೆ ಎನ್ನುವಂಥ ಮಾತುಗಳನ್ನು ಬಿಡಿ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 20-10-1997

- **ಕಲ್ಯಾಣ್ ಸಿಂಗ್‌ಗೆ ಬಿಎಸ್‌ಪಿ ಬೆಂಬಲ ವಾಪಸ್**

ಲಖನೌ, ಅ. 19 (ಪಿಟಿಐ, ಯುಎನ್‌ಐ)– ಬಹುಜನ ಸಮಾಜ ಪಕ್ಷವು 29 ದಿನಗಳ ಕಲ್ಯಾಣ್ ಸಿಂಗ್ ನೇತೃತ್ವದ ಭಾರತೀಯ ಜನತಾ ಪಕ್ಷದ ಸರ್ಕಾರಕ್ಕೆ ಇಂದು ಬೆಂಬಲ ವಾಪಸ್ ಪಡೆಯುವ ಮೂಲಕ ಉತ್ತರಪ್ರದೇಶದಲ್ಲಿ ರಾಜಕೀಯ ಬಿಕ್ಕಟ್ಟು ಮತ್ತೆ ತಲೆದೋರಿದೆ.

ಈ ಕ್ಷಿಪ್ರ ಬೆಳವಣಿಗೆ ಹಿನ್ನೆಲೆಯಲ್ಲಿ ಮಂಗಳವಾರವೇ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ರಾಜ್ಯಪಾಲ ರೊಮೇಶ್ ಭಂಡಾರಿ ಅವರು ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರಿಗೆ ಸೂಚಿಸಿದ್ದಾರೆ.

- **ಘರ್ಷಣೆ: 100 ತಮಿಳು ಉಗ್ರರ ಸಾವು**

ಕೊಲಂಬೊ, ಅ. 19 (ಪಿಟಿಐ)– ಕಳೆದ ರಾತ್ರಿ ಮುಲ್ಲೈತೀವು ಕರಾವಳಿ ಸಮೀಪ ಐದು ಗಂಟೆಗಳ ಕಾಲ ನೌಕಾಪಡೆ ಮತ್ತು ಉಗ್ರರ ಮಧ್ಯೆ ನಡೆದ ಕಾಳಗದಲ್ಲಿ ಕನಿಷ್ಠ 100 ಎಲ್‌ಟಿಟಿಇ ಉಗ್ರರು ಮತ್ತು ಶ್ರೀಲಂಕಾ ನೌಕಾಪಡೆಯ ಇಬ್ಬರು ಸಿಬ್ಬಂದಿ ಸತ್ತಿದ್ದಾರೆ.

ಎಲ್‌ಟಿಟಿಇ ಉಗ್ರರನ್ನು ಒಳಗೊಂಡ 7 ದೋಣಿಗಳನ್ನು ನಾಶಪಡಿಸಲಾಯಿತು. ಎಲ್‌ಟಿಟಿಇ ಉಗ್ರರ ದಾಳಿಗೆ ತೀವ್ರ ಗಾಯಗೊಂಡ ಇಬ್ಬರು ಶ್ರೀಲಂಕಾ ನೌಕಾಪಡೆಯ ಸೈನಿಕರು ಆನಂತರ ಸತ್ತರು. ಕಾಣೆಯಾಗಿರುವ ಏಳು ಮಂದಿ ನೌಕಾಪಡೆಯ ಸಿಬ್ಬಂದಿ ಪತ್ತೆಗೆ ಭೂ ಹಾಗೂ ಜಲಮಾರ್ಗವಾಗಿ ಶೋಧ ಕಾರ್ಯ ನಡೆದಿದೆ. ಜಲಮಾರ್ಗವಾಗಿ ದಾಳಿ ನಡೆಸುವ ಎಲ್‌ಟಿಟಿಇಯ 35 ಉಗ್ರರು ಸೇರಿ ಒಟ್ಟು 100 ಉಗ್ರರು ಸತ್ತಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 20-10-1972

- **ನಗರ ಕೊಳಚೆ ಪ್ರದೇಶ ನಿರ್ಮೂಲನ ಕಾರ್ಯಕ್ರಮಕ್ಕೆ ಹೆಚ್ಚುವರಿ ಧನಸಹಾಯ**

ನವದೆಹಲಿ, ಅ. 19– ಯೋಜನಾ ಆಯೋಗದ ಹೆಚ್ಚುವರಿ ಧನಸಹಾಯದಿಂದ 1972–73ನೇ ಸಾಲಿನ ಒಂದು ಕೋಟಿ ಐವತ್ತು ಲಕ್ಷ ರೂಪಾಯಿ ವೆಚ್ಚದ ಬೆಂಗಳೂರು ನಗರ ಕೊಳಚೆ ಪ್ರದೇಶ ನಿರ್ಮೂಲನೆ ಕಾರ್ಯಕ್ರಮ ಜಾರಿಗೆ ಬರಲಿದೆ.

ಕನಿಷ್ಠಪಕ್ಷ ಪ್ರತೀ ರಾಜ್ಯದ ಒಂದು ಪ್ರಮುಖ ನಗರವನ್ನು ಕೊಳಚೆ ಪ್ರದೇಶ ಪರಿಸರ ಸುಧಾರಣೆ ಕಾರ್ಯಕ್ರಮದ ವ್ಯಾಪ್ತಿಗೊಳಪಡಿಸಲು ಯೋಜನಾ ಆಯೋಗ ಒಪ್ಪಿದ್ದು, ಇದಕ್ಕಾಗಿ ಪ್ರಸಕ್ತ ವರ್ಷದಲ್ಲಿ ಎರಡು ಕೋಟಿ ರೂಪಾಯಿ ಹೆಚ್ಚುವರಿ ಹಣ ಒದಗಿಸಲಾಗಿದೆ.

ಕೇಂದ್ರ ವಸತಿ ಮತ್ತು ಕಾಮಗಾರಿ ಶಾಖೆ ಸಚಿವ ಉಮಾಶಂಕರ ದೀಕ್ಷಿತ್ ಅವರು ಇಂದು ತಮ್ಮ ಶಾಖೆಯ ಸಮಾಲೋಚನಾ ಸಮಿತಿ ಸಭೆಯಲ್ಲಿ ಈ ವಿಷಯ ತಿಳಿಸಿದರು.

- **ಬಾಂಗ್ಲಾ ದೇಶಕ್ಕೆ ಯುನೆಸ್ಕೊ ಸದಸ್ಯತ್ವ**

ಪ್ಯಾರಿಸ್, ಅ. 19– ಬಾಂಗ್ಲಾದೇಶ ಇಂದು ಯುನೆಸ್ಕೊ ಸದಸ್ಯತ್ವ ಪಡೆಯಿತು. ಇಂದು ಇಲ್ಲಿ ಸಮಾವೇಶಗೊಂಡಿದ್ದ ಯುನೆಸ್ಕೊ ಜನರಲ್ ಅಸೆಂಬ್ಲಿ ಹದಿನೇಳನೇ ಅಧಿವೇಶನ 84–22 ಮತಗಳಿಂದ ಬಾಂಗ್ಲಾದೇಶವನ್ನು ಸೇರಿಸಿಕೊಳ್ಳುವ ನಿರ್ಣಯವನ್ನು ಅಂಗೀಕರಿಸಿತು. ಆರು ರಾಷ್ಟ್ರಗಳು ನಿರ್ಣಯದ ವಿರುದ್ಧ ಮತ ನೀಡಿದವು.

ಜಾತಿ ರಾಜಕೀಯದ ಸೂತ್ರವನ್ನು ಬಿಜೆಪಿ ಯಶಸ್ವಿಯಾಗಿ ಪ್ರಯೋಗಿಸುತ್ತಿದೆ

ಮೀಸಲಾತಿ ಹೆಚ್ಚಳವೊಂದೇ ದಾರಿ

ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಇತಿಹಾಸವನ್ನು ನೋಡಿದರೆ, ಭಾರತೀಯ ಜನತಾ ಪಕ್ಷವು ಸೈದ್ಧಾಂತಿಕ ಬದ್ಧತೆಯಿಂದ ಮೀಸಲಾತಿ ಪರವಾಗಿ ಎಂದೂ ಗಟ್ಟಿಯಾಗಿ ನಿಂತ ಉದಾಹರಣೆಗಳೇ ಇಲ್ಲ. ಬಿಜೆಪಿಗೆ ಮೀಸಲಾತಿಯ ವಿರೋಧದಿಂದ ಲಾಭವಾಗಿದೆಯೇ ವಿನಾ ಮೀಸಲಾತಿ ಪರ ನಿಲುವಿನಿಂದ ಖಂಡಿತ ಅಲ್ಲ ಎಂಬ ರಾಜಕೀಯ ವಾಸ್ತವವೂ ಇದಕ್ಕೆ ಕಾರಣ ಇರಬಹುದು. 1984ರಲ್ಲಿ ಲೋಕಸಭೆಯಲ್ಲಿ ಎರಡೇ ಎರಡು ಸ್ಥಾನಗಳನ್ನು ಹೊಂದಿದ್ದ ಬಿಜೆಪಿಯ ಪ್ರಾರಂಭಿಕ ಹಂತದ ರಾಜಕೀಯ ಯಶಸ್ಸಿನ ದೊಡ್ಡ ಪಾಲು ‘ಮಂಡಲ’ ವಿರುದ್ಧದ ‘ಕಮಂಡಲ’ ಚಳವಳಿಗೆ ಸಲ್ಲುತ್ತದೆ.

‘ಮಂಡಲ– ಕಮಂಡಲ’ ಸಂಘರ್ಷದ ನಂತರ ಗಂಗೆ-ಕಾವೇರಿಯಲ್ಲಿ ಬಹಳಷ್ಟು ನೀರು ಹರಿದುಹೋಗಿದೆ. ದೇಶದ ರಾಜಕೀಯ- ಸಾಮಾಜಿಕ ಸ್ಥಿತಿ ಮಗ್ಗುಲು ಬದಲಿಸಿದೆ. ‘ಬ್ರಾಹ್ಮಣ್- ಬನಿಯಾ ಪಕ್ಷ’ ಎಂಬ ಟೀಕೆಗೆ ಒಳಗಾಗಿದ್ದ ಬಿಜೆಪಿಯಲ್ಲಿ ಈಗ ಹಿಂದುಳಿದ ಜಾತಿಯ ವ್ಯಕ್ತಿ ಪ್ರಧಾನಿಯಾಗಿದ್ದಾರೆ. ಒಂದು ಕಾಲದ ಬಿಜೆಪಿಯ ಐಡಲಾಗ್ ಗೋವಿಂದಾಚಾರ್ಯರು ಠಂಕಿಸಿದ್ದ ‘ಸೋಷಿಯಲ್ ಎಂಜಿನಿಯರಿಂಗ್’ ಎಂಬ ಜಾತಿ ರಾಜಕೀಯದ ಸೂತ್ರವನ್ನು ಬಿಜೆಪಿ ತನ್ನ ಪ್ರಮುಖ ಎದುರಾಳಿ ಪಕ್ಷ ಕಾಂಗ್ರೆಸ್‌ಗಿಂತ ಯಶಸ್ವಿಯಾಗಿ ಪ್ರಯೋಗಿಸುತ್ತಾ ಬಂದಿದೆ.

ಉತ್ತರಪ್ರದೇಶ ಮತ್ತು ಬಿಹಾರದಲ್ಲಿನ ಯಾದವರು ಮಂಡಲೋತ್ತರ ರಾಜಕೀಯದ ಪ್ರಮುಖ ಫಲಾನುಭವಿ ಸಮುದಾಯ. ಆ ಎರಡು ರಾಜ್ಯಗಳಲ್ಲಿನ ‘ಇತರ ಹಿಂದುಳಿದ ಜಾತಿ’ಗಳನ್ನು ತಮ್ಮ ಕಡೆ ಸೆಳೆಯುವ ಮೂಲಕ ಯಾದವರ ರಾಜಕೀಯ ಶಕ್ತಿಯನ್ನು ಬಿಜೆಪಿ ಯಶಸ್ವಿಯಾಗಿ ಕುಂದಿಸಿದೆ. ಇದೇ ರೀತಿ, ಉತ್ತರಪ್ರದೇಶದಲ್ಲಿ ಮಾಯಾವತಿ ಅವರ ಸ್ವಜಾತಿಯ ಜಾಟವರಿಂದ ಇತರ ದಲಿತ ಜಾತಿಗಳನ್ನು ದೂರ ಮಾಡುವ ಕೆಲಸವನ್ನು ‘ಮಹಾದಲಿತ್’ ಗುಂಪು ಕಟ್ಟುವ ಮೂಲಕ ಮಾಡಿದೆ. ಬಿಹಾರದಲ್ಲಿ ರಾಮವಿಲಾಸ್ ಪಾಸ್ವಾನ್ ಅವರ ಮೂಲಕ ದಲಿತರನ್ನು ಒಡೆದು ರಾಜಕೀಯ ಲಾಭ ಮಾಡಿಕೊಂಡಿದೆ.

ಉತ್ತರ ಭಾರತದ ಈ ಪ್ರಯೋಗವನ್ನು ಬೇರೆ ರಾಜ್ಯಗಳಲ್ಲಿಯೂ ಮಾಡುವ ಪ್ರಯತ್ನ ಬಿಜೆಪಿಯಿಂದ ನಡೆದಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯೊಳಗಿನ ಎಡ- ಬಲ ಗುಂಪುಗಳ ನಡುವಿನ ಸಾಮಾಜಿಕ ಮತ್ತು ರಾಜಕೀಯ ಸಂಘರ್ಷವನ್ನು ಬಳಸಿಕೊಂಡು ರಾಜಕೀಯ ಲಾಭ ಪಡೆಯುತ್ತಾ ಬಂದಿರುವುದಕ್ಕೆ ಇತ್ತೀಚಿನ ಚುನಾವಣೆಗಳಲ್ಲಿ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ ಗಳಿಸುತ್ತಿರುವ ಸ್ಥಾನಗಳೇ ಸಾಕ್ಷಿ.

ಕರ್ನಾಟಕದ ಹಿಂದುಳಿದ ಜಾತಿಗಳ ಮೇಲೆ ಈ ಸೋಷಿಯಲ್ ಎಂಜಿನಿಯರಿಂಗ್ ಪ್ರಯೋಗವನ್ನು ಎರಡು ದಶಕಗಳ ಹಿಂದೆಯೇ ಪ್ರಾರಂಭಿಸಿದ್ದ ಬಿಜೆಪಿ ಕಣ್ಣು ಹಾಕಿದ್ದು ರಾಜ್ಯದ ಹಿಂದುಳಿದ ಜಾತಿಗಳಲ್ಲಿ ಮೊದಲೆರಡು ಸ್ಥಾನಗಳಲ್ಲಿರುವ ಕುರುಬರು ಮತ್ತು ಈಡಿಗರ ಮೇಲೆ. ಬಿಹಾರದಲ್ಲಿ ಕುರ್ಮಿ ಜಾತಿಯ ನಿತೀಶ್ ಕುಮಾರ್ ಅವರನ್ನು ಯಾದವ ನಾಯಕ ಲಾಲು ಪ್ರಸಾದ್ ಅವರ ಎದುರು ಎತ್ತಿಕಟ್ಟಿ ಯಾದವೇತರ ಹಿಂದುಳಿದ ಜಾತಿಗಳನ್ನು ಸೆಳೆದ ಹಾಗೆಯೇ ಕರ್ನಾಟಕದಲ್ಲಿ ಈ ರಾಜಕೀಯಕ್ಕೆ ಬಿಜೆಪಿ ಆರಿಸಿಕೊಂಡದ್ದು ಎಸ್.ಬಂಗಾರಪ್ಪ ಅವರನ್ನು. ಬಂಗಾರಪ್ಪ ಬಹುಬೇಗ ಬಿಜೆಪಿ ಬಗ್ಗೆ ಭ್ರಮನಿರಸನಗೊಂಡು ಹೊರಗೆ ಬಂದರೂ ಅವರ ಜೊತೆ ಹೋಗಿದ್ದ ಹಿಂದುಳಿದ ಜಾತಿಗಳ ಹಲವು ನಾಯಕರು ಮತ್ತು ಬಹಳಷ್ಟು ಮತದಾರರು ಆ ಕಡೆಯೇ ಉಳಿದುಬಿಟ್ಟರು.

ಇದಾದ ನಂತರವೂ ಕಾಂಗ್ರೆಸ್ ಪರವಾಗಿರುವ ಹಿಂದುಳಿದ ಜಾತಿಗಳನ್ನು ಸಂಪೂರ್ಣವಾಗಿ ಒಡೆಯಲು ಬಿಜೆಪಿಗೆ ಸಾಧ್ಯವಾಗಿಲ್ಲ. ಕೆ.ಎಸ್.ಈಶ್ವರಪ್ಪ ಎಂಬ ಸಂಘನಿಷ್ಠ ನಾಯಕ ಪಕ್ಷದಲ್ಲಿಯೇ ಇದ್ದರೂ ಅವರನ್ನು ಕುರುಬರು ಇಲ್ಲವೇ ಹಿಂದುಳಿದ ಜಾತಿಗಳವರು ತಮ್ಮ ನಾಯಕನೆಂದು ಎಂದೂ ಒಪ್ಪಿಕೊಂಡಿಲ್ಲ. ಬಿಹಾರದಲ್ಲಿ ಲಾಲು ಪ್ರಸಾದ್ ಅವರಂತೆ ಕರ್ನಾಟಕದಲ್ಲಿ ಬಿಜೆಪಿ ಜೊತೆ ಎಂದೂ ರಾಜಿಯಾಗದೆ ಹಿಂದುಳಿದ ಜಾತಿಗಳು ಮತ್ತು ಬಿಜೆಪಿ ನಡುವೆ ತಡೆಗೋಡೆಯಾಗಿ ನಿಂತಿರುವವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು. ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನು ಹುಟ್ಟುಹಾಕಿ ಅವರನ್ನು ಏಕಾಂಗಿ ಮಾಡುವ ನಾಟಕ ನಡೆದರೂ ಅದು ವಿಫಲವಾಯಿತು.

ಬಿಜೆಪಿಗೆ ಮುಂದಿನ ಲೋಕಸಭಾ ಚುನಾವಣೆ ಎಷ್ಟು ಮುಖ್ಯವೋ ದಕ್ಷಿಣದ ರಾಜ್ಯಗಳಲ್ಲಿ ಏಕೈಕ ಭರವಸೆಯಾಗಿ ಉಳಿದಿರುವ ಕರ್ನಾಟಕದ ವಿಧಾನಸಭಾ ಚುನಾವಣೆಯೂ ಅಷ್ಟೇ ಮುಖ್ಯ. ಬಾಬರಿ ಮಸೀದಿ ಧ್ವಂಸ ನಂತರದ ಮೊದಲ ಹದಿನೈದು ವರ್ಷಗಳ ಅವಧಿಯಲ್ಲಿ ಹಿಂದುತ್ವದ ಅಜೆಂಡಾ ಮೂಲಕ ಪಕ್ಷವನ್ನು ಕಟ್ಟಿದ ಬಿಜೆಪಿ, ನಂತರದ ಹದಿನೈದು ವರ್ಷಗಳ ಅವಧಿಯಲ್ಲಿ ಧರ್ಮದ ಜೊತೆಯಲ್ಲಿ ಜಾತಿಯನ್ನೂ ಸೇರಿಸಿಕೊಂಡು ಹೊಸ ಬಗೆಯ ಸೋಷಿಯಲ್ ಎಂಜಿನಿಯರಿಂಗ್ ಪ್ರಯೋಗಕ್ಕೆ ಇಳಿದಿದೆ.

ರಾಜ್ಯದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯನ್ನು ತನ್ನ ಸಾಧನೆಯ ಬಲದಿಂದ ಇಲ್ಲವೇ ಕೇವಲ ಧರ್ಮಾಧಾರಿತ ರಾಜಕಾರಣದಿಂದ ಎದುರಿಸುವ ವಿಶ್ವಾಸ ಬಿಜೆಪಿಯಲ್ಲಿ ಉಳಿದಿಲ್ಲ. ಉಳಿದಿರುವುದು ಒಂದೇ ದಾರಿ ಅದು ‘ಹಿಂದ’ (ಹಿಂದುಳಿದ-ದಲಿತ) ಮತಬ್ಯಾಂಕ್ ವಶೀಕರಣದ ಸೋಷಿಯಲ್ ಎಂಜಿನಿಯರಿಂಗ್.



ಈ ಹಿನ್ನೆಲೆಯಲ್ಲಿಯೇ ನ್ಯಾಯಮೂರ್ತಿ ನಾಗಮೋಹನ್ ದಾಸ್ ಸಮಿತಿಯ ವರದಿ ಆಧಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಮೀಸಲಾತಿಯನ್ನು ಮುಟ್ಟುವುದೆಂದರೆ ಜೇನುಗೂಡಿಗೆ ಕೈ ಹಾಕಿದ ಹಾಗೆ. ಈಗಾಗಲೇ ಮೀಸಲಾತಿ ಹೆಚ್ಚಳದ ಹಳೆಯ ಬೇಡಿಕೆಗಳ ಜೊತೆ ಹೊಸ ಬೇಡಿಕೆಗಳು ಕೇಳಿಬರತೊಡಗಿವೆ. ಇದರಲ್ಲಿ ಪ್ರಬಲ ಸಮುದಾಯಗಳಾದ ಒಕ್ಕಲಿಗ ಮತ್ತು ಲಿಂಗಾಯತರಿಂದ ಹಿಡಿದು ಕುರುಬ, ಈಡಿಗ, ಗೊಲ್ಲ, ಮೊಗವೀರ, ಮಡಿವಾಳ, ಸವಿತಾ ಸಮುದಾಯದಂತಹ ಪ್ರಮುಖ ಹಿಂದುಳಿದ ಜಾತಿಗಳೂ ಸೇರಿವೆ. ಒಟ್ಟು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸದೆ ಈ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವೇ ಇಲ್ಲ ಎನ್ನುವುದು ಇಂದಿನ ವಾಸ್ತವ.

ಮೀಸಲಾತಿ ಹೆಚ್ಚಳಕ್ಕೆ ಇರುವ ಏಕೈಕ ಅಡ್ಡಿ- ಒಟ್ಟು ಮೀಸಲಾತಿ ಪ್ರಮಾಣವು ಶೇಕಡ 50 ಮೀರಬಾರದು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 1992ರಲ್ಲಿ ನೀಡಿರುವ ತೀರ್ಪು. ಇದಕ್ಕಿಂತ ಎರಡು ವರ್ಷ ಮೊದಲೇ ತಮಿಳುನಾಡು ಸರ್ಕಾರ ಶೇಕಡ 69ರಷ್ಟು ಮೀಸಲಾತಿ ನಿಗದಿಗೊಳಿಸಿದ ಕಾನೂನನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸಿ ಸುರಕ್ಷಿತಗೊಳಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಿ ಈಗ ಕೇಂದ್ರ ಸರ್ಕಾರವೂ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿದೆ. ಬೇರೆ ರಾಜ್ಯಗಳ ಮೀಸಲಾತಿ ಹೆಚ್ಚಳದ ಪ್ರಕರಣ ಸುಪ್ರೀಂ ಕೋರ್ಟ್ ವಿಚಾರಣೆಯಲ್ಲಿದೆ. ಇತಿಹಾಸದಲ್ಲಿ ಹೆಸರು ದಾಖಲಿಸಲು ಎಲ್ಲರಿಗೂ ಅವಕಾಶಗಳು ಕೂಡಿಬರುವುದಿಲ್ಲ. ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಐತಿಹಾಸಿಕ ನಿರ್ಧಾರ ಕೈಗೊಂಡು ಬಸವರಾಜ ಬೊಮ್ಮಾಯಿ ಅವರು ಆ ಅವಕಾಶವನ್ನು ತಮ್ಮದಾಗಿಸಿಕೊಳ್ಳಬಹುದು. ಇದಕ್ಕಾಗಿ ಬೊಮ್ಮಾಯಿ ಅವರು ಪ್ರತ್ಯೇಕ ಕಾನೂನನ್ನು ರಚಿಸುವ ಅಗತ್ಯವಿಲ್ಲ. 1994ರಲ್ಲಿ ಎಂ.ವೀರಪ್ಪ ಮೊಯಿಲಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಟ್ಟು ಮೀಸಲಾತಿಯನ್ನು ಶೇಕಡ 73ಕ್ಕೆ ಹೆಚ್ಚಿಸಿ ಜಾರಿಗೊಳಿಸಿದ್ದ ಕಾನೂನು ಇದೆ.

ತಮಿಳುನಾಡು ಸರ್ಕಾರವು ಐತಿಹಾಸಿಕ ನಿರ್ಧಾರ ಕೈಗೊಂಡ ನಾಲ್ಕು ವರ್ಷಗಳ ನಂತರ ಮೊಯಿಲಿ ನೇತೃತ್ವದ ಸರ್ಕಾರ ಈ ನಿರ್ಧಾರ ಕೈಗೊಂಡಿತ್ತು. ಇದು ಎಸ್‌ಸಿ- ಶೇ 18, ಎಸ್‌ಟಿ- ಶೇ 5, ಪ್ರವರ್ಗ 1- ಶೇ 7, ಪ್ರವರ್ಗ 2 (ಎ)- ಶೇ 20, ಪ್ರವರ್ಗ 2 (ಬಿ)- ಶೇ 6, ಪ್ರವರ್ಗ 3(ಎ) ಶೇ 7 ಮತ್ತು ಪ್ರವರ್ಗ 3 (ಬಿ)- ಶೇ 10 ಹೀಗೆ ಮೀಸಲಾತಿಯನ್ನು ಶೇಕಡ 73ಕ್ಕೆ ಹೆಚ್ಚಿಸಿದ್ದ ಐತಿಹಾಸಿಕ ನಿರ್ಧಾರದ ಕಾನೂನು. ಈ ಮೀಸಲಾತಿ ಕಾನೂನನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು. ಇತಿಹಾಸದ ವ್ಯಂಗ್ಯವೆಂದರೆ, ಈ ಕಾನೂನು ರಚನೆಗೆ ಕಾರಣವಾಗಿದ್ದ ಕಾಂಗ್ರೆಸ್ ಪಕ್ಷ ಮತ್ತು ವೀರಪ್ಪ ಮೊಯಿಲಿ ಅವರೂ ಈ ಕಾನೂನನ್ನು ಮರೆತಿರುವುದು.

ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬೊಮ್ಮಾಯಿ ಅವರು ಹೇಳಿಕೊಳ್ಳುತ್ತಿರುವಂತೆ ಬಿಜೆಪಿಯು ಪ್ರಾಮಾಣಿಕವಾಗಿ ಸಾಮಾಜಿಕ ನ್ಯಾಯದ ಪರ ನಿಲುವು ಹೊಂದಿದ್ದರೆ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ, ಕಾಂಗ್ರೆಸ್ ಸರ್ಕಾರ ರೂಪಿಸಿದ ಶೇಕಡ 73ರ ಮೀಸಲಾತಿ ಕಾನೂನಿಗೆ ತನ್ನ ಬೆಂಬಲ ಇದೆ ಎಂದು ಘೋಷಿಸಬೇಕು, ಮೀಸಲಾತಿ ಹೆಚ್ಚಳಕ್ಕೆ ಅಗತ್ಯವಿರುವ ಅಂಕಿ–ಅಂಶಗಳನ್ನು ಸಲ್ಲಿಸಬೇಕು.

ಚುರುಮುರಿ



ಟಿಕೆಟ್ ಟೂರ್ನಿ

• ಮಣ್ಣೆರಾಜು

‘ನೋಡ್ರೀ, ಕಾಂಗ್ರೆಸ್‌ನವರು ಬಿಜೆಪಿಯವರಿಗೆ ಬೈಯ್ತಿದ್ದಾರೆ... ರಾಜಕಾರಣಿಗಳ ಬೀದಿ ಬೈಗುಳ ಕೇಳಲಾಗ್ತಿಲ್ಲ...’ ಸುಮಿ ಟಿ.ವಿ. ಮ್ಯೂಟ್ ಮಾಡಿದಳು.

‘ಇನ್ನೊಂದು ಚಾನೆಲ್ ಹಾಕಿ ನೋಡು, ಅದರಲ್ಲಿ ಬಿಜೆಪಿಯವರು ಕಾಂಗ್ರೆಸ್‌ನವರನ್ನು ಬೈಯ್ಯುತ್ತಿರುತ್ತಾರೆ’ ಅಂದ ಶಂಕ್ರಿ.

‘ದಿನಾ ಹೀಗೆ ಬೈಗುಳ ಬಿತ್ತರಿಸುತ್ತಿದ್ದರೆ ನಮ್ಮ ಟೀವಿ ಕೆಡೋದಿಲ್ವೇನ್ರೀ?’

‘ಟೀವಿನೂ ಕೆಡಲ್ಲ, ಜನರೂ ಕೆಡೋದಿಲ್ಲ. ಎಲೆಕ್ಷನ್ ದೇವರು ಮೈಮೇಲೆ ಬಂದಾಗ ರಾಜಕಾರಣಿಗಳು ಪ್ರೇಕ್ಷಕರ ಮನರಂಜನೆಗಾಗಿ ಹೀಗೆ ಬೈದಾಡ್ತಾರೆ ಅಂತ ಎಲ್ಲರಿಗೂ ಗೊತ್ತು. ಇಷ್ಟವಾದರೆ ಆನಂದಿಸಬಹುದು, ಆಗದಿದ್ದರೆ ಅಸಹ್ಯಪಡಬಹುದು’.

‘ಈಗ ಎರಡು, ಮೂರನೇ ಸಾಲಿನ ನಾಯಕರೂ ಬೈದಾಟ ಶುರುಮಾಡಿದ್ದಾರೆ’.

‘ಟಿಕೆಟ್ ಟೂರ್ನಿಯ ಅರ್ಹತಾ ಸುತ್ತಿನ ಆಟ ಆರಂಭವಾಗಿದೆ. ಟಿಕೆಟ್ ಆಕಾಂಕ್ಷಿ ನಾಯಕರು ಎದುರಾಳಿಗಳನ್ನು ಬೈದು ಬೆಲೆ ಕಳೆದು, ತಮ್ಮ ನಾಯಕರ ಗಮನ ಸೆಳೆದು ಬೇಳೆ ಬೇಯಿಸಿಕೊಳ್ಳುವ ಕ್ರೀಡಾ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ’.

‘ಕುಟುಂಬಕ್ಕೊಂದೇ ಸೀಟು ಅಂತ ಬಿಜೆಪಿ ನಾಯಕರು ಕಟ್ಟಾದೇಶ ಮಾಡಿದ್ದಾರಂತೆ’.

‘ಹೌದು. ಮೊದಲಿನಂತೆ ಮಗನಿಗೊಂದು, ಮೈದುನನಿಗೊಂದು ಸೀಟು ಕಾಯ್ದಿರಿಸುವಂತಿಲ್ಲ. ಹೆಸರು ಕೆಡಿಸಿಕೊಳ್ಳದ, 70 ವರ್ಷ ವಯಸ್ಸು ಮೀರದ ಪಕ್ಷನಿಷ್ಠರಿಗೆ ಆದ್ಯತೆಯಂತೆ. ಅರ್ಹ ಸೀಟಾಕಾಂಕ್ಷಿಗಳು ತಮ್ಮ ಕ್ಯಾರೆಕ್ಟರ್ ಸರ್ಟಿಫಿಕೇಟ್, ಪ್ರೋಗ್ರೆಸ್ ರಿಪೋರ್ಟ್ ಸಲ್ಲಿಸುವುದು ಕಂಪಲ್ಸರಿ ಅಂತೆ’.

‘ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮುಡಿ ಕೊಡ್ತೀನಿ ಅಂತ ದೇವರಿಗೆ ಹರಕೆ ಮಾಡಿಕೊಳ್ಳೋದು ಸಹಜ. ಆದರೆ, ಕಾಂಗ್ರೆಸ್ 170 ಸೀಟು ಗೆದ್ದರೆ ತಮ್ಮ ಬೆರಳು ಕತ್ತರಿಸಿಕೊಡ್ತೀನಿ ಅಂತ ಬಿಜೆಪಿ ಶಾಸಕರೊಬ್ಬರು ಹರಕೆ ಹೊತ್ತಿದ್ದಾರಂತೆ ಕಣ್ರೀ’.

‘ಅದು ಹರಕೆ ಅಲ್ಲ, ಸವಾಲು. ಎಲೆಕ್ಷನ್ ಟೈಮಿನಲ್ಲಿ ಬೇರೆ ಪಕ್ಷದವರಿಗೆ ಬೆರಳು ಕೊಟ್ಟರೆ ಹಸ್ತವನ್ನೇ ನುಂಗಿಬಿಡ್ತಾರೆ ಅನ್ನೋದು ಎಲ್ಲರಿಗೂ ಗೊತ್ತು. ಬೇಕಾದ್ರೆ ಕೈ ಕೊಡ್ತಾರೆ, ಬೆರಳು ಮಾತ್ರ ಕೊಡೋದಿಲ್ಲ...’ ಅಂದ ಶಂಕ್ರಿ.

ಸಂಗತ

ಹಸಿವೆ ಎಂಬ ಹೆಬ್ಬಾವು

ಭಾರತವು ಜನಸಂಖ್ಯೆ– ಸಂಪತ್ತು ಎರಡರಲ್ಲಿಯೂ ಶ್ರೀಮಂತವಾಗಿದ್ದರೂ ಹಸಿವಿನ ಸೂಚ್ಯಂಕದಲ್ಲಿ ಕುಸಿಯಲು ಕಾರಣವೇನು ಎಂಬ ಪ್ರಶ್ನೆ ಕಾಡುತ್ತದೆ

• ಡಾ. ಸರ್ಫ್ರಾಜ್ ಚಂದ್ರಗುತ್ತಿ

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ (ಜಿಎಚ್‌ಐ) ಭಾರತದ ಸ್ಥಾನ (121 ದೇಶಗಳ ಪೈಕಿ 107ನೇ ಸ್ಥಾನ) ಈ ಸಲ ಮತ್ತಷ್ಟು ಕುಸಿದಿರುವುದರ ಕುರಿತು ಚರ್ಚೆ ಬಿರುಸಿನಿಂದ ಸಾಗಿದೆ. ಹಸಿವಿನ ಸೂಚ್ಯಂಕದಲ್ಲಿ, ಕೃಷಿ ಪ್ರಧಾನ ರಾಷ್ಟ್ರವೊಂದರ ಇಂತಹ ಕೆಳಮುಖ ಚಲನೆಯು ಅನೇಕ ಪ್ರಶ್ನೆಗಳಿಗೆ ಕಾರಣವಾಗುತ್ತದೆ. ತ್ರೇತಾಯುಗ ಕಳೆದು ದ್ವಾಪರಯುಗ ಶುರುವಾಗುವ ಹೊತ್ತಿಗೆ 12 ವರ್ಷಗಳ ಕಾಲ ದೀರ್ಘ ಬರಗಾಲ ಸೃಷ್ಟಿಯಾದದ್ದರ ಬಗ್ಗೆ ಮಹಾಭಾರತದ ಶಾಂತಿ ಪರ್ವದಲ್ಲಿ ಪ್ರಸ್ತಾಪಿಸಲಾಗಿದೆ. ಎಲ್ಲಿ ನೋಡಿದರೂ ಜನ, ಜಾನುವಾರುಗಳು ರಾಶಿ ರಾಶಿಯಾಗಿ ಸತ್ತು ಬಿದ್ದಿರುವ ಚಿತ್ರಣವನ್ನು ಅಲ್ಲಿ ನೀಡಲಾಗಿದೆ. ಇಂತಹ ಬರಗಾಲವೇನೂ ಇತ್ತೀಚಿನ ದಶಕಗಳಲ್ಲಿ ದೇಶದಲ್ಲಿ ಎದುರಾಗಿಲ್ಲ. ಒಂದಿಷ್ಟು ಅತಿವೃಷ್ಟಿ- ಅನಾವೃಷ್ಟಿ ಅಲ್ಲಲ್ಲಿ ಉಂಟಾಗಿದ್ದರೂ ಅವು ಅದೃಷ್ಟವಶಾತ್ ತೀರಾ ವಿನಾಶಕಾರಿ ಪರಿಣಾಮಗಳನ್ನು ಉಂಟುಮಾಡಿಲ್ಲ.

ಭಾರತದ ಜಿಡಿಪಿಯು ಈಗ ವಿಶ್ವದಲ್ಲಿ 5ನೇ ಸ್ಥಾನದಲ್ಲಿದೆ. ದೇಶದ ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದ ಸಂಪತ್ತು ಶೇಕಡ 1ರಷ್ಟು ಶ್ರೀಮಂತರ ಬಳಿ ಸಂಗ್ರಹಗೊಂಡಿದೆ ಎಂದು ಆಕ್ಸ್‌ಫ್ಯಾಮ್ ವರದಿಯೊಂದು ಹೇಳಿದೆ. ಭಾರತವು ಜನಸಂಖ್ಯೆ ಹಾಗೂ ಸಂಪತ್ತು ಎರಡರಲ್ಲಿಯೂ ಶ್ರೀಮಂತವಾಗಿದೆ. ಹೀಗಿದ್ದೂ ಹಸಿವಿನ ಸೂಚ್ಯಂಕದಲ್ಲಿ ದೇಶವು ಹೀಗೆ ಕೆಳಗೆ ಬೀಳಲು ಕಾರಣವೇನು?

ದೇಶದಲ್ಲಿ ಆಹಾರ ಧಾನ್ಯಗಳ ಕೊರತೆಯಿಲ್ಲ. ಆದರೆ ಅವು ಸರ್ಕಾರದ ಅಧೀನದ ಗೋದಾಮುಗಳಲ್ಲಿ ಸಂಗ್ರಹಗೊಂಡಿವೆ. ಸಂಪತ್ತಾಗಿ ಕೆಲವರ ಬಳಿ ಶೇಖರಗೊಂಡಿವೆ. ಅಗತ್ಯ ಇರುವವರಿಗೆ ಅಗತ್ಯ ಪ್ರಮಾಣದಲ್ಲಿ ವಿತರಣೆಯಾಗುತ್ತಿಲ್ಲ. ಇದನ್ನೇ ಕವಿ ಬೇಂದ್ರೆ ‘ಅನ್ನ ಇದೆ ಎಲ್ಲಿ ಇಲ್ಲ? ಇಲ್ಲೆ ಸುತ್ತುಮುತ್ತಿದೆ’ (ಅನ್ನಯಜ್ಞ) ಎಂದಿದ್ದರು.

ಗೌತಮ ಬುದ್ಧ ತನ್ನ ಶಿಷ್ಯರಿಗೆ ಕೇಳಿದ ಪ್ರಶ್ನೆ- ‘ಜಗತ್ತಿನಲ್ಲಿ ಯಾವುದು ಅತಿ ಭಯಂಕರ ರೋಗ’. ಅವರೆಲ್ಲ ತಮತಮಗೆ ತೋಚಿದ ಉತ್ತರಗಳನ್ನು ನೀಡಿದ ಮೇಲೆ ಬುದ್ಧ ಹೇಳಿದ್ದು ‘ಜಗತ್ತಿನಲ್ಲಿ ಹಸಿವೆಯನ್ನು ಮೀರಿದ ರೋಗವಿಲ್ಲ. ಅದನ್ನು ಗೆಲ್ಲುವ ಹೋರಾಟವೇ ಈ ಜೀವನ’. ವಿವೇಕಾನಂದರು ವಿದೇಶದಲ್ಲಿದ್ದಾಗ ಭಾರತದಲ್ಲಿ ಉಂಟಾದ ಕ್ಷಾಮದಿಂದಾಗಿ ಜನ ಹಸಿವೆಯಿಂದ ಸಾಯುತ್ತಿರುವ ವರದಿಗಳನ್ನು ಓದಿ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರಂತೆ. ‘ಜನ ರೋಗರುಜಿನಗಳಿಂದ ಸತ್ತರೆ ಅದು ಸಹಜ. ಆದರೆ ಉಣ್ಣಲು ಮುಷ್ಟಿ ಅನ್ನವೂ ದೊರೆಯದೆ ಸಾಯುತ್ತಿರುವುದನ್ನು ನೋಡುವುದು ನನ್ನಿಂದಾಗದು’ ಎಂದಿದ್ದರು ಅವರು. ಕನ್ನಡದ ಆದಿವಚನಕಾರ ಜೇಡರ ದಾಸಿಮಯ್ಯ, ‘ಹಸಿವೆಯೆಂಬ ಹೆಬ್ಬಾವು, ಬಸಿರ ಬಂದು ಹಿಡಿದಡೆ, ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ’ ಎಂದು ಹಸಿವಿನ ತೀವ್ರತೆಯ ಕುರಿತು ಹೇಳಿದ್ದಾರೆ.

ಹೂಡಿಕೆದಾರರ ಸಮಾವೇಶ ಆಯೋಜಿಸುತ್ತೇವೆ. ಉದ್ಯಮಿಗಳಿಗೆ ನಾನಾ ಬಗೆಯ ರಿಯಾಯಿತಿಗಳನ್ನು ಘೋಷಿಸುತ್ತೇವೆ. ಬಂಡವಾಳ ಅಷ್ಟು ಬಂತು ಇಷ್ಟು ಬಂತು ಎಂದು ಹೇಳುತ್ತೇವೆ. ಇದರಿಂದ ಎಷ್ಟು ಜನರಿಗೆ ಉದ್ಯೋಗ ದೊರೆಯಿತೋ? ದೇಶದ ಬಡವರ ಸ್ಥಿತಿಗತಿಯಂತೂ ಸುಧಾರಣೆಯಾಗಿಲ್ಲ. ಸಂಪತ್ತಿನ ಅಸಮಾನ ಹಂಚಿಕೆಯಿಂದ ಉಳ್ಳವರು ಹಾಗೂ ಬಡವರ ನಡುವಿನ ಅಂತರ ದಿನೇದಿನೇ ಹೆಚ್ಚಾಗುತ್ತಿರುವುದನ್ನು ದೇಶದ ಸಾಮಾನ್ಯ ಪ್ರಜೆ ಅಸಹಾಯಕತೆಯಿಂದ ನೋಡುವಂತಾಗಿದೆ. ಆರ್ಥಿಕ ಅಭಿವೃದ್ಧಿಯ ಪ್ರಯೋಜನ ಕೂಡ ಎಲ್ಲರಿಗೂ ಸಮಾನವಾಗಿ ಸಿಗಬೇಕು ಎಂಬ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರ ಸಲಹೆ ಆಳುವ ಜನರಿಗೆ ಬೇಕಾಗಿಲ್ಲ.



ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ನಡೆಸಿದ ಸಮೀಕ್ಷೆಯೊಂದರ ಪ್ರಕಾರ, ವಿಶ್ವದ ಒಟ್ಟು ಬಡವರ ಪೈಕಿ ಶೇಕಡ 25ರಷ್ಟು ಜನ ಭಾರತದಲ್ಲಿಯೇ ಇದ್ದಾರೆ. ಬಡವರ ಪಾಲಿನ ಅವಕಾಶಗಳ ನಿರಾಕರಣೆಯಿಂದ ಬಡತನದ ವಿಸ್ತರಣೆಯಾಗುತ್ತಿದೆ. ಆರ್ಥಿಕವಾಗಿ ಅತಿ ಕೆಳಮಟ್ಟದಲ್ಲಿರುವ ಜನರ ಜೀವನ ಸುಧಾರಣೆಯಿಂದ ಬರುವ ಆರ್ಥಿಕ ಪ್ರಯೋಜನವನ್ನು ನಮ್ಮ ನೆರೆಯ ದೇಶ ಚೀನಾ ಬಹುಬೇಗ ಅರಿತುಕೊಂಡಿತು. ಆ ದಿಸೆಯಲ್ಲಿ ಅನೇಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ್ದರಿಂದ ಹಸಿವು- ಅಪೌಷ್ಟಿಕತೆಯ ಸಮಸ್ಯೆಯು ಆ ದೇಶವನ್ನು ಅಷ್ಟಾಗಿ ಕಾಡುತ್ತಿಲ್ಲ. ಇನ್ನೊಂದು ಮುಖ್ಯವಾದ ಸಮಸ್ಯೆಯನ್ನು ನಾವಿಲ್ಲಿ ಗಮನಿಸಬೇಕಾಗಿದೆ. ಪ್ರಪಂಚದಲ್ಲಿ ಉತ್ಪಾದನೆಯಾಗುವ ಆಹಾರದ ಮೂರನೇ ಒಂದು ಪಾಲು ವ್ಯರ್ಥವಾಗುತ್ತಿದೆ.

ನಮ್ಮ ದೇಶದಲ್ಲಂತೂ ತಟ್ಟೆಯಲ್ಲಿ ಆಹಾರವನ್ನು ಬಿಟ್ಟು ಏಳುವುದನ್ನು ಸಾಮಾಜಿಕ ಪ್ರತಿಷ್ಠೆ ಎಂಬಂತೆ ಸಂಭ್ರಮಿಸುವ ಮನಸ್ಸುಗಳಿವೆ. ಕೆಲವರು ತಿಂದಿದ್ದನ್ನು ಜೀರ್ಣಿಸಿಕೊಳ್ಳಲು ನಾನಾ ಬಗೆಯ ಕಸರತ್ತುಗಳನ್ನು ಮಾಡುತ್ತಾರೆ. ಇನ್ನು ಕೆಲವರಿಗೆ ದಿನದ ಹೊಟ್ಟೆ ಹೊರೆಯುವುದು ಹೇಗೆ ಎಂಬ ಚಿಂತೆ. ಬಡತನ ನಿರ್ಮೂಲನೆಗೆ ಹಲವಾರು ಕಾರ್ಯಕ್ರಮಗಳು ಘೋಷಣೆಯಾಗಿವೆ. ಅದಕ್ಕಾಗಿ ಅಪಾರ ಹಣ ವೆಚ್ಚವಾಗಿದೆ. ಆದರೆ ಬಡತನದ ಬೇಗೆ ಮಾತ್ರ ಹೆಚ್ಚುತ್ತಲೇ ಇರುವುದು ಅತ್ಯಂತ ನೋವಿನ ಸಂಗತಿ.

ವಾಚಕರ ವಾಣಿ

ಅತ್ಯಾಚಾರ: ಕಠಿಣ ಶಿಕ್ಷೆ ಆಗಬೇಕು

ಮಳವಳ್ಳಿಯಲ್ಲಿ ಅತ್ಯಾಚಾರ ಮತ್ತು ಕೊಲೆಗೀಡಾದ ಬಾಲಕಿಯ ಕುಟುಂಬಸ್ಥರಿಗೆ ಮುಖ್ಯಮಂತ್ರಿ ₹ 10 ಲಕ್ಷ ಪರಿಹಾರ ನೀಡಿದ ಸಂದರ್ಭದಲ್ಲಿ, ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ಆಗುವಂತೆ ನೋಡಿಕೊಳ್ಳುವುದಾಗಿ ಹೇಳಿದ್ದಾರೆ. ಇದು, ತ್ವರಿತವಾಗಿ ಆಗಬೇಕಿರುವ ಕೆಲಸ. ಅತ್ಯಾಚಾರದಂತಹ ಹೀನ ಕೃತ್ಯಗಳು ಬೆಳಕಿಗೆ ಬಂದಾಗ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕೆಂಬ ಕೂಗು ಏಳುತ್ತದೆ. ಕೆಲವೊಮ್ಮೆ ಜನ ಬೀದಿಗೆ ಇಳಿದು ಆಗ್ರಹಿಸುತ್ತಾರೆ. ತದನಂತರ ಇಂತಹ ಪ್ರಕರಣಗಳ ಬಗ್ಗೆ ಮರೆತುಬಿಡುತ್ತೇವೆ. ಅತ್ಯಾಚಾರ ಪ್ರಕರಣಗಳು ಶೀಘ್ರ ಇತ್ಯರ್ಥ ಆಗಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು.

ಆನಂದ ಜೇವೂರ್, ಕಲಬುರಗಿ

ಸಹಭೋಜನ: ಮಾದರಿ ನಡೆ

ಕೋಲಾರ ತಾಲ್ಲೂಕಿನ ತೋಕಲಘಟ್ಟ ಎಂಬ ಗ್ರಾಮದಲ್ಲಿ, ಸವರ್ಣೀಯರ ಮನೆಯಲ್ಲಿ ಆಹ್ವಾನಿತ ದಲಿತರು ಸಹಭೋಜನ ಸವಿದ ವಿಷಯ, ಚಿತ್ರಸಮೇತ ವರದಿಯಾಗಿದೆ (ಪ್ರ.ವಾ., ಅ. 19). ರಾಜಕೀಯ ಧುರೀಣರೋ ಮಠಾಧಿಪತಿಗಳೋ ದಲಿತರ ಮನೆಗೆ ಹೋಗಿ, ಅವರ ಜೊತೆಯಲ್ಲಿ ಊಟ ಮಾಡಿದ ಸುದ್ದಿಗಳನ್ನು ಇಲ್ಲಿಯವರೆಗೆ ಓದಿ ತಿಳಿದಿದ್ದ ನಮಗೆ ಈ ಸುದ್ದಿ ಹೊಸತು ಅನ್ನಿಸಿತು.

ರಾಜಕೀಯ ಧುರೀಣರು ಅಥವಾ ಸ್ವಾಮಿಗಳು ದಲಿತರ ಮನೆಗೆ ಊಟಕ್ಕೆ ಹೋದ ಸುದ್ದಿ ಓದಿದಾಗ ಅದರ ಹಿಂದೆ ಸಮಭಾವ, ಸದಾಶಯ ಇದೆ ಅಂತ ಅನ್ನಿಸುವುದಿಲ್ಲ. ಆದರೆ ತೋಕಲಘಟ್ಟ ಸಹಭೋಜನ ಸಂದರ್ಭದಲ್ಲಿ ‘ನೋಡಿ, ನೀವು ಬೇರೆ ಅಲ್ಲ, ನಾವು ಬೇರೆ ಅಲ್ಲ, ನಾವೆಲ್ಲ ಒಂದೇ. ಬನ್ನಿ, ಜೊತೆಯಲ್ಲಿ ಊಟ ಮಾಡೋಣ’ ಎಂಬ ಸಮಭಾವ ಕಾಣಿಸುತ್ತದೆ. ಆದ್ದರಿಂದ ಯಾರಿಗಾದರೂ ದಲಿತರ ಬಗ್ಗೆ ಕಿಂಚಿತ್ ಕಾಳಜಿ ಏನಾದರೂ ಇದ್ದರೆ, ಅವರನ್ನು ತಮ್ಮ ಮನೆಗೆ ಆಹ್ವಾನಿಸಿ, ಅವರ ಜೊತೆಯಲ್ಲಿ ಕುಳಿತು ಊಟ ಮಾಡಲಿ. ಅದುಬಿಟ್ಟು ಅವರ ಮನೆಗೆ ತಾವು ಊಟಕ್ಕೆ ಹೋಗುವ ನಾಟಕವನ್ನು ನಿಲ್ಲಿಸಲಿ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಕನ್ನಡ ಅಂಕಿ ಬಳಸುವುದಿಲ್ಲವೇಕೆ?

ಕನ್ನಡ ಅಂಕಿಗಳ ಉಪಯೋಗ ಮೊದಲಿನಿಂದಲೂ ಬಹಳ ಕಡಿಮೆ. ರಾಜ್ಯ ಸರ್ಕಾರವು ಕನ್ನಡ ಅಂಕಿಗಳನ್ನು ಬಳಸುವ, ಬೆಳೆಸುವ ಮತ್ತು ಉಳಿಸುವ ಕೆಲಸ ಮಾಡಲಿ. ಇಂದಿನ ತಲೆಮಾರಿನವರಿಗೆ ಕನ್ನಡ ಅಂಕಿಗಳನ್ನು ಬರೆದು ತೋರಿಸಿದರೂ ಗೊತ್ತೇ ಆಗುವುದಿಲ್ಲ! ಕಣ್ಣ ಮುಂದೆ ನಮ್ಮ ಭಾಷೆಯ ಅಂಕಿಗಳು ನಶಿಸಿ ಹೋಗುತ್ತಿರುವುದು ನಮ್ಮ ದೌರ್ಭಾಗ್ಯವೇ ಸರಿ. ಕನ್ನಡ ಅಂಕಿಗಳನ್ನು ಯಥೇಚ್ಛವಾಗಿ ಬಳಸುವ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು.

ಹರವೆ ಸಂಗಣ್ಣ ಪ್ರಕಾಶ್, ಹರವೆ, ಚಾಮರಾಜನಗರ

ಬೆಳಕನ್ನು ಸಂಭ್ರಮಿಸೋಣ, ಪಟಾಕಿಯನ್ನಲ್ಲ

ಪಟಾಕಿ ಇಲ್ಲದ ದೀಪಾವಳಿಯನ್ನು ಊಹಿಸಿಕೊಳ್ಳುವುದೇ ಕಷ್ಟ. ಬರೀ ದೀಪಗಳ ಬೆಳಗುವಿಕೆಯಿಂದ ಸುಂದರಗೊಳ್ಳುತ್ತಿದ್ದ ಸಂಜೆಗೆ ಯಾವಾಗ ಪಟಾಕಿ ತಳುಕು ಹಾಕಿಕೊಂಡಿತೋ ಗೊತ್ತಿಲ್ಲ. ಪಟಾಕಿ ಸುಟ್ಟಾಗ ಮೂಡುವ ಬೆಳಕು ಹಾಗೂ ಹೊಮ್ಮುವ ಸದ್ದು ಆ ಕ್ಷಣಕ್ಕೆ ಸಂಭ್ರಮ ಮೂಡಿಸಿದರೂ, ಆ ಬೆಳಕು ಅಡಗಿದ ಬಳಿಕ ಏಳುವ ಹೊಗೆ ಅತ್ಯಂತ ವಿಷಕಾರಿಯಾಗಿರುತ್ತದೆ.

ಪಟಾಕಿಯಲ್ಲಿರುವ ವಿವಿಧ ಬಗೆಯ ರಾಸಾಯನಿಕಗಳು ಗಾಳಿಗೆ ಸೇರಿದಾಗ ನಮ್ಮ ಉಸಿರಾಟದ ನಾಳಗಳಲ್ಲಿ ಉರಿ ತರಿಸುತ್ತವೆ, ರಕ್ತದಲ್ಲಿ ಸೇರಿ ಅದರ ಕ್ಷಮತೆಯನ್ನು ಕುಗ್ಗಿಸುತ್ತವೆ, ತನ್ಮೂಲಕ ರಕ್ತಹೀನತೆ ಎದುರಾಗುತ್ತದೆ. ನರ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತವೆ. ಇದಲ್ಲದೆ ಪಟಾಕಿಗಳಿಂದ ಆಗುವ ಅಗ್ನಿ ಅನಾಹುತ, ಶಬ್ದಮಾಲಿನ್ಯ, ವಾಯುಮಾಲಿನ್ಯ ಹಾಗೂ ಪ್ರಾಣಿಗಳಿಗೆ ಎದುರಾಗುವ ಕುತ್ತು ಅಷ್ಟಿಷ್ಟಲ್ಲ. ಪಟಾಕಿಗಳನ್ನು ಸುಡುವುದರಿಂದ ಇಷ್ಟೆಲ್ಲ ತೊಂದರೆ ಇರುವುದನ್ನು ಅರಿತು, ಈ ಬಾರಿಯ ದೀಪಾವಳಿಯಲ್ಲಿ ದೀಪಗಳನ್ನು ಮಾತ್ರ ಬೆಳಗಿಸಿ ಸಂಭ್ರಮಪಡೋಣ. ಹಾನಿಕಾರಕ ಪಟಾಕಿಗಳಿಂದ ದೂರವಿರೋಣ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಸ್ವಜಾತಿಯವರಲ್ಲೇ ಇದೆ ಮದ್ದು

‘ಜಾತಿ ಎಂಬ ಕಾಯಿಲೆಗೆ ಮದ್ದುಂಟು’ ಎಂಬ ಲೇಖನದಲ್ಲಿ (ಸಂಗತ, ಅ. 19) ಚನ್ನು ಅ. ಹಿರೇಮಠ ಅವರು, ಪರಿಶಿಷ್ಟ ಸಮುದಾಯದವರ ಮೇಲಿನ ದೌರ್ಜನ್ಯ ತಡೆಗೆ ಕಾನೂನು ಕ್ರಮದ ಜೊತೆಗೆ ಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಮೇಲೆತ್ತುವ ದಿಸೆಯಲ್ಲಿ ಮೀಸಲಾತಿಯನ್ನು, ವಿವಿಧ ಅಭಿವೃದ್ಧಿ ಸೌಲಭ್ಯಗಳನ್ನು ನೀಡುವುದಲ್ಲದೆ ಅವರ ಮೇಲಾಗುವ ದೌರ್ಜನ್ಯಗಳ ತಡೆಗೆ ಕಾನೂನು ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ. 75 ವರ್ಷಗಳಿಂದ ನಿರಂತರವಾಗಿ ಇಂತಹ ಪ್ರಯತ್ನಗಳು ನಡೆದರೂ ಇನ್ನೂ ಈ ಸಮುದಾಯದವರನ್ನು ಮೇಲಕ್ಕೆತ್ತಲು ಸಾಧ್ಯವಾಗಿಲ್ಲ ಎಂದಾದರೆ ಅದಕ್ಕೆ ಕಾರಣಗಳು ಏನಿರಬಹುದು?

ಈ ಸಮುದಾಯದ ಅದೆಷ್ಟೋ ಮಂದಿ ರಾಜಕಾರಣದಲ್ಲಿ ಇದ್ದಾರೆ, ಸಮಾಜದಲ್ಲಿ ಒಳ್ಳೆಯ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂತಹವರು ತಮ್ಮ ಸಮುದಾಯದ ದುರ್ಬಲರಾದ ಎಷ್ಟು ಜನರನ್ನು ಮೇಲಕ್ಕೆತ್ತಲು ಪ್ರಯತ್ನಿಸಿದ್ದಾರೆ? ಪ್ರಬಲ ರಾಜಕಾರಣಿ ಅದೇ ಸಮುದಾಯದ ದುರ್ಬಲ ವ್ಯಕ್ತಿಯನ್ನು ಮೇಲೆ ಬರಲು ಬಿಡುವರೇ? ಅವರ ಬೆಂಬಲವು ತಮ್ಮ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಮಾತ್ರ. ತಮ್ಮ ಸಮುದಾಯದ ದುರ್ಬಲರಿಗೆ ಸಹಾಯಹಸ್ತ ನೀಡುವ ಜವಾಬ್ದಾರಿ ಇಂತಹವರಿಗೆ ಇರಬೇಡವೆ? ಸರ್ಕಾರದ ಸವಲತ್ತುಗಳನ್ನು ಅಭಿವೃದ್ಧಿ ಹೊಂದಿದವರೇ ಮತ್ತೆ ಮತ್ತೆ ಉಪಯೋಗಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಇಂತಹ ವಿಷಯಗಳ ಬಗ್ಗೆ ದುರ್ಬಲರಲ್ಲಿ ಜಾಗೃತಿ ಮೂಡಿಸುವುದು ಅತ್ಯವಶ್ಯಕ ಹಾಗೂ ಪರಿಣಾಮಕಾರಿ ಕೂಡ. ಅವರಿಂದಲೇ ಇದಕ್ಕೆ ಮದ್ದು ನೀಡಲು ಸಾಧ್ಯ.

ಕೆ.ಪ್ರಭಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಅಧ್ಯಕ್ಷ ಹುದ್ದೆಯ ವೈವಿಧ್ಯ

ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅಧ್ಯಕ್ಷ ಹುದ್ದೆಯ ಚುನಾವಣಾ ಕಣಕ್ಕೆ ಖರ್ಗೆ ಅವರು ಇಳಿದಾಗಿನಿಂದ, ಅವರು ಸೋನಿಯಾ ಗಾಂಧಿ ಕುಟುಂಬದ ಕೈಗೊಂಬೆಯಾಗಿದ್ದಾರೆ ಎಂಬ ಟೀಕೆ ಕೇಳಿಬರುತ್ತಿದೆ. ಖರ್ಗೆ ಅವರ ಗೆಲುವು ಮತ್ತು ಶಶಿ ತರೂರ್ ಅವರ ಸೋಲನ್ನು, 'ಕಾಂಗ್ರೆಸ್, ನೆಹರೂ–ಗಾಂಧಿ ಕುಟುಂಬದ ಹಿಡಿತದಲ್ಲೇ ಉಳಿದಿದೆ' ಎಂದು ವಿಶ್ಲೇಷಿಸಲಾಗುತ್ತಿದೆ. ಆದರೂ, ಬರೋಬ್ಬರಿ 24 ವರ್ಷಗಳ ನಂತರ ನೆಹರೂ ಕುಟುಂಬದ ಹೊರಗಿನವರಿಗೆ ಪಕ್ಷದ ಚುಕ್ಕಾಣಿ ದೊರೆತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಒಟ್ಟು 19 ಮಂದಿ ಚುನಾಯಿತರಾಗಿದ್ದಾರೆ. ಈ 19ರಲ್ಲಿ ನೆಹರೂ ಕುಟುಂಬದಿಂದ ಅಧ್ಯಕ್ಷರಾದವರ ಸಂಖ್ಯೆ ಐದು ಮಾತ್ರ

● ಜಯಸಿಂಹ ಆರ್.

ಭಾರತದ ಅತ್ಯಂತ ಹಳೆಯ ರಾಜಕೀಯ ಪಕ್ಷವಾದ ಕಾಂಗ್ರೆಸ್ ಈಗ 137 ವರ್ಷಗಳನ್ನು ಪೂರೈಸಿದೆ. 1885ರಿಂದ 2022ರವರೆಗೆ ಪಕ್ಷವು ಹಲವು ಏರಿಳಿತಗಳನ್ನು ಕಂಡಿದೆ. ಸ್ವಾತಂತ್ರ್ಯ ಪೂರ್ವ ಭಾರತ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲೂ ಕಾಂಗ್ರೆಸ್ ಹಲವು ಬಾರಿ ವಿಭಜನೆಯಾಗಿದೆ. ಈ ಅವಧಿಯಲ್ಲಿ ಒಟ್ಟು 62 ಮಂದಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸಿದ್ದಾರೆ. ಮೋತಿಲಾಲ್ ನೆಹರೂ ಅವರಿಂದ ರಾಹುಲ್ ಗಾಂಧಿಯವರೆಗೆ ಈ ಕುಟುಂಬದ ಐದು ಪೀಳಿಗೆ ಅಧ್ಯಕ್ಷ ಹುದ್ದೆಗೆ ಏರಿದವರ ಸಂಖ್ಯೆ ಆರು.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ದೇಶದ ಎಲ್ಲಾ ಭಾಗಗಳ ರಾಜಕೀಯ ನಾಯಕರು ಕಾಂಗ್ರೆಸ್ ಅನ್ನು ಮುನ್ನಡೆಸಿದ್ದಾರೆ. ದಕ್ಷಿಣ, ಉತ್ತರ, ಮಧ್ಯ ಭಾರತ, ಪಶ್ಚಿಮ ಮತ್ತು ಈಶಾನ್ಯ ಭಾರತದ ನಾಯಕರೂ ಸಹ ಕಾಂಗ್ರೆಸ್‌ನ ಚುಕ್ಕಾಣಿ ಹಿಡಿದಿದ್ದಾರೆ. ಮಹಾತ್ಮ ಗಾಂಧಿ ಮತ್ತು ನೆಹರೂ ಅವರ ವಿಚಾರಗಳಿಗಿಂತ ಭಿನ್ನ ನಿಲುವು ಹೊಂದಿದ್ದವರೂ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಒಟ್ಟಾರೆ ಪಕ್ಷದ ಅಧ್ಯಕ್ಷ ಹುದ್ದೆ ನಿರ್ವಹಿಸಿದವರ ಪಟ್ಟಿಯು ದೇಶದ ಭೌಗೋಳಿಕ, ಸಾಂಸ್ಕೃತಿಕ, ಭಾಷಿಕ, ಸೈದ್ಧಾಂತಿಕ ಮತ್ತು ಸಾಮಾಜಿಕ ವೈವಿಧ್ಯದ ಪ್ರತೀಕದಂತಿದೆ.

ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಂದಿನಿಂದ ಪಕ್ಷವು ಅಧಿವೇಶನಗಳನ್ನು ಆಯೋಜಿಸುತ್ತಾ ಬಂದಿದೆ. ಅಧಿವೇಶನಗಳಲ್ಲಿ ಪಕ್ಷದ ಅಧ್ಯಕ್ಷರನ್ನು ಚುನಾಯಿಸಲಾಗುತ್ತಿತ್ತು ಮತ್ತು ಪಕ್ಷದ ಮುಂದಿನ ಹೋರಾಟವನ್ನು ನಿರ್ಧರಿಸಲಾಗುತ್ತಿತ್ತು. ಹೀಗಾಗಿ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮತ್ತು ಕಾಂಗ್ರೆಸ್ ಇತಿಹಾಸದಲ್ಲಿ ಈ ಅಧಿವೇಶನಗಳಿಗೆ ಮಹತ್ವದ ಸ್ಥಾನಗಳಿವೆ. ಈವರೆಗೆ ಇಂತಹ 84 ಅಧಿವೇಶನಗಳನ್ನು ಹಾಗೂ ಹತ್ತಾರು ಕಿರು ಅಧಿವೇಶನಗಳನ್ನು ಪಕ್ಷವು ನಡೆಸಿದೆ.

ಆರಂಭದಿಂದಲೂ ಕಾಂಗ್ರೆಸ್ ಅಧ್ಯಕ್ಷರ ಅಧಿಕಾರದ ಅವಧಿ ಒಂದು ವರ್ಷ ಮಾತ್ರ. 1990ರ ದಶಕದವರೆಗೂ ಈ ಪದ್ಧತಿಯನ್ನೇ ಅನುಸರಿಸಿಕೊಂಡು ಬರಲಾಗಿದೆ. ಪಕ್ಷದ ಅಧ್ಯಕ್ಷರನ್ನು ಚುನಾವಣೆಯ ಮೂಲಕ ಮತ್ತು ಒಮ್ಮತದ ಮೂಲಕ ಆಯ್ಕೆ ಮಾಡುವ ಎರಡು ಪದ್ಧತಿಗಳನ್ನು ಪಾಲಿಸಿಕೊಂಡು ಬರಲಾಗಿದೆ. ಅಧ್ಯಕ್ಷರಾಗಿದ್ದವರ ಕಾರ್ಯವೈಖರಿ ಮತ್ತು ನಿಲುವುಗಳು ಅವರು ಮರುಆಯ್ಕೆ ಆಗುವಂತೆ ಮಾಡಿವೆ. ಹಲವರು ಸತತ ಎರಡು ಅವಧಿಗೆ ಆಯ್ಕೆಯಾಗಿದ್ದರೆ, ಕೆಲವರು ಸತತ ನಾಲ್ಕು ಅವಧಿಗೂ ಆಯ್ಕೆಯಾಗಿದ್ದಾರೆ. ಹೀಗಿದ್ದೂ ಪಕ್ಷದ ಇತಿಹಾಸದಲ್ಲಿ ಅಧ್ಯಕ್ಷರ ಹುದ್ದೆಗೆ ನಡೆದ ಕೆಲವು ಚುನಾವಣೆಗಳು ಮಾತ್ರ ಹೆಚ್ಚು ಮಹತ್ವ ಪಡೆದಿವೆ. ಮಹಾತ್ಮ ಗಾಂಧಿ ಬೆಂಬಲಿತ ಅಭ್ಯರ್ಥಿ ಮತ್ತು ಸುಭಾಷ್ ಚಂದ್ರ ಬೋಸ್ ನಡುವಿನ ಸ್ಪರ್ಧೆ, 1998ರಲ್ಲಿ ಸೋನಿಯಾ ಅವರ ಸ್ಪರ್ಧೆ ಮತ್ತು ಈಗ ಮಲ್ಲಿಕಾರ್ಜುನ ಖರ್ಗೆ ಮತ್ತು ಶಶಿ ತರೂರ್ ಅವರ ಮಧ್ಯೆ ನಡೆದ ಸ್ಪರ್ಧೆಯು ಮಹತ್ವದ ಸ್ಥಾನ ಪಡೆದಿವೆ.

ಪಕ್ಷದ ಅಧ್ಯಕ್ಷ ಹುದ್ದೆಯಲ್ಲಿ ಅತಿಹೆಚ್ಚು ಅವಧಿಗೆ ಇದ್ದವರಲ್ಲಿ ನೆಹರೂ–ಗಾಂಧಿ ಕುಟುಂಬದವರದ್ದೇ ಸಿಂಹ ಪಾಲು. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಸಹ ಒಂದು ಅವಧಿಗಿಂತಲೂ ಹೆಚ್ಚು ಕಾಲ ಈ ಹುದ್ದೆಯನ್ನು ನಿರ್ವಹಿಸಿದ್ದಾರೆ. ಆದರೆ ಅತಿಹೆಚ್ಚು ಅವಧಿಗೆ ಈ ಹುದ್ದೆ ನಿರ್ವಹಿಸಿದ್ದು ಸೋನಿಯಾ ಗಾಂಧಿ (19 ವರ್ಷ). ಮಧ್ಯಂತರ ಅಧ್ಯಕ್ಷೆಯಾಗಿಯೂ ಅವರು ಎರಡೂವರೆ ವರ್ಷ ಪಕ್ಷವನ್ನು ಮುನ್ನಡೆಸಿದ್ದಾರೆ.

ಹಲವು ರಾಜ್ಯಗಳ ಪ್ರಾತಿನಿಧ್ಯ

ದೇಶದ ಬಹುತೇಕ ರಾಜ್ಯಗಳ ರಾಜಕೀಯ ನಾಯಕರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದಕ್ಷಿಣದ ಕರ್ನಾಟಕ, ಅವಿಭಜಿತ ಆಂಧ್ರ ಪ್ರದೇಶ, ತಮಿಳುನಾಡಿನ ಮುತ್ಸದ್ದಿಗಳೂ ಕಾಂಗ್ರೆಸ್ ಅನ್ನು ಹಲವು ಬಾರಿ ಮುನ್ನಡೆಸಿದ್ದಾರೆ. ಗುಜರಾತ್‌ನಿಂದ ಹಿಡಿದು, ಈಶಾನ್ಯ ಭಾರತದ ಅಸ್ಸಾಂ ನಡುವಣ ರಾಜ್ಯಗಳ ನಾಯಕರು ಕಾಂಗ್ರೆಸ್‌ನ ಚುಕ್ಕಾಣಿ ಹಿಡಿದಿದ್ದಾರೆ.



- ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಕಾಂಗ್ರೆಸ್ ಅಧ್ಯಕ್ಷರು ಪ್ರತಿನಿಧಿಸಿದ್ದ ರಾಜ್ಯಗಳು
- ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ಅಧ್ಯಕ್ಷರು ಪ್ರತಿನಿಧಿಸಿದ್ದ ರಾಜ್ಯಗಳು

- ಅವಿಭಜಿತ ಬಂಗಾಳ ಮತ್ತು ಪಶ್ಚಿಮ ಬಂಗಾಳದ ಐವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ
- ಅವಿಭಜಿತ ಉತ್ತರ ಪ್ರದೇಶದ ಎಂಟು ಮಂದಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ
- ಮಹಾರಾಷ್ಟ್ರದ ಐವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ
- ಗುಜರಾತ್‌ನ ನಾಲ್ವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ
- ಅವಿಭಜಿತ ಆಂಧ್ರ ಪ್ರದೇಶ ಮತ್ತು ಹೈದರಾಬಾದ್ ಸಂಸ್ಥಾನದ ಐವರು ಈ ಹುದ್ದೆಯನ್ನು ನಿರ್ವಹಿಸಿದ್ದಾರೆ
- ಕರ್ನಾಟಕದ ಇಬ್ಬರು ಈ ಹುದ್ದೆಗೆ ಏರಿದ್ದಾರೆ
- ಅವಿಭಜಿತ ಬಿಹಾರದ ಮೂವರು ಈ ಹುದ್ದೆ ನಿರ್ವಹಿಸಿದ್ದಾರೆ
- ಉಳಿದ ರಾಜ್ಯಗಳ ನಾಯಕರು ಒಂದೊಂದು ಬಾರಿ ಈ ಹುದ್ದೆ ನಿರ್ವಹಿಸಿದ್ದಾರೆ
- ಸಾಮಾಜಿಕವಾಗಿಯೂ ಕಾಂಗ್ರೆಸ್ ಅಧ್ಯಕ್ಷ ಹುದ್ದೆಯ ವೈವಿಧ್ಯಕ್ಕೆ ಸಾಕ್ಷಿಯಾಗಿದೆ. ಪಾರ್ಸಿಗಳು, ಮುಸ್ಲಿಮರು, ಬ್ರಾಹ್ಮಣರು, ನಾಯ್ಡುಗಳು, ದಲಿತರು ಸೇರಿ ಹತ್ತಾರು ಜಾತಿ ಮತ್ತು ಧಾರ್ಮಿಕ ಸಮುದಾಯಗಳ ನಾಯಕರು ಕಾಂಗ್ರೆಸ್ ಅಧ್ಯಕ್ಷ ಹುದ್ದೆಯನ್ನು ನಿರ್ವಹಿಸಿದ್ದಾರೆ

ಸ್ವಾತಂತ್ರ್ಯೋತ್ತರ ಕಾಂಗ್ರೆಸ್ ಅಧ್ಯಕ್ಷರು

- 1947 ಜೆ.ಬಿ.ಕೃಪಲಾನಿ
- 1948 ಬಿ.ಪಟ್ಟಾಭಿ ಸೀತಾರಾಮಯ್ಯ
- 1950 ಪುರುಷೋತ್ತಮ ದಾಸ್ ಟಂಡನ್
- 1951 ಜವಾಹರಲಾಲ್ ನೆಹರೂ
- 1955 ಯು.ಎನ್. ದೇಬರ್
- 1960 ಎನ್.ಸಂಜೀವ ರೆಡ್ಡಿ
- 1964 ಕೆ.ಕಾಮರಾಜ್
- 1968 ಎಸ್. ನಿಜಲಿಂಗಪ್ಪ
- 1969 ಜಗಜೀವನ್ ರಾಮ್
- 1972 ಶಂಕರ್ ದಯಾಳ್ ಶರ್ಮಾ
- 1975 ಡಿ.ಕೆ.ಬರೂಃ
- 1978 ಇಂದಿರಾ ಗಾಂಧಿ
- 1985 ರಾಜೀವ್ ಗಾಂಧಿ
- 1992 ಪಿ.ವಿ.ನರಸಿಂಹ ರಾವ್
- 1997 ಸೀತಾರಾಮ್ ಕೇಸರಿ
- 1998 ಸೋನಿಯಾ ಗಾಂಧಿ
- 2017 ರಾಹುಲ್ ಗಾಂಧಿ
- 2019 ಸೋನಿಯಾ ಗಾಂಧಿ (ಮಧ್ಯಂತರ ಅಧ್ಯಕ್ಷೆ)
- 2022 ಮಲ್ಲಿಕಾರ್ಜುನ ಖರ್ಗೆ

ಆಧಾರ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿಕೃತ ಜಾಲತಾಣ, ಪಿಟಿಐ

ನೇತಾಜಿ ಕಾಂಗ್ರೆಸ್ ಅಧ್ಯಕ್ಷರಾದಾಗ...

ನೇತಾಜಿ ಸುಭಾಷ್ ಚಂದ್ರ ಬೋಸ್ ಸಹ ಎರಡು ಅವಧಿಗೆ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಪಕ್ಷದ ಅಧ್ಯಕ್ಷರ ಹುದ್ದೆಗೆ ನಡೆದ ಚುನಾವಣೆಗಳಲ್ಲಿ ನೇತಾಜಿ ಅವರು ಕಣಕ್ಕೆ ಇಳಿದಿದ್ದ ಚುನಾವಣೆಯೂ ಮಹತ್ವದ್ದು.

1930ರ ವೇಳೆಗೆ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯಗಳು ರೂಪುಗೊಂಡಿದ್ದವು. ಒಂದೆಡೆ ಅಹಿಂಸಾ ಮಾರ್ಗದ ಹೋರಾಟವನ್ನು ಬೆಂಬಲಿಸಿದ್ದ ಗಾಂಧಿವಾದಿಗಳಿದ್ದರೆ, ಮತ್ತೊಂದೆಡೆ ಸಶಸ್ತ್ರ ಹೋರಾಟ ಬೇಕು ಎನ್ನುವ ನಾಯಕರ ಗುಂಪು ಇತ್ತು. ಸಶಸ್ತ್ರ ಹೋರಾಟವನ್ನು ಬೆಂಬಲಿಸಿದ್ದವರಲ್ಲಿ ಸುಭಾಷ್ ಚಂದ್ರ ಬೋಸ್ ಪ್ರಮುಖರು. 1938ರಲ್ಲಿ ನಡೆದ ಹರಿಪುರ ಕಾಂಗ್ರೆಸ್ ಸಮ್ಮೇಳನದಲ್ಲಿ ಮಹಾತ್ಮ ಗಾಂಧಿ ಬೆಂಬಲಿತ ಪಟ್ಟಾಭಿ ಸೀತಾರಾಮಯ್ಯ ಅವರು ಕಣದಲ್ಲಿದ್ದರು. ಅವರ ಎದುರಾಳಿಯಾಗಿ ಸುಭಾಷ್ ಚಂದ್ರ ಬೋಸ್ ಕಣಕ್ಕೆ ಇಳಿದಿದ್ದರು. ಆ ಚುನಾವಣೆಯಲ್ಲಿ ಭಾರಿ ಬಹುಮತದೊಂದಿಗೆ ಸುಭಾಷ್ ಚಂದ್ರ ಬೋಸ್ ಅವರು 1938ರ ಫೆಬ್ರುವರಿ 19ರಂದು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

1939ರಲ್ಲಿ ನಡೆದ ಚುನಾವಣೆಯಲ್ಲೂ ಸುಭಾಷ್ ಚಂದ್ರ ಬೋಸ್ ಅವರು ಪಕ್ಷದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಚುನಾಯಿತರಾಗಿದ್ದರು. ಆದರೆ, ಅದೇ ವರ್ಷದ ಮಾರ್ಚ್‌ನಲ್ಲಿ ಅವರು ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದರು. ಜತೆಗೆ ಮಹಾತ್ಮ ಗಾಂಧಿ ಸಹ ರಾಜಕೋಟ್‌ನಲ್ಲಿ ಉಪವಾಸದಲ್ಲಿದ್ದರು. ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಸಭೆ ನಡೆಸಿ, ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿತ್ತು. ಆ ಸಭೆಯ ತೀರ್ಮಾನಗಳನ್ನು ಖಂಡಿಸಿ, ಸುಭಾಷ್ ಚಂದ್ರ ಬೋಸ್ ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.



ಭಾರತೀಯ ರಾಷ್ಟ್ರೀಯ ಸೇನೆಯ ಸೈನಿಕರೊಂದಿಗೆ ಸುಭಾಷ್ ಚಂದ್ರ ಬೋಸ್ ಚಿತ್ರ:ಕಾಂಗ್ರೆಸ್ ಆರ್ಕೈವ್

ವ್ಯವಸ್ಥಿತ ಚುನಾವಣೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷೀಯ ಚುನಾವಣೆಯನ್ನು, ಕಾಂಗ್ರೆಸ್ ಕೇಂದ್ರೀಯ ಚುಣಾವಣಾ ಪ್ರಾಧಿಕಾರವು (ಸಿಇಎ) ನಡೆಸುತ್ತದೆ. ಕಾಂಗ್ರೆಸ್ ಪಕ್ಷದ ಸಂವಿಧಾನದ 18ನೇ ವಿಧಿ ಪ್ರಕಾರ ಚುನಾವಣೆ ನಡೆಯುತ್ತದೆ. ಕಾಂಗ್ರೆಸ್ ಪಕ್ಷದ ಸದಸ್ಯರಾಗಿರುವವರು ಚುನಾವಣೆಯಲ್ಲಿ ಸ್ಪರ್ಧೆ ಮಾಡಬಹುದು. ಇವರಿಗೆ ಸೂಚಕರ ಬೆಂಬಲವಿರಬೇಕು.

ಸ್ಪರ್ಧೆ ಮಾಡಲು ಇಚ್ಛಿಸುವವರು ಕಾಂಗ್ರೆಸ್ ಕಚೇರಿಯಿಂದ ನಾಮಪತ್ರ ಪಡೆದು ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ನಾಮಪತ್ರ ಪರಿಶೀಲನೆ ಬಳಿಕ, ಅಂತಿಮವಾಗಿ ಕಣದಲ್ಲಿ ಉಳಿದ ಅಭ್ಯರ್ಥಿಗಳ ಹೆಸರನ್ನು ಘೋಷಿಸಲಾಗುತ್ತದೆ. ಎಲ್ಲ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಸದಸ್ಯರು ಅಥವಾ ಪ್ರತಿನಿಧಿಗಳು ಮತದಾನದ ಹಕ್ಕು ಹೊಂದಿರುತ್ತಾರೆ. ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯು ವಿವಿಧ ರಾಜ್ಯಗಳಿಗೆ ತೆರಳಿ ಪ್ರಚಾರ ನಡೆಸಬಹುದು. ಇವರಿಗೆ ಆಯಾ ಪ್ರದೇಶ ಕಾಂಗ್ರೆಸ್ ಘಟಕಗಳ ಅಧ್ಯಕ್ಷರು ನೆರವು ನೀಡಬಹುದು. ಆದರೆ, ನಿರ್ದಿಷ್ಟ ಅಭ್ಯರ್ಥಿಯ ಪರ ಪ್ರಚಾರ ಮಾಡಬಯಸುವ ಪಕ್ಷದ ಮುಖಂಡರು, ಅದಕ್ಕೂ ಮುನ್ನ ಪಕ್ಷದಲ್ಲಿ ತಾವು ಹೊಂದಿರುವ ಸಂಘಟನಾತ್ಮಕ ಹುದ್ದೆಗೆ ರಾಜೀನಾಮೆ ನೀಡಬೇಕು. ಮತದಾನವು ಮತಪತ್ರದ ಮೂಲಕ ನಡೆಯುತ್ತದೆ. ದೆಹಲಿಯಲ್ಲಿರುವ ಕಾಂಗ್ರೆಸ್ ಕೇಂದ್ರ ಕಚೇರಿ ಹಾಗೂ ಎಲ್ಲ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿಯ ಕಚೇರಿಗಳಲ್ಲಿ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಅಭ್ಯರ್ಥಿಯ ಹೆಸರಿನ ಮುಂದೆ ಗುರುತು ಮಾಡುವ ಮೂಲಕ ಪ್ರತಿನಿಧಿಗಳು ತಮ್ಮ ಆಯ್ಕೆಯನ್ನು ತಿಳಿಸಬೇಕು. ಮತದಾನದ ಬಳಿಕ ಮತ ಪೆಟ್ಟಿಗೆಗಳನ್ನು ದೆಹಲಿಯ ಕಾಂಗ್ರೆಸ್ ಕೇಂದ್ರ ಕಚೇರಿಗೆ ರವಾನೆ ಮಾಡಲಾಗುತ್ತದೆ. ಅಲ್ಲಿ, ಮತ ಎಣಿಕೆ ನಡೆಯುತ್ತದೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 72%
ಅಲ್ಲ 28%

ಮುಖ್ಯಮಂತ್ರಿಯವರು ಒಂದು ಟ್ರಿಲಿಯನ್ ಡಾಲರ್ ಮೊತ್ತದ ಆರ್ಥಿಕತೆಯ ಗುರಿ ಹೊಂದಿದ್ದಾರೆ. ಇದನ್ನು ಸಾಧಿಸುವುದು ಸಾಧ್ಯ ಎನಿಸುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 254

ಕಲ್ಯಾಣೋತ್ಸವಕ್ಕೆ ಗಣ್ಯರು

ಹಿಮವಂತ ಪುರೋಹಿತನಾದ ಗರ್ಗಮುನಿಯಿಂದ ಲಗ್ನಪತ್ರಿಕೆ ಬರೆಸಿದ. ಲಗ್ನಪತ್ರಿಕೆಯನ್ನು ಶಿವನಿಗೆ ತನ್ನ ದೂತರ ಮೂಲಕ ಕಳುಹಿಸಿಕೊಟ್ಟ. ಜೊತೆಗೆ ಅನೇಕ ಬಗೆಯ ಮಂಗಳದ್ರವ್ಯಗಳನ್ನೂ ಕಳುಹಿಸಿದ. ಹಿಮವಂತನ ದೂತರು ಲಗ್ನಪತ್ರಿಕೆಯನ್ನು ಸಮರ್ಪಿಸಿದರು. ಪ್ರತಿಯಾಗಿ ಶಿವನು ಸಹ ಆ ದೂತರನ್ನು ಯೋಗ್ಯರೀತಿಯಲ್ಲಿ ಸನ್ಮಾನಿಸಿ ಕಳುಹಿಸಿದ. ಹಿಮವಂತ ನಾನಾ ದೇಶವಿದೇಶಗಳಲ್ಲಿರುವ ತನ್ನ ಬಂಧುಗಳಿಗೆ ವಿವಾಹ ಆಹ್ವಾನವನ್ನು ಕಳುಹಿಸಿದ.

ಮದುವೆಗೆ ಯೋಗ್ಯವಾದಂತಹ ಶಾಸ್ತ್ರಸಂಬಂಧಿತ ಸಾಮಗ್ರಿ ಜೊತೆಗೆ ಭಕ್ಷ್ಯಭೋಜನಕ್ಕೆ ಬೇಕಾದ ಆಹಾರಪದಾರ್ಥಗಳನ್ನು ಯಥೇಚ್ಛವಾಗಿ ಸಂಗ್ರಹಿಸಿದ. ಅಕ್ಕಿ, ಅವಲಕ್ಕಿ, ಬೆಲ್ಲ, ಸಕ್ಕರೆ, ಉಪ್ಪು ಮತ್ತಿತರ ಆಹಾರವೆಲ್ಲವನ್ನು ಬೆಟ್ಟದಂತೆ ರಾಶಿರಾಶಿಯಾಗಿ ಸಂಗ್ರಹಿಸಿಟ್ಟ. ಹಾಲು, ತುಪ್ಪ, ಮೊಸರುಗಳ ಸಂಗ್ರಹಕ್ಕೆ ಆಳ ಬಾವಿಯನ್ನೇ ತೋಡಿಸಿದ. ಅಕ್ಕಿಹಿಟ್ಟು, ಗೋಧಿಹಿಟ್ಟು ಸೇರಿದಂತೆ ಹಲವು ಬಗೆಯ ಹಿಟ್ಟುಗಳನ್ನು ಸಂಗ್ರಹಿಸಿಟ್ಟ. ಅನೇಕ ಬಗೆಯ ಸಿಹಿತಿನಿಸುಗಳು, ಚಕ್ಕುಲಿ, ಕೋಡುಬಳೆಯಂಥ ಖಾರತಿಂಡಿಗಳು, ರುಚಿರುಚಿಯಾದ ಪಕ್ವಾನ್ನಗಳೆಲ್ಲವನ್ನು ಸಾಲಾಗಿ ಜೋಡಿಸಿಟ್ಟ. ಆಗ ತಾನೇ ಕಾಸಿದ ಹಸುವಿನ ತುಪ್ಪ, ದ್ರಾಕ್ಷಾರಸ, ಅಮೃತರಸ, ಕಬ್ಬಿನ ಹಾಲು ಮತ್ತಿತರ ಪಾನೀಯಗಳನ್ನು ಅನೇಕ ಬಾವಿಗಳಲ್ಲಿ ತುಂಬಿಸಿಟ್ಟ.

ಶಿವನ ಪ್ರಮಥಗಣಗಳಿಗೆ ಮತ್ತು ದೇವತೆಗಳಿಗೆ ಹಿತವಾದಂತಹ ಅನೇಕ ವ್ಯಂಜನಗಳನ್ನು ಮಾಡಿಸಿದ. ಅಗ್ನಿಯಂತೆ ಪ್ರಕಾಶಿಸುವ ಬೆಲೆಬಾಳುವ ವಸ್ತ್ರಗಳನ್ನು ತಂದ. ಪರ್ವತಸ್ತ್ರೀಯರು ಪಾರ್ವತಿಗೆ ಮಂಗಳಸಂಸ್ಕಾರ ಮಾಡಿ, ಆಕೆಯನ್ನು ಆಭರಣಗಳಿಂದ ಅಲಂಕಾರಗೊಳಿಸಿದರು.

ಶಿವ-ಪಾರ್ವತಿಯರ ವಿವಾಹಕ್ಕೆ ಅತಿಥಿಗಳಾಗಿ ದೇವತೆಗಳ ವಾಸಸ್ಥಾನವಾದ ಸುಮೇರು ದಿವ್ಯರೂಪವನ್ನು ಧರಿಸಿ ಬಂದರೆ, ಮಂದರಗಿರಿ ಕಾಣಿಕೆಗಳನ್ನು ತೆಗೆದುಕೊಂಡು ಪತ್ನೀಪುತ್ರರೊಡನೆ ಹಿಮಾಲಯಕ್ಕೆ ಬಂದ. ಅಸ್ತಾಚಲಗಿರಿ ಮರ್ಯಾದಾದ್ರವ್ಯಗಳೊಂದಿಗೆ, ಉದಯಗಿರಿ ರತ್ನ-ಮಣಿಗಳನ್ನು, ಮಲಯಗಿರಿಯು ಅನೇಕ ಸೇನೆಯೊಡನೆ, ದರ್ದುರನೆಂಬ ಗಿರಿಯು ದಿವ್ಯರೂಪವುಳ್ಳವನಾಗಿ ಹೆಂಡತಿಯೊಡನೆ ವಿವಾಹಕ್ಕೆ ಆಗಮಿಸಿದ. ನಿಷದಗಿರಿಯು ಪತ್ನಿಪುತ್ರರೊಡನೆ, ಗಂಧಮಾನಗಿರಿ ಮತ್ತು ಕರವೀರಗಿರಿಗಳು ಮಹಾವೈಭವದೊಡನೆ ಹಿಮವಂತನ ಮನೆಗೆ ಬಂದರು. ಮಹೇಂದ್ರನೆಂಬ ಕುಲಪರ್ವತ, ಪಾರಿಯಾತ್ರಕುಲಗಿರಿ, ಪರ್ವತೋತ್ತಮರಾದ ವಿಂಧ್ಯಗಿರಿ-ಕ್ರೌಂಚಗಿರಿ, ಪುರೋಷತ್ತಮಗಿರಿ, ನೀಲಗಿರಿ, ತ್ರಿಕೂಟಗಿರಿ, ಚಿತ್ರಕೂಟಗಿರಿ, ವೆಂಕಟಗಿರಿ, ಶ್ರೀಗಿರಿ, ಸೋಕಾಮುಖೀಗಿರಿ, ನಾರದಗಿರಿ, ಕಾಲಂಜಮಹಾಗಿರಿ, ಕೈಲಾಸಗಿರಿಯ ಜೊತೆಗೆ, ದ್ವೀಪಾಂತರಗಳಲ್ಲಿರುವ ಗಿರಿಗಳೆಲ್ಲರೂ ದಿವ್ಯರೂಪ ಧರಿಸಿ ಬಂದರು.

ಗಿರಿಗಳಲ್ಲದೆ, ಶೋಣಭದ್ರ ಮೊದಲಾದ ನದಿಗಳೂ ದಿವ್ಯರೂಪಗಳನ್ನು ಧರಿಸಿ ಮದುವೆಗೆ ಬಂದವು. ಗೋದಾವರೀ, ಯಮುನಾ, ಸರಸ್ವತೀ, ವೇಣಿಕಾ, ಗಂಗಾ, ರುದ್ರನ ಕುಮಾರಿಯಾದ ನರ್ಮದೆಯು ಗಿರಿಜಾ-ಶಿವರ ಮದುವೆಗೆ ಆಗಮಿಸಿದರು. ಅಸಂಖ್ಯಾತ ಅತಿಥಿಗಳು ಹಿಮವಂತನ ರಾಜಧಾನಿಗೆ ಬಂದಿದ್ದರಿಂದ ಮಹಾಸುಂದರ ನಗರಿ ಮದುವೆ ದಿಬ್ಬಣದಿಂದ ತುಂಬಿಹೋಯಿತು. ನಗರದ ನೆಮನೆಗಳಲ್ಲಿ ತೋರಣಧ್ವಜಗಳು ಎತ್ತರವಾಗಿ ರಾರಾಜಿಸಿದವು. ಮನೆಗಳ ಮೇಲ್ಕಟ್ಟು ಸೂರ್ಯಮಂಡಲವನ್ನು ಮುಟ್ಟುವಂತಿತ್ತು. ಹೀಗೆ ಹಿಮವಂತನ ರಾಜಧಾನಿ ಮಹಾವೈಭವದಿಂದ ಕಂಗೊಳಿಸುತ್ತಿತ್ತು. ಮದುವೆಗೆ ಬಂದ ಅತಿಥಿಗಳೆಲ್ಲರಿಗೂ ಯೋಗ್ಯವಾದಂತಹ ಆತಿಥ್ಯವನ್ನು ಪ್ರೀತಿ ಗೌರವ, ಆದರದಿಂದ ಮಾಡಿದ ಹಿಮವಂತ.

ಇಲ್ಲಿಗೆ ಶ್ರೀ ಶಿವಮಹಾಪುರಾಣದಲ್ಲಿ ಎರಡನೆ ಸಂಹಿತೆಯಾದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯುತ್ತದೆ. ●

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇದೇ 6ರಂದು ದೆಹಲಿಯಲ್ಲಿ ನೂರಾರು ದಲಿತರು ಬೌದ್ಧ ಧರ್ಮ ದೀಕ್ಷೆ ಪಡೆದ ಸುದ್ದಿಯ ಬೆನ್ನಲ್ಲೇ, ರಾಜಸ್ಥಾನದ ಜೈಪುರದಲ್ಲಿ ಸಾಮೂಹಿಕ ಮತಾಂತರ ಕಾರ್ಯಕ್ರಮ ನಡೆದಿದೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಬೃಹತ್ ಸಂಖ್ಯೆಯ ಜನರು ಸೇರಿರುವ ಎರಡು ಚಿತ್ರಗಳು ವೈರಲ್ ಆಗಿವೆ. 'ಅ.16ರಂದು ನಡೆದ ಕಾರ್ಯಕ್ರಮದಲ್ಲಿ ಸುಮಾರು ಒಂದು ಲಕ್ಷ ಜನರು ಬೌದ್ಧ ಧರ್ಮದ ದೀಕ್ಷೆ ಪಡೆದಿದ್ದಾರೆ' ಎಂದು ಉಲ್ಲೇಖಿಸಲಾಗಿದೆ. ಆದರೆ ಇದು ಸುಳ್ಳು ಸುದ್ದಿ.

ಈ ಚಿತ್ರಗಳು ಜೈಪುರಕ್ಕೆ ಸಂಬಂಧಿಸಿದ್ದಲ್ಲ ಎಂದು 'ಇಂಡಿಯಾಟುಡೇ' ವರದಿ ಮಾಡಿದೆ. ಅ.15ರಂದು ಮಹಾರಾಷ್ಟ್ರದ ಪುಣೆಯಲ್ಲಿ ಬೌದ್ಧ ಮಹಾಸಭಾ ಆಯೋಜಿಸಿದ್ದ 'ಧಮ್ಮ ಮೇಳ' ಕಾರ್ಯಕ್ರಮದಲ್ಲಿ ಈ ಚಿತ್ರಗಳನ್ನು ಸೆರೆಹಿಡಿಯಲಾಗಿದೆ. ಈ ಕಾರ್ಯಕ್ರಮದಲ್ಲಿ ಮತಾಂತರ ನಡೆದಿದೆ ಎಂಬುದನ್ನು ಪುಷ್ಟೀಕರಿಸುವ ಯಾವುದೇ ವರದಿಗಳು ಪ್ರಕಟವಾಗಿಲ್ಲ. ಅಂಬೇಡ್ಕರ್ ಅವರ ವಂಶಸ್ಥ ಪ್ರಕಾಶ್ ಅಂಬೇಡ್ಕರ್ ಅವರು ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡಿದ್ದರು. ಇಲ್ಲಿನ ಚಿತ್ರಗಳನ್ನು ಜೈಪುರದ ಮತಾಂತರ ಕಾರ್ಯಕ್ರಮದ ಚಿತ್ರಗಳು ಎಂಬುದಾಗಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಾಕ್ಷಿಪ್ರಜ್ಞೆ

ತನ್ನ ಮನದಾಟಗಳ ತಾನೆ ನೋಡುತ ನಗುವ |
ತನ್ನೊಳಗೆ ತಾನಿರ್ವರಾದವೊಲು ಬಾಳ್ವ |
ಚಿನ್ಮಾತ್ರವನು ಬೇರೆ ಬಗೆದು ಜಾನಿಪ ಚತುರ |
ಧನ್ಯತೆಯ ಕಂಡವನು – ಮಂಕುತಿಮ್ಮ || 739 ||

ಪದ-ಅರ್ಥ: ಮನದಾಟಗಳ = ಮನದ + ಆಟಗಳ, ತಾನಿರ್ವರಾದವೊಲು = ತಾನು + ಇರ್ವರಾದ-ವೊಲು = ಇಬ್ಬರಾದಂತೆ, ಬಾಳ್ವ = ಬಾಳುವ, ಚಿನ್ಮಾತ್ರ = ಆದಿಯಿಲ್ಲದ, ಜ್ಞಾನಸ್ವರೂಪವಾದ ಪರಬ್ರಹ್ಮವಸ್ತು, ಜಾನಿಪ = ಧ್ಯಾನಿಸುವ,

ವಾಚ್ಯಾರ್ಥ: ತನ್ನ ಮನಸ್ಸಿನ ಆಟಗಳನ್ನು ತಾನೇ ನೋಡುತ್ತನಗುತ್ತಾನೆ, ತನ್ನೊಳಗೆ ತಾನು ಇಬ್ಬರಾದಂತೆ ಬಾಳುತ್ತಾನೆ,ಪರಬ್ರಹ್ಮವಸ್ತುವನ್ನು ಸಾಕ್ಷಿಪ್ರಜ್ಞೆಯಿಂದ ನೋಡಿ ಧ್ಯಾನಿಸುವ ಚತುರ, ಧನ್ಯತೆಯನ್ನು ಕಂಡವನು.

ವಿವರಣೆ: ನನಗೆ ತಿಳಿದ ಅವಧೂತರೊಬ್ಬರಿದ್ದಾರೆ. ಅವರುಯಾವಾಗ, ಎಲ್ಲಿಗೆ ಹೋಗುತ್ತಾರೆ ಎಂಬುದು ಗೊತ್ತಾಗುವುದಿಲ್ಲ.ಒಮ್ಮೊಮ್ಮೆ ನೀವು ನೆನೆಸಿದಾಗ ಅಲ್ಲಿಗೇ ಬಂದುಬಿಡಬಹುದು. ಅವರು ತಮ್ಮ ಸುತ್ತಮುತ್ತ ನಡೆಯುವ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ, ಸಂತೋಷಪಡುತ್ತಾರೆ. ಮತ್ತೊಬ್ಬರ ದುಃಖಕ್ಕೆ ಸ್ಪಂದಿಸುತ್ತಾರೆ. ಮರುಕ್ಷಣವೇ ಅದರಿಂದ ಬಿಡುಗಡೆ ಹೊಂದಿ ನಡೆದುಬಿಡುತ್ತಾರೆ. ಅವರಿಗೆ ಸಂಸಾರವಿದೆ, ಆದರೆ ನೆಲೆಯಿಲ್ಲ, ಆ ಕ್ಷಣದಲ್ಲಿ ಇದ್ದದ್ದೇ ನೆಲೆ. ಒಂದೆರಡು ವರ್ಷಗಳ ಹಿಂದೆ ಅವರನ್ನು ಬೆಟ್ಟಿಯಾಗಲು ಅವರ ಮಗ ಬಂದ. ಅವನಿಗೂ ಸುಮಾರು 45-50 ವರ್ಷ ವಯಸ್ಸು ಮಾತನಾಡಿ ಹೊರಟ. ದಾರಿಯಲ್ಲಿ ಅಪಘಾತವಾಗಿ ತೀರಿಹೋದ. ತಂದೆಯಾದ ಇವರಿಗೆ ತುಂಬ ಅಘಾತವಾಗಿರಬೇಕೆಂದು ಮಾತನಾಡಲು ಹೋದವರಿಗೆ ಆಶ್ಚರ್ಯ. ಅವರು ಬೇರೆ ಯಾವುದೋ ವಿಷಯದ ಬಗ್ಗೆ ಮಾತನಾಡುತ್ತ, ನಗುನಗುತ್ತ ಕುಳಿತಿದ್ದಾರೆ! ಬಂದವರು ಮುಖದ ತುಂಬ ದುಃಖದ ಛಾಯೆಯನ್ನು ಹೊದ್ದು ಸಂತಾಪ ಸೂಚಿಸಿದರು. ಅದಕ್ಕವರು ನಗುತ್ತಲೇ, "ಆಯ್ತು ಬಿಡಿ. ಅವನ ಸ್ಟೇಶನ್ಬಂ ತು, ಇಳಿದು ಹೋದ. ಅದಕ್ಕೇನು ಮಾಡುವುದು? ಪ್ರಯಾಣ ನಡೆಯುತ್ತಲೇ ಇದೆ" ಎಂದರು. ಅಂದರೆ ಅವರಿಗೆ ಮಗನ ಸಾವಿನ ದುಃಖ ಇಲ್ಲವೆ? ಇದೆ. ಆದರೆ ಅದೊಂದು ಪ್ರಪಂಚದ ಅನಿವಾರ್ಯ ಆಟ ಎನ್ನುವುದು ತಿಳಿದಿದೆ. ಇದನ್ನೇ ಕಗ್ಗ, ಒಬ್ಬರಿದ್ದದ್ದು ಇಬ್ಬರಾಗುವುದು ಎನ್ನುವುದು. ನಮಗೆ ದೇಹ, ಮನಸ್ಸು, ಬುದ್ಧಿಗಳಿವೆ, ಪಂಚೇಂದ್ರಿಯಗಳು ತಂದು ತಂದು ಸುರಿಯುವ ಅನುಭವಗಳ ಆಟ ಕೊನೆಯ ಕ್ಷಣದವರೆಗೂ ಇದ್ದದ್ದೇ. ಅದರಲ್ಲಿ ತನ್ಮಯತೆಯಿಂದ ಭಾಗಿಯಾದರೆ ದುಃಖ, ಸಂತೋಷ. ಆದರೆ ಅವುಗಳನ್ನೇ ಸಾಕ್ಷಿಯಂತೆ ದೂರನಿಂತು ನೋಡಿದಾಗ, ಇಬ್ಬರಾದದ್ದು ತಿಳಿಯುತ್ತದೆ. ಮನಸ್ಸು ತೋರಿದ ಆಟಗಳನ್ನು ಆಡುವವನೊಬ್ಬ, ಅದನ್ನು ನೋಡುವವನು ಇನ್ನೊಬ್ಬ. ಇದೇ ಸಾಕ್ಷಿಪ್ರಜ್ಞೆ. ಅದನ್ನು ತಿಳಿದವರು ಬುದ್ಧಿಶಾಲಿಗಳು. ಲೋಕದ ವ್ಯವಹಾರದಲ್ಲಿ ಸದಾಕಾಲ ಪಾಲುಗೊಳ್ಳು-ತ್ತಲೇ, ತಾನು ನಿಜವಾಗಿಯೂ ಅದಲ್ಲ, ತಾನೊಂದು ಆದಿ, ಅಂತ್ಯಗಳಿಲ್ಲದ, ವಿಕಾರಗೊಳ್ಳದ ಪರಬ್ರಹ್ಮವ-ಸ್ತುವಿನ ಒಂದಂಶ ಎಂಬುದನ್ನು ಸದಾಕಾಲ ನೆನಪಿನ-ಲ್ಲಿಟ್ಟುಕೊಳ್ಳುವವನು, ಅದನ್ನೇ ಧ್ಯಾನಿಸುವವನನ್ನು, ಕಗ್ಗ ಧನ್ಯತೆಯನ್ನು ಕಂಡವನು ಎನ್ನುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಅಕ್ಟೋಬರ್ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದಶಮಿ ಗಂ. 16-05 ನಕ್ಷತ್ರ: ಆಶ್ಲೇಷ ಗಂ. 10-30 ಯೋಗ: ಶುಭ ಗಂ. 17-52, ಕರಣ: ವಿಷ್ಟಿ ಗಂ. 16-05, ತುಲಾ ಮಾಸದ 02 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30 – 03:00,
ಸೂರ್ಯೋದಯ : 06-25 ಸೂರ್ಯಾಸ್ತ : 06-05
ಮುಸ್ಲಿಂ ದಿನಾಂಕ : 23 ರಬಿಉಲ್ಲಾವಲ್‌ಅ
ದೃಷ್ಟ ಸಂಖ್ಯೆ : 10, 11

ಮೇಷ: ಮಗನ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಡವಿದ ಅನುಭವ ಆಗಲಿದೆ. ಲೇವಾದೇವಿ ವ್ಯವಹಾರದಲ್ಲಿ ಸಾಧಾರಣ ಲಾಭ ಹೊಂದುವಿರಿ. ಕೆಲಸಗಳಲ್ಲಿ ನಿಯಮ ಉಲ್ಲಂಘಿಸುವಂತೆ ಒತ್ತಡ ಹೆಚ್ಚಲಿದೆ.

ವೃಷಭ: ಬಹಳ ದಿನಗಳಿಂದ ನಿಮ್ಮ ಮೇಲಿದ್ದ ಅಪವಾದಗಳು ದೂರಾಗುವುದು. ಗುರಿ ತಲುಪಲು ತಾಳ್ಮೆ ಮತ್ತು ವಿಶ್ವಾಸ ಅತಿ ಅಗತ್ಯ ಎಂದು ತಿಳಿಯುವಿರಿ. ಕಣ್ಣಿನ ದೃಷ್ಟಿ ಸರಿಪಡಿಸಿಕೊಳ್ಳಲು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗುವುದು.

ಮಿಥುನ: ತಂದೆ ತಾಯಿಯ ಶುಭ ಆಶೀರ್ವಾದದೊಂದಿಗೆ ಹೊಸ ವ್ಯವಹಾರ ಪ್ರಾರಂಭಿಸಿ. ನಿರುದ್ಯೋಗಿಗಳಿಗೆ ಲೆಕ್ಕ ಪತ್ರಗಳ ಜವಾಬ್ದಾರಿ ನೋಡುವಂತಹ ಕೆಲಸ ಅವರ ನಿರೀಕ್ಷೆಗೂ ಮೀರಿದಂತಹ ರೀತಿಯಲ್ಲಿ ಸಿಗುವ ಸಾಧ್ಯತೆ ಇದೆ.

ಕರ್ಕಾಟಕ: ಸಂಸ್ಥೆಯ ಸಲಹೆಗಾರರಿಗೆ ವೃತ್ತಿ ಸಂಬಂಧಿತ ಅನಿವಾರ್ಯತೆಗಳು ಎದುರಾಗುವುದು. ಸ್ನೇಹಿತರ ಸಹಾಯದಿಂದ ಜಮೀನು ಖರೀದಿ ಮಾಡುವ ಕನಸು ನನಸಾಗಲಿದೆ. ಸರ್ವ ಸದಸ್ಯರಲ್ಲಿ ಆರೋಗ್ಯ ಭಾಗ್ಯ ಇರುವುದು.

ಸಿಂಹ: ಸಮಸ್ಯೆ ಹೆಚ್ಚುವುದಕ್ಕೆ ಮುಂಚಿತವಾಗಿಯೆ ಜಾಣ್ಮೆಯಿಂದ ಪರಿಹಾರದ ಮಾರ್ಗವನ್ನು ಕಂಡುಕೊಳ್ಳಿರಿ. ಶಿಕ್ಷಣ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಸಂಘ ಸಂಸ್ಥೆಗಳಿಂದ ಸನ್ಮಾನ ಹೊಂದುವಿರಿ. ಈಶ್ವರನ ಆರಾಧನೆ ಮಾಡಿ.

ಕನ್ಯಾ: ಪ್ರತಿಯೊಂದರಲ್ಲೂ ಯಶಸ್ಸನ್ನು ಕಾಣಲು ಅಪೇಕ್ಷಿಸುವ ನೀವು ಅದಕ್ಕಾಗಿ ಶ್ರಮಪಡಬೇಕಾದ ಅಗತ್ಯವಿದೆ. ಅನುಭವದಿಂದ ಧಾರ್ಮಿಕ ಆಚರಣೆಯ ಬಗ್ಗೆ ಒಲವು ಮೂಡುವುದು. ಆರ್ಥಿಕ ಪರಿಸ್ಥಿತಿ ಸ್ವಲ್ಪ ವ್ಯತ್ಯಾಸವಾಗಲಿದೆ.

ತುಲಾ: ನಿಮ್ಮ ಸಹಾಯದ ಮನೋಭಾವದಿಂದ ಸ್ನೇಹ ಸಂಬಂಧಗಳು ಇನ್ನಷ್ಟು ಗಟ್ಟಿಗೊಳ್ಳಲಿದೆ. ಯಾವುದೇ ಜವಾಬ್ದಾರಿಯಿಂದ ವಿಮುಖರಾಗ ಬೇಡಿ. ಗಿಡ ಮೂಲಿಕೆಗಳ ಬಳಕೆಯಿಂದ ಉದರ ಸಂಬಂಧಿ ವ್ಯಾಧಿಗಳು ಗುಣವಾಗುವುದು.

ವೃಶ್ಚಿಕ: ಈ ದಿನ ಮಾತಿಗೆ ಕಡಿವಾಣ ಹಾಕುವುದು ಲೇಸು. ಕಳೆದಿದ್ದ ದಾಖಲೆ ಪತ್ರಗಳು ಸಿಕ್ಕು ಮನಸ್ಸಿಗೆ ಸಮಾಧಾನ ಉಂಟಾಗುತ್ತದೆ. ವ್ಯವಹಾರದಲ್ಲಿ ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚತೆಯಿಂದ ಇರಬೇಕಾಗುತ್ತದೆ.

ಧನು: ಶ್ರೀಮಂತಿಕೆಯ ಬದುಕಿಗೆ ಮನಸ್ಸು ಹಾತೊರೆಯುವುದು. ಮಕ್ಕಳಿಂದ ದುಬಾರಿ ಬೆಲೆಯ ವಸ್ತುಗಳ ಖರೀದಿ. ತಪ್ಪುಗಳು ನಡೆಯುವ ಸಂಭವವು ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗುತ್ತದೆ.

ಮಕರ: ವಿದ್ಯಾರ್ಥಿಗಳಿಗೆ ಓದಿನಲ್ಲಿ ಅಪರಿಮಿತ ಆಸಕ್ತಿ ಮೂಡಲಿದೆ. ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳಲು ಮನೆಯವರಿಗೆಲ್ಲ ಆತುರ ತೋರುವಿರಿ. ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟ ಇಟ್ಟುಕೊಳ್ಳಿ.

ಕುಂಭ: ನಿಮ್ಮ ಆತ್ಮವಿಶ್ವಾಸವನ್ನು ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಹೋಗಬೇಕು. ಕೆಲವು ಅಸಾಮಾನ್ಯವ್ಯಕ್ತಿಗಳನ್ನು ವ್ಯಾಪಾರ ನಿಮಿತ್ತ ಭೇಟಿ ಮಾಡುವಿರಿ. ಹಿರಿಯ ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ.

ಮೀನ: ವಿದ್ವಾಂಸರೊಡನೆ ಕೆಲ ಹೊತ್ತು ಕಳೆಯುವ ಸಂಭವ ಸಿಗಲಿದೆ. ನಿಮ್ಮನ್ನು ಕಂಡು ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂ-ದಿಗೆ ಜಾಣ್ಮೆಯಿಂದ ವ್ಯವಹರಿಸಿ. ಮನೆಯಲ್ಲಿ ಮೃದುಭಾಷಿ ಎನಿಸಿಕೊಳ್ಳುವಿರಿ.

ಪದಬಂಧ 5114

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲೋಭನಿಗೆ ಆಸೆಯನ್ನು ಹುಟ್ಟಿಸುವಿಕೆ (4)
2.ಆಣೆಯಿಟ್ಟರೂ ಪಕ್ಷದವರೆಲ್ಲಾ ಮಾಡುತ್ತಿರುವ ನಿಂದೆ (4)
4.ಸಂಪೂರ್ಣವಾಗಿ ಪಕ್ವವಾಗಿರುವುದು (4)
7.ಜನಗಣತಿಗಾಗಿ ನಿರ್ಮಿಸಿರುವ ವೇದಿಕೆ (3)
8.ಮಾತಿಲ್ಲದೆ ನೀರವತೆ (2)
9.ಎಲ್ಲಾ ಬಲ್ಲವನೆಂದು ಹೇಳಿಕೊಳ್ಳುತ್ತಿರುವ ಪತಿ (3)
10.ಊಟಕ್ಕೆ ಕುಳಿತಿರುವ ಜನಗಳ ಸಾಲು (2)
11.ಹಸೆ ಹಾಕುವ ಜಾಗದಲ್ಲಿ ಬೆಳೆದಿರುವ ಪಾಚಿ (3)
12.ತಮ್ಮನು ತೋರಿಸಿರುವ ಭೇದಭಾವ (4)
14.ಬೇಡವಾದವರ ಮೇಲೆ ಬೆಳೆಸಿಕೊಂಡಿರುವ ಶತ್ರುತ್ವ (4)
15. ಅಡವಿ ಸೇರಲು ತೋರಿಸುತ್ತಿರುವ ಆತುರ (4)

ಮೇಲಿಂದ ಕೆಳಕ್ಕೆ
1.ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
3.ಪತಿಯೊಂದಿಗಿರುವ ಕಾಲಾಳು (3)
5.ಉತ್ತಮ ಜಾತಿಯ ಜೇನುತುಪ್ಪ ಉಲ್ಟಾ ಕಾಣುತ್ತಿದೆ (3)
6.ವರ ಖಡ್ಗ ಹಿಡಿದು ಮಾಡುತ್ತಿರುವ ಸಾಧನೆ (5)
7.ಈತ ಬಲು ಆಲಸಿ (5)
10.ಖಂಡಿತಾ ಇವನು ವಿದ್ವಾಂಸ! (3)
11.ಹಾವು ಕಚ್ಚೀತೆಂದು ಧರಿಸಿರುವ ಮರದ ಮೆಟ್ಟು (3)
13. ಮಡಿವಂತ ಏರಿರುವ ಅಟ್ಟ (3)

1				■	2		3	
	■	■	■	■	■	■		■
4	5		6	■	7			■
■		■		■		■	■	■
8		■	9			■	10	
■	■	■		■		■		■
■	11			■	12			13
■		■	■	■	■	■	■	
14				■	15			

5113ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜನಜನಿತ 3.ಶತಕ
5.ಸದ್ವಿನಿಯೋಗ
7.ರಿವಾಜು 9.ಕವಾಟ
11.ಊರ್ವಶಿ 13.ಹೊಲಸುನಾತ
15.ಸಂಪುಟ 16.ದುರುಪಯೋಗ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ನಿಶ್ವಾಸ
4.ತರಂಗ 6.ನಿಕಟ
8.ವಾವೆ 9.ಕಡಸು
10.ಪರ್ವ 12.ಶಿಲಾಯುಗ
13.ಹೊಳಪು 14.ತವರು

ಸುಡೊಕು 5500

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5499 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಸಂಕ್ಷಿಪ್ತ ಸುದ್ದಿ

'ಸೆ.13' ಚಿತ್ರಕ್ಕೆ ತೆರಿಗೆ ವಿನಾಯ್ತಿ

ಬೆಂಗಳೂರು: ಕೋವಿಡ್ ಸಂಕಷ್ಟದ ಕಾಲದಲ್ಲಿ ದಾದಿಯರ ಸೇವೆ ಮತ್ತು ತ್ಯಾಗವನ್ನು ಬಿಂಬಿಸುವ ಕಥಾ ಹಂದರವುಳ್ಳ 'ಸೆಪ್ಟೆಂಬರ್ 13' ಸಿನಿಮಾಕ್ಕೆ ಆರು ತಿಂಗಳ ಅವಧಿಗೆ ರಾಜ್ಯ ಜಿಎಸ್‌ಟಿ ಪಾವತಿಯಿಂದ ವಿನಾಯ್ತಿ ನೀಡಿ ಬುಧವಾರ ಆದೇಶ ಹೊರಡಿಸಲಾಗಿದೆ.

ತೆರಿಗೆ ವಿನಾಯ್ತಿ ನೀಡುವಂತೆ ಚಿತ್ರದ ನಿರ್ಮಾಪಕ ಐವಾನ್ ನಿಗ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದ್ದರು. ಮುಖ್ಯಮಂತ್ರಿ ಅದನ್ನು ಮಾನ್ಯ ಮಾಡಿದ್ದರು. ನ. 4ರಿಂದ ಆರು ತಿಂಗಳವರೆಗೆ ತೆರಿಗೆ ವಿನಾಯ್ತಿ ನೀಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಮೃತ್ತಿಕೆ ಸಂಗ್ರಹ ಅಭಿಯಾನ

ಬೆಂಗಳೂರು: ನ.11 ರಂದು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅನಾವರಣಗೊಳ್ಳಲಿರುವ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆಯ ಆವರಣದ ಉದ್ಯಾನಕ್ಕೆ ರಾಜ್ಯದ ವಿವಿಧ ಭಾಗದ ಮಣ್ಣು (ಮೃತ್ತಿಕೆ) ಬಳಸಲು ಇದೇ 21 ರಿಂದ ನ. 7 ರವರೆಗೆ 'ಮೃತ್ತಿಕೆ ಸಂಗ್ರಹಣಾ ಅಭಿಯಾನ' ನಡೆಯಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಹೇಳಿದರು.

ಶಾಲೆಗಳಲ್ಲಿ 'ನನ್ನ ನಾಡು–ನನ್ನ ಹಾಡು' ಗಾಯನ

ಬೆಂಗಳೂರು: ರಾಜ್ಯದ ಎಲ್ಲ ಸರ್ಕಾರಿ, ಖಾಸಗಿ ಪ್ರಾಥಮಿಕ, ಪ್ರೌಢ ಶಾಲೆಗಳು, ಕಚೇರಿಗಳಲ್ಲಿ ಅ.28ರಂದು 'ನನ್ನ ನಾಡು–ನನ್ನ ಹಾಡು' ಸಮೂಹ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಮೂಹಗೀತ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಆನ್‌ಲೈನ್ ಮೂಲಕ ಅ.21ರ ಒಳಗೆ ನೋಂದಾಯಿಸಿಕೊಳ್ಳಬಹುದು. ಗೀತೆಗಳನ್ನು ಹಾಡುವ ಧಾಟಿಯನ್ನು ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಯೂಟ್ಯೂಬ್ ಚಾನಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

'ಸ್ಮಾರ್ಟ್ ಪಾರ್ಕಿಂಗ್' ಯೋಜನೆ ಟೆಂಡರ್‌ಗೆ ಗುತ್ತಿಗೆದಾರರಿಂದ ಸಿಗದ ಪ್ರತಿಕ್ರಿಯೆ

ಬಿಬಿಎಂಪಿಯಿಂದಲೇ 'ಪಾವತಿ ನಿಲುಗಡೆ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅವಧಿ ಮುಗಿದರೂ ಟೆಂಡರ್‌ಗೆ ಅರ್ಜಿ ಸಲ್ಲಿಸದ ಗುತ್ತಿಗೆದಾರರು
- ರಸ್ತೆಗಳನ್ನು ಮೂರು ವರ್ಗವಾಗಿ ವಿಂಗಡಿಸಿ ಯೋಜನೆ ಜಾರಿ

ಬೆಂಗಳೂರು: ಸ್ಮಾರ್ಟ್ ಪಾರ್ಕಿಂಗ್ ಯೋಜನೆ ಟೆಂಡರ್‌ಗೆ ಗುತ್ತಿಗೆದಾರರು ಪ್ರತಿಕ್ರಿಯಿಸಿಲ್ಲ. ಎರಡನೇ ಬಾರಿಗೆ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. ಈ ನಡುವೆ ಬಿಬಿಎಂಪಿ ವತಿಯಿಂದಲೇ 'ಪಾವತಿ ನಿಲುಗಡೆ' ವ್ಯವಸ್ಥೆ ಜಾರಿ ಮಾಡಲು ಯೋಜಿಸಲಾಗಿದೆ.

ನಗರದ ಎಂಟೂ ವಲಯದಲ್ಲಿ 'ಸ್ಮಾರ್ಟ್ ಪಾರ್ಕಿಂಗ್' ಯೋಜನೆಯನ್ನು ಜಾರಿಗೆ ತರಲು ಬಿಬಿಎಂಪಿ ಸೆ.18ರಂದು ಟೆಂಡರ್ ಕರೆದಿತ್ತು. ಅ.10ರಂದು ಟೆಂಡರ್ ಸಲ್ಲಿಸಲು ಅಂತಿಮ ದಿನವಾಗಿತ್ತು. ಅವಧಿ ಮುಗಿದರೂ ಗುತ್ತಿಗೆದಾರರು ಟೆಂಡರ್‌ಗೆ ಅರ್ಜಿ ಸಲ್ಲಿಸಿರಲಿಲ್ಲ. ಒಂದೆರಡು ಬಂದಿದ್ದರೂ ಇಎಂಡಿ ಮೊತ್ತವನ್ನೇ ಅವರು ಸರಿಯಾಗಿ ಪಾವತಿಸಿಲ್ಲ. ಹೀಗಾಗಿ ಮತ್ತೆ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ.

ಈ ನಡುವೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬುಧವಾರ ದಕ್ಷಿಣ ವಲಯದಲ್ಲಿ ನಡಿಗೆ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ 'ಸ್ಮಾರ್ಟ್ ಪಾರ್ಕಿಂಗ್' ಯೋಜನೆ ಜಾರಿಗೊಳ್ಳುವ ಮುನ್ನ ನಾಗರಿಕರಲ್ಲಿ ಅರಿವು ಮೂಡಿಸುವ ಪ್ರಕ್ರಿಯೆಯನ್ನು ಜಾರಿಗೊಳಿಸಿ ಎಂದು ರಸ್ತೆ ಮೂಲಸೌಕರ್ಯದ ಮುಖ್ಯ ಎಂಜಿನಿಯರ್ ಆಗಿರುವ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರಿಗೆ ಸೂಚಿಸಿದರು. ಇದರಂತೆ ಬಿಬಿಎಂಪಿ ವತಿಯಿಂದಲೇ 'ಪಾವತಿ ನಿಲುಗಡೆ' ವ್ಯವಸ್ಥೆಯನ್ನು ಜಾರಿಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ.

'ಸ್ಮಾರ್ಟ್ ಪಾರ್ಕಿಂಗ್ ಯೋಜನೆ ಟೆಂಡರ್‌ಗೆ ಗುತ್ತಿಗೆದಾರರು ಪ್ರತಿಕ್ರಿಯಿಸಿಲ್ಲ. ಎರಡನೇ ಬಾರಿಗೆ ಟೆಂಡರ್ ಆಹ್ವಾನಿಸಲಾಗುತ್ತದೆ. ಎಲ್ಲ ಪ್ರಕ್ರಿಯೆ ಮುಗಿಯಲು ತಡವಾಗುತ್ತದೆ. ಹೀಗಾಗಿ, ಬಿಬಿಎಂಪಿ ವತಿಯಿಂದಲೇ ವಾಹನ ನಿಲುಗಡೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಪಾವತಿ ನಿಲುಗಡೆಯನ್ನು ಸದ್ಯವೇ ಜಾರಿಗೆ ತರಲಾಗುತ್ತದೆ' ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ಮಾರ್ಟ್ ಪಾರ್ಕಿಂಗ್‌ನಲ್ಲಿನ ಎಲ್ಲ ವ್ಯವಸ್ಥೆಯನ್ನು 'ಪಾವತಿ ನಿಲುಗಡೆ' ವ್ಯವಸ್ಥೆಯಲ್ಲಿ ಎಲ್ಲವನ್ನೂ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಯಂತ್ರ ಇತರೆ ವ್ಯವಸ್ಥೆಗಳಿಗೆ ವೆಚ್ಚ ಮಾಡಲು ಬಿಬಿಎಂಪಿ ಸಿದ್ಧವಿಲ್ಲ. ಇರುವ ಸಂಪನ್ಮೂಲಗಳನ್ನು ಬಳಸಿಕೊಂಡು ವಾಹನ ನಿಲುಗಡೆ ರಸ್ತೆಗಳಲ್ಲಿ ಗುರುತು ಮಾಡಿ, ಸ್ವಲ್ಪ ವೆಚ್ಚದಲ್ಲಿ ಬಿಬಿಎಂಪಿಯೇ ಅನುಷ್ಠಾನ ಮಾಡುವ ಬಗ್ಗೆ ಆಲೋಚಿಸುತ್ತಿದ್ದೇವೆ' ಎಂದು ವಿವರ ನೀಡಿದರು.

'ವಾಹನ ನಿಲುಗಡೆ ಶುಲ್ಕವನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಬಿಬಿಎಂಪಿ ಮಾಡುತ್ತಿತ್ತು. ಅದೇ ರೀತಿ ಗುತ್ತಿಗೆದಾರರನ್ನು ನೇಮಿಸಿಕೊಂಡು ಶುಲ್ಕ ಸಂಗ್ರಹಿಸುವ ಬಗ್ಗೆಯೂ ಆಲೋಚಿಸ ಲಾಗುತ್ತಿದೆ. ಶೀಘ್ರವೇ ಯಾವ ರಸ್ತೆಗಳಲ್ಲಿ 'ಪಾವತಿ ನಿಲುಗಡೆ' ಶುಲ್ಕ ಜಾರಿಯಾಗುತ್ತದೆ ಎಂಬ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಆರಂಭಿಸಲಾಗುತ್ತದೆ. ಬಿಬಿಎಂಪಿ ಅನುಷ್ಠಾನಗೊಳಿಸುವ 'ಪಾವತಿ ನಿಲುಗಡೆ' ಶುಲ್ಕ ಈ ಹಿಂದೆ ನಿರ್ಧರಿಸಿದಂತೆಯೇ ಇರಲಿದೆ' ಎಂದು ಹೇಳಿದರು.

ಶುಲ್ಕ ವಿವರ: 'ಸ್ಮಾರ್ಟ್ ಪಾರ್ಕಿಂಗ್' ಯೋಜನೆಯಲ್ಲಿ ರಸ್ತೆಗಳನ್ನು ಮೂರು ವರ್ಗವಾಗಿಸಲಾಗಿದೆ. ಎ ವರ್ಗದ ರಸ್ತೆಗಳಲ್ಲಿ ಪ್ರತಿ ಗಂಟೆಗೆ ದ್ವಿಚಕ್ರಕ್ಕೆ ₹15, ಕಾರಿಗೆ ₹30 ನಿಲುಗಡೆ ಶುಲ್ಕವಿದೆ. ಬಿ ವರ್ಗದ ರಸ್ತೆಗಳಲ್ಲಿ ದ್ವಿಚಕ್ರಕ್ಕೆ ₹10, ಕಾರಿಗೆ ₹20 ಹಾಗೂ ಸಿ ವರ್ಗದ ರಸ್ತೆಗಳಲ್ಲಿ ದ್ವಿಚಕ್ರಕ್ಕೆ ₹5, ಕಾರಿಗೆ ₹10. ಇದೇ ಶುಲ್ಕ ಬಿಬಿಎಂಪಿಯ 'ಪಾವತಿ ನಿಲುಗಡೆ' ವ್ಯವಸ್ಥೆಯಲ್ಲೂ ಇರಲಿದೆ.

ಪ್ರಜ್ವಲ್ ರೇವಣ್ಣಗೆ ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚಾರಣೆ ವೇಳೆ ಅನುಮತಿ ಇಲ್ಲದೆ, ಶಿಷ್ಟಾಚಾರ ಉಲ್ಲಂಘಿಸಿ ವಕೀಲರ ಜೊತೆ ಔಪಚಾರಿಕವಾಗಿ ಮಾತನಾಡಲು ಮುಂದಾದ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ತರಾಟೆಗೆ ತೆಗೆದುಕೊಂಡ ಹೈಕೋರ್ಟ್, 'ನಿಮ್ಮ ಮಿತಿಯನ್ನು ಅರ್ಥ ಮಾಡಿಕೊಳ್ಳಿ. ಇದು ಕೋರ್ಟ್. ಹೊರಗೆ ಮಾತನಾಡಿದಂತೆ ಇಲ್ಲಿ ಮಾತನಾಡಲು ಹೋಗಬೇಡಿ' ಎಂದು ಎಚ್ಚರಿಸಿತು.

'ಪ್ರಜ್ವಲ್ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಬಿಜೆಪಿಯಿಂದ ಸ್ಪರ್ಧಿಸಿ ಪರಾಜಿತಗೊಂಡ ಅಭ್ಯರ್ಥಿ ಎ.ಮಂಜು ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಟಕಟೆಯಲ್ಲಿ ಹಾಕಲಾಗಿದ್ದ ಕುರ್ಚಿಯಲ್ಲಿ ಕುಳಿತು ವಕೀಲ ಕೇಶವ ರೆಡ್ಡಿ ಅವರು ಕೇಳಿದ ಪ್ರಶ್ನೆಗಳಿಗೆ ಒಂದೊಂದಾಗಿ ಉತ್ತರಿಸಿದ ಪ್ರಜ್ವಲ್ ರೇವಣ್ಣ, ನಿಖರ ಉತ್ತರ ನೀಡಿ ಸುಮ್ಮನಾಗುವ ಬದಲಿಗೆ ಹೆಚ್ಚಿನ ವಿವರಣೆ ನೀಡಲು ಮುಂದಾಗುತ್ತಿದ್ದು ದನ್ನು ಮತ್ತು ವಿಚಾರಣೆ ಮುಗಿದ ನಂತರ ವಕೀಲರ ಜೊತೆ ಲೋಕಾಭಿರಾಮ ಸ್ವರೂಪದಲ್ಲಿ ಮಾತನಾಡಲು ಮುಂದಾದುದಕ್ಕೆ ಗರಂ ಆದ ನ್ಯಾಯಮೂರ್ತಿಗಳು, ಕೋರ್ಟ್‌ನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಕಟು ಮಾತುಗಳಲ್ಲೇ ತಿಳಿಸಿಕೊಟ್ಟರು.

ಮುಖ್ಯ ವಿಚಾರಣೆ: 'ಚುನಾವಣೆಯಲ್ಲಿ ನಿಮ್ಮ ಪರ ಪ್ರಚಾರ ಮಾಡಲು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಲಿಕಾಪ್ಟರ್‌ನಲ್ಲಿ ಕಡೂರಿಗೆ ಬಂದಿದ್ದು ನಿಜವೇ, ಈ ಪ್ರಯಾಣದ ಖರ್ಚು ವೆಚ್ಚವನ್ನು ನೀವು ಆಯೋಗದ ಮುಂದೆ ವಿವರಿಸಿದ್ದೀರಾ' ಎಂಬ ಪ್ರಶ್ನೆಗೆ, 'ಹೌದು, ಅವರು ಹೆಲಿಕಾಪ್ಟರ್‌ನಲ್ಲಿ ಬಂದದ್ದು ನಿಜ. ಅವರಿಬ್ಬರೂ ಸ್ಟಾರ್ ಕ್ಯಾಂಪೇನರ್. ಆಯೋಗದ ನಿಯಮಗಳ ಪ್ರಕಾರ ಸ್ಟಾರ್ ಕ್ಯಾಂಪೇನರ್ ಅವರ ಖರ್ಚು ವೆಚ್ಚಗಳನ್ನು ನಮೂದು ಮಾಡಬೇಕಾಗಿಲ್ಲ' ಎಂದು ಉತ್ತರಿಸಿದರು.

'ಲಕ್ಸುರಿ ಕಾರುಗಳು, ಆಟೊ ರಿಕ್ಷಾಗಳು ಹಾಗೂ ಇತರೆ ವಾಹನಗಳಲ್ಲಿ ಜನರನ್ನು ಕಟ್ಟಿಕೊಂಡು ಭಾರಿ ಮೊತ್ತದ ಹಣ ವ್ಯಯಿಸಿ ಭರ್ಜರಿ ಪ್ರಚಾರ ನಡೆಸಿದ್ದೀರಿ. ಈ ಪ್ರಚಾರ ಕಾರ್ಯಗಳ ಖರ್ಚು ವೆಚ್ಚವನ್ನು ತೋರಿಸಿಲ್ಲ ಎಂದು ಅರ್ಜಿದಾರರು ಆಪಾದಿಸಿದ್ದಾರೆ. ಇದು ನಿಜವೇ' ಎಂಬ ಪ್ರಶ್ನೆಗೆ, 'ಇಲ್ಲಾ, ಇದು ಸುಳ್ಳು. ನಾನು ಈ ಕುರಿತ ಖರ್ಚು ವೆಚ್ಚಗಳನ್ನೆಲ್ಲಾ ಆಯೋಗಕ್ಕೆ ವಿವರಿಸಿದ್ದೇನೆ. ಅಂತೆಯೇ, ಆಯೋಗವು ನಾನು ನೀಡಿದ ವಿವರಣೆಯನ್ನು ಒಪ್ಪಿಕೊಂಡಿದೆ' ಎಂದರು.

'ಟಿವಿ ಚಾನೆಲ್, ಮುದ್ರಣ ಮಾಧ್ಯಮಗಳಲ್ಲಿ ನಿಮ್ಮ ಪ್ರಚಾರದ ಜಾಹೀರಾತುಗಳನ್ನು ಪ್ರಕಟಿಸಿದ್ದೀರಿ. ಇದರ ಖರ್ಚು ವೆಚ್ಚ ತೋರಿಸಿಲ್ಲ ಎಂದು ಆಪಾದಿಸಲಾಗಿದೆ ನಿಜವೇ' ಎಂಬ ಪ್ರಶ್ನೆಗೆ, 'ಜಾಹೀರಾತು ನೀಡುವಂತೆ ಯಾರಿಗೂ ಮೌಖಿಕವಾಗಿ ಅಥವಾ ಲಿಖಿತವಾಗಿ ಅಧಿಕಾರ ಕೊಟ್ಟಿರಲಿಲ್ಲ' ಎಂದರು.

'ನೀವು ಕಾನೂನು ಬಾಹಿರವಾಗಿ ಮತಪಡೆದು ಆಯ್ಕೆಯಾಗಿದ್ದೀರಿ. ಆದ್ದರಿಂದ, ನಿಮ್ಮ ಗೆಲುವನ್ನು ಅನೂರ್ಜಿತಗೊಳಿಸಿ ನನ್ನನ್ನೇ ಗೆದ್ದ ಅಭ್ಯರ್ಥಿ ಎಂದು ಘೋಷಿಸುವಂತೆ ಅರ್ಜಿದಾರರು ಕೋರಿದ್ದಾರೆ. ಇದಕ್ಕೆ ಏನನ್ನುತ್ತೀರಿ' ಎಂಬ ಪ್ರಶ್ನೆಗೆ, 'ನಾನು 1.45 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದೇನೆ. ಆಯೋಗವು ನನಗೆ ಗೆದ್ದ ಅಭ್ಯರ್ಥಿ ಎಂದು ಪ್ರಮಾಣ ಪತ್ರ ನೀಡಿದೆ' ಎಂದರು.

'ಈ ಅರ್ಜಿಯಲ್ಲಿ ನಿಮ್ಮ ಮನವಿ ಏನು' ಎಂಬ ನ್ಯಾಯಮೂರ್ತಿಗಳ ಪ್ರಶ್ನೆಗೆ ಉತ್ತರಿಸಲು ಪ್ರಜ್ವಲ್ ರೇವಣ್ಣ ತಡಬಡಾಯಿಸಿದರು. ನಂತರ ಅವರ ಹೇಳಿಕೆ ದಾಖಲಿಸಿಕೊಂಡು, ಪಾಟಿ ಸವಾಲಿಗೆ ತಯಾರಾಗುವಂತೆ ತಿಳಿಸಲಾಯಿತು. ವಿಚಾರಣೆಯನ್ನು ನವೆಂಬರ್ 4ಕ್ಕೆ ಮುಂದೂಡಲಾಗಿದೆ.

ಪ್ರಕರಣದ ಹಿನ್ನೆಲೆ: '2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಸಂಸದರಾಗಿ ಆಯ್ಕೆಯಾಗಿರುವ ಪ್ರಜ್ವಲ್ ರೇವಣ್ಣ ಚುನಾವಣಾ ಅಕ್ರಮ ಎಸಗಿದ್ದಾರೆ. ನಾಮಪತ್ರ ಸಲ್ಲಿಸುವ ವೇಳೆ ತಮ್ಮ ಆಸ್ತಿಯ ಕುರಿತು ನಿಖರ ಮಾಹಿತಿ ನೀಡಿಲ್ಲ. ಖರ್ಚು–ವೆಚ್ಚಗಳನ್ನು ನ್ಯಾಯೋಚಿತವಾಗಿ ಸಲ್ಲಿಸಿಲ್ಲ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಿ ನನ್ನನ್ನೇ ಗೆದ್ದ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ಅರ್ಜಿದಾರರ ಮನವಿ ಮಾಡಿದ್ದಾರೆ.

ಗೋವಾದಲ್ಲಿ ಭಾರ್ಗವಿ ಪತ್ತೆ

ಬೆಂಗಳೂರು: ನಗರದ ಮಹಾಲಕ್ಷ್ಮಿ ಲೇಔಟ್‌ನಿಂದ ನಾಪತ್ತೆಯಾಗಿದ್ದ 14 ವರ್ಷದ ವಿದ್ಯಾರ್ಥಿನಿ ಭಾರ್ಗವಿ ಗೋವಾದ ಪಣಜಿಯಲ್ಲಿ ಬುಧವಾರ ಸಂಜೆ ಪತ್ತೆಯಾಗಿದ್ದಾಳೆ. ಅಲ್ಲಿನ ಪೊಲೀಸರು ಆಕೆಯನ್ನು ರಕ್ಷಿಸಿ ಸುರಕ್ಷಿತವಾಗಿ ಇರಿಸಿದ್ದಾರೆ. ಭಾರ್ಗವಿ ಕರೆತರಲು ಪೋಷಕರು ಗೋವಾಕ್ಕೆ ತೆರಳಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನ ಶಾಲೆಯಲ್ಲಿ ಓದುತ್ತಿದ್ದಳು. ಅಂಕ ಕಡಿಮೆ ಬಂತು ಎನ್ನುವ ಕಾರಣಕ್ಕೆ 4 ದಿನಗಳ ಹಿಂದೆ ದಿಢೀರ್ ನಾಪತ್ತೆ ಆಗಿದ್ದಳು. ಇದರಿಂದ ಪೋಷಕರು ಆತಂಕಗೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು.

'ಬೆಂಗಳೂರಿನಿಂದ ಬಸ್‌ನಲ್ಲಿ ಒಬ್ಬಳೇ ಮಂಗಳೂರಿಗೆ ತೆರಳಿ ಅಲ್ಲಿ ಆಟೊದಲ್ಲಿ ಸಮುದ್ರ ತೀರಕ್ಕೆ ತೆರಳಿದ್ದಳು. ಸಮುದ್ರ ತೀರದಲ್ಲಿ ಕೆಲ ಸಮಯ ಕಾಲ ಕಳೆದು ಮತ್ತೆ ಆಟೊದಲ್ಲಿ ವಾಪಸ್ ಬಂದಿದ್ದಳು. ಆಟೊ ಚಾಲಕರಿಗೆ ಚಿಕ್ಕಮ್ಮನ ಮನೆಗೆ ತೆರಳುವುದಾಗಿ ತಿಳಿಸಿದ್ದಳು' ಎಂದು ಮೂಲಗಳು ತಿಳಿಸಿವೆ.

ಮಂಗಳೂರಿನಿಂದ ಗೋವಾಕ್ಕೆ ತೆರಳಿದ್ದಳು. ಪಣಜಿಯಲ್ಲಿ ಒಬ್ಬಳೇ ಓಡಾಟ ನಡೆಸುವಾಗ ಸ್ಥಳೀಯರು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸುದ್ದಿ 2 ನಿಮಿಷ

ಎಫ್‌ಐಆರ್ ವರ್ಗಾವಣೆ: ಸುತ್ತೋಲೆಗೆ ನಿರ್ದೇಶನ

ಬೆಂಗಳೂರು: 'ಪ್ರಥಮ ವರ್ತಮಾನ ವರದಿಯನ್ನು (ಎಫ್‌ಐಆರ್) ಒಂದು ಪೊಲೀಸ್ ಠಾಣೆಯಿಂದ ಮತ್ತೊಂದು ಪೊಲೀಸ್ ಠಾಣೆಗೆ ವರ್ಗಾವಣೆ ಮಾಡುವಾಗ ಸಂಬಂಧಿಸಿದ ನ್ಯಾಯಾಲಯಗಳಿಗೆ ಈ ಕುರಿತು ತಕ್ಷಣ ಮಾಹಿತಿ ನೀಡುವಂತಾಗಬೇಕು. ಈ ದಿಸೆಯಲ್ಲಿ ಪೊಲೀಸ್ ಮತ್ತು ಪ್ರಾಸಿಕ್ಯೂಷನ್ ಇಲಾಖೆಗಳಿಗೆ ಅಗತ್ಯ ಸುತ್ತೋಲೆ ಹೊರಡಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

'ಈ ಸಂಬಂಧ ಎಲ್ಲಾ ಪೊಲೀಸ್ ಠಾಣೆಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ಅಗತ್ಯ ಸೂಚನೆ ನೀಡಿ' ಎಂದು ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗೃಹ ಕಾರ್ಯದರ್ಶಿ ಮತ್ತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಆದೇಶಿಸಿದೆ.

'ಎಲ್ಲಾ ವಿಚಾರಣಾ ನ್ಯಾಯಾಲಯಗಳ ನ್ಯಾಯಾಧೀಶರು ಆದೇಶದ ದಿನಾಂಕದೊಂದಿಗೆ ತಮ್ಮ ಇ-ಶೆಡ್ಯೂಲ್‌ಗಳನ್ನು ದೋಷಾರೋಪ ಪಟ್ಟಿಯಲ್ಲಿ ನಮೂದು ಮಾಡಬೇಕು. ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ ಕೂಡಲೇ ಆರ್ಡರ್ ಶೀಟ್‌ಗಳಲ್ಲಿ ಅದು ನಮೂದಾಗುವುದನ್ನು ಖಾತ್ರಿಪಡಿಸಿಕೊಳ್ಳಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಬಿಎಂಎಸ್ ಟ್ರಸ್ಟ್ ಡೀಡ್ ತಿದ್ದುಪಡಿ: ಲೋಕಾಯುಕ್ತಕ್ಕೆ ದೂರು

ಬೆಂಗಳೂರು: ಬಿಎಂಎಸ್ ಸಾರ್ವಜನಿಕ ಶಿಕ್ಷಣ ದತ್ತಿಯ ಟ್ರಸ್ಟ್ ಡೀಡ್ ತಿದ್ದುಪಡಿ ಮತ್ತು ಆಜೀವ ಟ್ರಸ್ಟಿ ನೇಮಕದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರಿಗೆ ಬುಧವಾರ ದೂರು ಸಲ್ಲಿಸಿದೆ.

'ಉನ್ನತ ಶಿಕ್ಷಣ ಇಲಾಖೆಯ ಹಿಂದಿನ ಪ್ರಧಾನ ಕಾರ್ಯದರ್ಶಿ ಜಿ. ಕುಮಾರ್ ನಾಯಕ್, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಶಿಕ್ಷಣ ಇಲಾಖೆ ಉಪ ಕಾರ್ಯದರ್ಶಿ ಎಂ.ಜಿ. ವೆಂಕಟೇಶಯ್ಯ, ಉನ್ನತ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ಹಾಗೂ ಕರ್ನಾಟಕ ಪರಿಸರ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಈ ಎಲ್ಲರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು' ಎಂದು ಕೆಆರ್‌ಎಸ್ ರಾಜ್ಯ ಘಟಕದ ಕಾರ್ಯದರ್ಶಿ ಮಲ್ಲಿಕಾರ್ಜುನಯ್ಯ ಬಿ.ಎಸ್. ದೂರಿನಲ್ಲಿ ಆಗ್ರಹಿಸಿದ್ದಾರೆ.

'₹ 2,000 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಹೊಂದಿರುವ ಬಿಎಂಎಸ್ ಶಿಕ್ಷಣ ದತ್ತಿಯ ಡೀಡ್ ತಿದ್ದುಪಡಿ ಹಾಗೂ ಆಜೀವ ಟ್ರಸ್ಟಿ ನೇಮಕಾತಿ ಪ್ರಸ್ತಾವನ್ನು 2018ರಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ತಿರಸ್ಕರಿಸಿದ್ದರು. ಅದೇ ಪ್ರಸ್ತಾವಕ್ಕೆ ಅನುಮೋದನೆ ನೀಡಿರುವ ಯಡಿಯೂರಪ್ಪ ಅಕ್ರಮ ಎಸಗಿದ್ದಾರೆ' ಎಂದು ಆರೋಪಿಸಿದ್ದಾರೆ. 'ಯಡಿಯೂರಪ್ಪ ಮತ್ತು ಅಶ್ವತ್ಥ ನಾರಾಯಣ ಅಕ್ರಮ ನಡೆಸಿದ್ದಾರೆ. ಸಾರ್ವಜನಿಕ ಶಿಕ್ಷಣ ದತ್ತಿಯನ್ನು ಖಾಸಗಿ ಆಸ್ತಿಯನ್ನಾಗಿ ಕಬಳಿಸುವ ಉದ್ದೇಶ ತಿದ್ದುಪಡಿಗಳ ಹಿಂದಿದೆ. ಇದಕ್ಕಾಗಿ ತಮಗೆ ಬೇಕಾದವರನ್ನು ಆಜೀವ ಟ್ರಸ್ಟಿಗಳನ್ನಾಗಿ ನೇಮಿಸಲು ಅವಕಾಶ ಮಾಡಿಕೊಳ್ಳಲಾಗಿದೆ' ಎಂದಿದ್ದಾರೆ.

ಎಐಕೆಕೆಎಂಎಸ್ ಆಯೋಜಿಸಿದ್ದ ಹೋರಾಟದಲ್ಲಿ ಮಹಿಳೆಯರು ಭಾಗವಹಿಸಿದ್ದರು.

ಬಗರ್ ಹುಕುಂ: ಹಕ್ಕು ಪತ್ರ ವಿತರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನನ್ನು ಗುತ್ತಿಗೆ ಆಧಾರದಲ್ಲಿ ಕೊಡುವ ನಿರ್ಧಾರ ವಾಪಸ್ ಪಡೆಯಬೇಕು ಮತ್ತು ಬಗರ್ ಹುಕುಂ ಸಾಗುವಳಿದಾರಿಗೆ ಹಕ್ಕುಪತ್ರ ವಿತರಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ಕಾರ್ಯಕರ್ತರು, ರೈತರು, ಮಹಿಳೆಯರು ಮಂಗಳವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿದರು.

'ಬಗರ್ ಹುಕುಂ ಸಾಗುವಳಿಯು ಭೂ ಕಬಳಿಕೆಯಲ್ಲ. ಬಂಡವಾಳಶಾಹಿಗಳು ಹಾಗೂ ಕಂಪನಿಗಳು ಭೂಮಿಯನ್ನು ಆಕ್ರಮಿಸಿಕೊಳ್ಳುವುದು ಭೂಕಬಳಿಕೆ. ಬಡರೈತರು ಭೂಮಿ ಕೇಳುವುದು ನೈತಿಕ ಹಕ್ಕು. ರೈತರು ತಮ್ಮ ಹಕ್ಕುಗಳನ್ನು ಕೇಳುತ್ತಿದ್ದಾರೆ. ಬಡ ರೈತರ ಪರ ನಿಲ್ಲಬೇಕಾದುದು ಸರ್ಕಾರದ ಕರ್ತವ್ಯ' ಎಂದು ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಹೇಳಿದರು.

'ಸಣ್ಣ ರೈತರು ಇಂದು ಕಾರ್ಮಿಕರಾಗುತ್ತಿದ್ದಾರೆ. ಅವರು ಹರಿವ ನೀರಿನಂತೆ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿದ್ದಾರೆ. ಅಂತಹ ರೈತರ ಪರವಾಗಿ ನಿಲ್ಲಬೇಕಾದುದು ಸರ್ಕಾರದ ಕರ್ತವ್ಯ. ಆದ್ದರಿಂದ ರೈತರಿಗೆ ಭೂಮಿಯನ್ನು ಗುತ್ತಿಗೆ ಕೊಡುವ ಬದಲು ಹಕ್ಕುಪತ್ರಗಳನ್ನು ನೀಡಬೇಕು' ಎಂದು ಒತ್ತಾಯಿಸಿದರು.

ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ, 'ರೈತರು ದಶಕಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ಭೂಮಿಗೆ ಹಕ್ಕಪತ್ರ ನೀಡಬೇಕು' ಎಂದು ಆಗ್ರಹಿಸಿದರು.

ಎಐಕೆಕೆಎಂಎಸ್ ಸಂಘಟನೆ ರಾಜ್ಯ ಅಧ್ಯಕ್ಷ ಎಚ್.ವಿ. ದಿವಾಕರ್ ಮಾತನಾಡಿ, 'ಬಗರ್ ಹುಕುಂ ಸಾಗುವಳಿದಾರರ ಮೇಲೆ ದಾಳಿಗಳನ್ನು ನಡೆಸಲಾಗುತ್ತಿದೆ. ಅರಣ್ಯ ಇಲಾಖೆಯವರು ಏಕಾಏಕಿ ದಶಕಗಳಿಂದ ಸಾಗುವಳಿ ಮಾಡುತ್ತಿರುವ ಜಮೀನನ್ನು ವಶಪಡಿಸಿಕೊಂಡು ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ದೈಹಿಕವಾಗಿಯೂ ಹಲ್ಲೆಗಳು ನಡೆಯುತ್ತಿವೆ' ಎಂದು ದೂರಿದರು.

ಎಐಕೆಕೆಎಂಎಸ್ ಸಂಘಟನೆಯ ಅಖಿಲ ಭಾರತ ಸಮಿತಿ ಉಪಾಧ್ಯಕ್ಷ ಡಾ. ಟಿ.ಎಸ್. ಸುನೀತ್ ಕುಮಾರ್ ಮಾತನಾಡಿ, ಸುಮಾರು 12 ಲಕ್ಷ ರೈತರ ಅರ್ಜಿಗಳು ಸರ್ಕಾರದ ಮುಂದಿವೆ. ಆದ್ದರಿಂದ, ಸರ್ಕಾರ ಅವರಿಗೆ ಹಕ್ಕುಪತ್ರ ವಿತರಿಸಬೇಕು' ಎಂದು ಒತ್ತಾಯಿಸಿದರು.

ಎಐಕೆಕೆಎಂಎಸ್ ರಾಜ್ಯ ಕಾರ್ಯದರ್ಶಿ ಎಂ. ಶಶಿಧರ್, ಕಚೇರಿ ಕಾರ್ಯದರ್ಶಿ ಎಸ್.ಎನ್.ಸ್ವಾಮಿ ಇದ್ದರು.

ಮುಟ್ಟುಗೋಲು ಹಾಕಿಕೊಂಡಿದ್ದ ಜಮೀನು ಮಾರಾಟ

ತಲೆಮರೆಸಿಕೊಂಡ ಇನ್‌ಸ್ಪೆಕ್ಟರ್ ಕಿಶೋರ್

ಪ್ರಜಾವಾಣಿ ವಾರ್ತೆ

ಬಿ.ಕೆ.ಕಿಶೋರ್

ಬೆಂಗಳೂರು: ಪಿಎಸಿಎಲ್ (ಪರ್ಲ್ ಆಗ್ರೋ ಕಾರ್ಪೊರೇಶನ್ ಸಂಸ್ಥೆ) ಹಗರಣದಲ್ಲಿ ಸುಪ್ರೀಂ ಕೋರ್ಟ್ ಆದೇಶದಂತೆ ಮುಟ್ಟುಗೋಲು ಹಾಕಿಕೊಂಡಿದ್ದ ಜಮೀನನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಪ್ರಕರಣದಲ್ಲಿ ಅಮಾನತುಗೊಂಡಿರುವ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಕೆ. ಕಿಶೋರ್‌ಕುಮಾರ್ ತಲೆಮರೆಸಿಕೊಂಡಿದ್ದಾರೆ.

ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ವಿಪುಲ್‌ಕುಮಾರ್ ಅವರು ಅಮಾನತು ಆದೇಶ ಹೊರಡಿಸಿದ್ದಾರೆ. 'ಪ್ರಕರಣದ ತನಿಖೆಗೆ ಹಾಜರಾಗುವಂತೆ ತನಿಖಾ ತಂಡ ನೋಟಿಸ್ ನೀಡಿದ ಬಳಿಕ ಕಿಶೋರ್ ತಲೆಮರೆಸಿಕೊಂಡಿದ್ದಾರೆ' ಎಂದು ಉಲ್ಲೇಖಿಸಿದ್ದಾರೆ. ಆರೋಪಿ ಇನ್‌ಸ್ಪೆಕ್ಟರ್ ಪತ್ತೆಗೆ ವಿವಿಧ ರಾಜ್ಯಗಳಲ್ಲಿ ಶೋಧ ನಡೆಸಿದ್ದು, ಇನ್ನೂ ಪತ್ತೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಪಿಎಸಿಎಲ್ ಹಗರಣ ಕುರಿತು ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತನಿಖೆ ನಡೆಸಿದ್ದರು. ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡಿರುವ ನ್ಯಾಯಮೂರ್ತಿ ಆರ್.ಎಂ. ಲೋಧಾ ನೇತೃತ್ವದ ಸಮಿತಿಯು ಆನೇಕಲ್ ತಾಲ್ಲೂಕಿನ ಎಂ.ಮೇಡಹಳ್ಳಿಯಲ್ಲಿರುವ 12 ಎಕರೆ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿತ್ತು. ಈ ಜಮೀನನ್ನು ಮಾರಾಟ ಮಾಡಿ ವಂಚನೆಗೊಳಗಾದ ಜನರಿಗೆ ಹಣ ಮರುಪಾವತಿಗೆ ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ಆದರೆ, ಕೆಲವರು ನಕಲಿ ದಾಖಲೆ ಸೃಷ್ಟಿಸಿ ಈ ಜಮೀನನ್ನು ಮಾರಾಟ ಮಾಡಿರುವುದು ಪತ್ತೆಯಾಗಿದೆ.

ಸುಪ್ರೀಂ ಕೋರ್ಟ್ ಮುಟ್ಟುಗೋಲು ಹಾಕಿಕೊಂಡಿದ್ದ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿರುವ ಕುರಿತು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನ ನಿವಾಸಿ ಶ್ರೀಧರ್ ಎಂಬುವವರು ಅತ್ತಿಬೆಲೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆನೇಕಲ್ ಡಿವೈಎಸ್‌ಪಿ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯುತ್ತಿದೆ. ಇನ್‌ಸ್ಪೆಕ್ಟರ್ ಕಿಶೋರ್ ಅವರ ಸಂಬಂಧಿಕರು ಮತ್ತು ನಿಕಟವರ್ತಿಗಳು ಅಕ್ರಮದಲ್ಲಿ ಭಾಗಿಯಾಗಿರುವ ಆರೋಪವಿದೆ.

'ದೂರುದಾರ ಶ್ರೀಧರ್‌ಗೆ ಇನ್‌ಸ್ಪೆಕ್ಟರ್ ಕಿಶೋರ್ ಬೆದರಿಕೆ ಹಾಕಿದ್ದಾರೆ. ಜತೆಗೆ ಆರೋಪಿ ಮಂಜುನಾಥ್ ಹಾಗೂ ಚಂದ್ರಮೋಹನ್ ಜತೆಗೆ ಮೊಬೈಲ್ ಸಂಪರ್ಕದಲ್ಲಿರುವುದು ತನಿಖೆಯಿಂದ ತಿಳಿದುಬಂದಿದೆ. ಈ ಪ್ರಕರಣದಲ್ಲಿ ಕಿಶೋರ್ ಅವರನ್ನು 12ನೇ ಆರೋಪಿಯಾಗಿ ಮಾಡಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಅವರು ಎರಡು ಮೊಬೈಲ್ ಬಳಸುತ್ತಿರುವುದು ತನಿಖೆ ವೇಳೆ ಸಾಬೀತಾಗಿದೆ. ತನಿಖೆಗೆ ಮೊಬೈಲ್ ಒಪ್ಪಿಸುವಂತೆ ಸೂಚಿಸಿ ನೋಟಿಸ್ ಜಾರಿಗೊಳಿಸಲಾಗಿತ್ತು. ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ' ಎಂದು ಅಮಾನತು ಆದೇಶದಲ್ಲಿ ತಿಳಿಸಲಾಗಿದೆ. 'ಕಿಶೋರ್ ಅವರು ಕೌಟುಂಬಿಕ ಸಮಸ್ಯೆಯ ಕಾರಣ ನೀಡಿ, ಅ.1ರಿಂದ 31ರ ತನಕ ಗಳಿಕೆ ರಜೆ ಕೋರಿದ್ದರು. ಈ ರಜೆಯನ್ನು ಮಂಜೂರು ಮಾಡಿರಲಿಲ್ಲ. ಮೈಸೂರು ದಸರಾ ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು. ಕಂಟ್ರೋಲ್ ರೂಂ ಮೂಲಕ ಮಾಹಿತಿ ತಿಳಿಸಲು ಪ್ರಯತ್ನಿಸಿದರೂ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಅನಧಿಕೃತ ಗೈರಾಗಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇಲಾಖೆಯಿಂದಲೇ ಮಾಹಿತಿ ಸೋರಿಕೆ'

'ಕಿಶೋರ್ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರಣಕ್ಕೆ ತನಿಖೆಯ ಮಾಹಿತಿಗಳು ಸೋರಿಕೆ ಆಗುತ್ತಿವೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಇದರಿಂದ ಕಿಶೋರ್ ತಲೆಮರೆಸಿಕೊಳ್ಳಲು ಅನುಕೂಲವಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

3ತಿಂಗಳೊಳಗೆ ಸಾಗುವಳಿ ಪತ್ರ: ಸಚಿವರ ಸೂಚನೆ

ಬೆಂಗಳೂರು: ಬಗರ್ ಹುಕುಂ ಸಮಿತಿ ಭೂ ಮಂಜೂರು ಮಾಡಿದ ರೈತರಿಗೆ ಒಂದು ತಿಂಗಳೊಳಗೆ ಸಾಗುವಳಿ ಪತ್ರ ನೀಡಬೇಕು ಮತ್ತು ಪತ್ರವನ್ನು ಹಸ್ತಾಂತರಿಸಿದ ಮಾಹಿತಿಯನ್ನು ಇಲಾಖೆಗೆ ಸಲ್ಲಿಸಬೇಕೆಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾರ ಪೂಜಾರಿ ಸೂಚನೆ ನೀಡಿದ್ದಾರೆ.

ಬೆಂಗಳೂರು ನಗರ ಜಿಲ್ಲೆ ಕಂದಾಯ ಇಲಾಖೆ ಅಧಿಕಾರಿಗಳ ಜತೆ ಬುಧವಾರ ಸಭೆ ನಡೆಸಿದ ಅವರು, 'ಆನೇಕಲ್ ತಾಲ್ಲೂಕಿನಲ್ಲಿ ಹಲವು ಅರ್ಹರಿಗೆ ಭೂಮಂಜೂರಾತಿ ಮಾಡಿದ್ದರೂ ಸಾಗುವಳಿ ಪತ್ರ ನೀಡದೇ ಇರುವುದು ನನ್ನ ಗಮನಕ್ಕೆ ಬಂದಿದೆ. ಇವರಲ್ಲಿ ಶೋಷಿತ ಸಮಾಜದವರೇ ಹೆಚ್ಚು. ಈಗಾಗಲೇ ಸ್ಥಳ ಪರಿಶೀಲನೆ ನಡೆಸಿರುವ ಪ್ರಕರಣಗಳಲ್ಲಿ ಎಲ್ಲರಿಗೂ ತಿಂಗಳೊಳಗೆ ಸಾಗುವಳಿ ಪತ್ರ ನೀಡಬೇಕು' ಎಂದು ಸೂಚಿಸಿದರು.

ಆನೆಕಲ್ ತಾಲ್ಲೂಕಿನಲ್ಲಿ ಒಟ್ಟು 694 ಅರ್ಜಿಗಳು ಸಲ್ಲಿಕೆಯಾಗಿದ್ದು, ಕೇವಲ 24 ಪ್ರಕರಣಗಳಲ್ಲಿ ಸಾಗುವಳಿ ಪತ್ರ ನೀಡಲಾಗಿದೆ. ಸಮಿತಿ ಮಂಜೂರು ಮಾಡಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ನಡೆದಿದ್ದು, ಶುಲ್ಕ ಪಾವತಿಯೂ ಆಗಿದೆ. ಈ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕು ಎಂದು ತಹಶೀಲ್ದಾರ್ ಅವರಿಗೆ ಸಚಿವರು ಸೂಚಿಸಿದರು.

ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಚುನಾಯಿತರಾದ ಹಿನ್ನೆಲೆಯಲ್ಲಿ ಕೆಪಿಸಿಸಿ ಕಚೇರಿ ಆವರಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ವಿಜಯೋತ್ಸವ ಆಚರಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾ ರೆಡ್ಡಿ ಇದ್ದರು. –ಪ್ರಜಾವಾಣಿ ಚಿತ್ರ.

ಪಕ್ಷ ನಿಷ್ಠೆಗೆ ಖರ್ಗೆ ಸಾಕ್ಷಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಎಸ್. ನಿಜಲಿಂಗಪ್ಪನವರ ನಂತರ ಕನ್ನಡಿಗರೊಬ್ಬರು ಆಯ್ಕೆಯಾಗಿರುವುದು ನಮ್ಮ ಪಾಲಿಗೆ ಭಾಗ್ಯ. ಪಕ್ಷಕ್ಕೆ ನಿಷ್ಠರಾಗಿ ಶ್ರಮಿಸಿದರೆ ಯಾವ ಹಂತದವರೆಗೂ ಬೆಳೆಯಬಹುದು ಎಂಬುದಕ್ಕೆ ಖರ್ಗೆ ಸಾಕ್ಷಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಖರ್ಗೆ ಅವರು 50 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಶಾಸಕರಿಂದ ಹಿಡಿದು ಮಂತ್ರಿಯಾಗಿ, ಕೆಪಿಸಿಸಿ ಅಧ್ಯಕ್ಷರಾಗಿ, ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕರಾಗಿ, ಲೋಕಸಭೆಗೆ ಆಯ್ಕೆಯಾಗಿ, ಸಚಿವರಾಗಿ, ರಾಜ್ಯಸಭೆ ವಿರೋಧ ಪಕ್ಷದ ನಾಯಕರಾಗಿ, ಈಗ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ' ಎಂದರು.

ಖರ್ಗೆ ಅವರು ಗಾಂಧಿ ಕುಟುಂಬದ ರಿಮೋಟ್ ಕಂಟ್ರೋಲ್ ಆಗಿರುತ್ತಾರೆ ಎಂಬ ಬಿಜೆಪಿ ಟೀಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಖರ್ಗೆ ಅವರಿಗೆ ಅವರದೇ ಆದ ಅನುಭವವಿದೆ. ಜೊತೆಗೆ, ಹಿರಿಯರ ಅನುಭವಗಳನ್ನು ನಿರಾಕರಿಸಲು ಸಾಧ್ಯವೇ? ಎಂದರು. ಖರ್ಗೆ ಅವರ ಆಯ್ಕೆ ಕರ್ನಾಟಕದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬ ಪ್ರಶ್ನೆಗೆ, 'ಯಾವುದೇ ಕಪ್ಪು ಚುಕ್ಕೆ ಇಲ್ಲದ ರಾಜಕಾರಣಿ ರಾಜ್ಯಕ್ಕೆ ಸಿಕ್ಕಿರುವುದು ಶಕ್ತಿಯಲ್ಲವೇ? ಕೇವಲ ರಾಜ್ಯ ಅಥವಾ ದಕ್ಷಿಣ ಭಾರತಕ್ಕೆ ಮಾತ್ರವಲ್ಲ ಅಖಂಡ ಭಾರತಕ್ಕೆ ಖರ್ಗೆಯವರ ಆಯ್ಕೆಯಿಂದ ಶಕ್ತಿ ಬರುತ್ತದೆ' ಎಂದು ಹೇಳಿದರು.

ಖರ್ಗೆ ಅವರು ರಾಜ್ಯದಲ್ಲಿ 3ನೇ ಶಕ್ತಿ ಕೇಂದ್ರ ಆಗುತ್ತಾರಾ ಎಂಬ ಪ್ರಶ್ನೆಗೆ, '3ನೇ ಶಕ್ತಿ ಕೇಂದ್ರ ಯಾಕೆ? ಎಐಸಿಸಿ ಅಧ್ಯಕ್ಷರು ಎಂದರೆ ಅದು ಒಂದೇ ಶಕ್ತಿ ಕೇಂದ್ರ' ಎಂದರು.

2023ಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಸವಾಲು ಖರ್ಗೆ ಅವರಿಗಿದೆಯೇ ಎಂಬ ಪ್ರಶ್ನೆಗೆ, 'ಕೇವಲ ನಮ್ಮ ರಾಜ್ಯ ಮಾತ್ರವಲ್ಲ, ದೇಶದ ಎಲ್ಲ ರಾಜ್ಯಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಸವಾಲಿದೆ. ಕರ್ನಾಟಕ ಕೂಡ ದೇಶದ ಭಾಗ' ಎಂದರು.

ದಕ್ಷಿಣ ವಲಯದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತರ ನಡಿಗೆ

ಪಾದಚಾರಿ ಮಾರ್ಗದಲ್ಲಿ ಕಟ್ಟಡ ಸಾಮಗ್ರಿ: ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಹಾಗೂ ಪಾದಚಾರಿ ಮಾರ್ಗದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಹಾಕಿರುವವರಿಗೆ ದಂಡ ವಿಧಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ತುಷಾರ್ ಗಿರಿನಾಥ್ ಬುಧವಾರ ಬೆಳಿಗ್ಗೆ 6.30ರಿಂದ 9.30ರವರೆಗೆ ಅಧಿಕಾರಿಗಳ ಜೊತೆಗೆ ಸುಮಾರು 7 ಕಿ.ಮೀ ರಸ್ತೆಯಲ್ಲಿ ನಡೆದರು. ಮಿನರ್ವ ವೃತ್ತದಿಂದ ಡಯಾಗ್ನಲ್ ರಸ್ತೆ, ಸಜ್ಜನ್ ರಾವ್ ರಸ್ತೆ, ಕವಿ ಲಕ್ಷ್ಮೀಶ ರಸ್ತೆ, ನ್ಯಾಷನಲ್ ಕಾಲೇಜು ವೃತ್ತ, ಕೆ.ಆರ್.ರಸ್ತೆ, ನೆಟ್ಟಕಲ್ಲಪ್ಪ ವೃತ್ತ, ದೇವನ್ ಮಾದೇವ ರಸ್ತೆ, ಆರ್ಮುಗಂ ವೃತ್ತ, ಪಟ್ಟಾಲಮ್ಮ ದೇವಸ್ಥಾನ ರಸ್ತೆ ಹಾಗೂ ಸೌತ್ ಎಂಡ್ ವೃತ್ತದವರೆಗೆ ಪರಿಶೀಲನೆ ನಡೆಸಿದರು.

ವಿ.ವಿ. ಪುರದ ಜೈನ್ ಟೆಂಪಲ್ ರಸ್ತೆಯಲ್ಲಿ ಪಾದಚಾರಿ ಮಾರ್ಗ ನಿರ್ಮಿಸಲಾಗಿದ್ದ ಶೀಟಿನ ಶೆಡ್ ಅನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ಮೇರೆಗೆ ಮಂಗಳವಾರ ತೆರವುಗೊಳಿಸಲಾಯಿತು

ವಿ.ವಿ. ಪುರದ ಜೈನ್ ಟೆಂಪಲ್ ರಸ್ತೆಯಲ್ಲಿ ಪಾದಚಾರಿ ಮಾರ್ಗ ಹಾಗೂ ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದ್ದ ಶೀಟಿನ ಶೆಡ್ ಅನ್ನು ಆಯುಕ್ತರ ಸೂಚನೆ ಮೇರೆಗೆ ಸ್ಥಳದಲ್ಲೇ ತೆರವುಗೊಳಿಸಲಾಯಿತು. ಬೀಡಾಡಿ ದನ/ ಹಸುಗಳನ್ನು ರಸ್ತೆ ಮೇಲೆ ಬಿಟ್ಟರೆ ಪಶುಪಾಲನಾ ವಿಭಾಗದ ಅಧಿಕಾರಿಗಳು ಅವುಗಳನ್ನು ಪಾಲಿಕೆ ವಶಕ್ಕೆ ಪಡೆದು ದಂಡ ವಿಧಿಸಲು ಕ್ರಮ ಕೈಗೊಳ್ಳುವಂತೆ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸಿರುವವರಿಗೆ ನೋಟಿಸ್ ನೀಡಿ ದಂಡ ವಿಧಿಸಬೇಕು. ಮರಗಳ ಸುತ್ತಲು ಆರ್.ಸಿ.ಸಿ ಗೋಡೆ ನಿರ್ಮಿಸಿರುವುದನ್ನು ತೆರವು ಮಾಡಿ ಮರುವಿನ್ಯಾಸ ಮಾಡಬೇಕು. ರಸ್ತೆ ಬದಿ ಬೃಹತ್ ಮರದ ಬುಡವನ್ನು ತೆರವುಗೊಳಿಸಬೇಕು. ಕೃಷ್ಣರಾವ್ ಪಾರ್ಕ್ ರಸ್ತೆ ಮಾರ್ಗದಲ್ಲಿ ಸಂಪೂರ್ಣ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುವ ಬೀದಿ ಬದಿ ವ್ಯಾಪಾರಿಗಳಿಗೆ ಬೇರಡೆ ಸ್ಥಳ ಗುರುತಿಸಿ ಅವರನ್ನು ಸ್ಥಳಾಂತರಿಸಬೇಕು ಎಂದು ಹೇಳಿದರು.

ಶಾಸಕ ಉದಯ್ ಬಿ. ಗರುಡಾಚಾರ್, ವಲಯ ಆಯುಕ್ತ ಜಯರಾಮ್ ರಾಯಪುರ, ವಲಯ ಜಂಟಿ ಆಯುಕ್ತ ಜಗದೀಶ್ ನಾಯ್ಕ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ವಲಯ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣ, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಹಸಿರು ದೀಪಾವಳಿ ಸಾರ್ವಜನಿಕ ಜಾಗೃತಿ ಜಾಥಾ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ವಿಧಾನಸೌಧದ ಪೂರ್ವದ್ವಾರ, ಬೆಳಿಗ್ಗೆ 10.30

ಭಾರತದ ರೇಷ್ಮೆ ಕೃಷಿ ಪ್ರಸ್ತುತ ಸ್ಥಿತಿ ಮತ್ತು ಮುಂದಿನ ಸವಾಲುಗಳ ಕುರಿತು ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಸಿ. ನಾರಾಯಣಸ್ವಾಮಿ, ರೇಷ್ಮೆ ಉದ್ಯಮದ ಭಾಗೀದಾರರ ಪ್ರಬಂಧಗಳ ಮಂಡನೆ, ಆಯೋಜನೆ: ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಥಳ: ಕಾಸಿಯಾ ಸಭಾಂಗಣ, ವಿಜಯನಗರ, ಬೆಳಿಗ್ಗೆ 10. ಇದೇ ಕಾರ್ಯಕ್ರಮದ ಸಮಾರೋಪ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ನಾರಾಯಣ ಗೌಡ, ಎಂ.ಬಿ. ರಾಜೇಶ್ ಗೌಡ, ಕೆ.ಎನ್. ನರಸಿಂಹಮೂರ್ತಿ. ಸಂಜೆ 4ರಿಂದ.

90 ಮೀಟರ್ ಏರಿಯಲ್ ಲ್ಯಾಡರ್ ಪ್ಲಾಟ್‌ಫಾರ್ಮ್ ಲೋಕಾರ್ಪಣೆ ಸಮಾರಂಭ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಆರಗ ಜ್ಞಾನೇಂದ್ರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಸ್ಥಳ: ವಿಧಾನಸೌಧದ ಪೂರ್ವದ್ವಾರ, ಬೆಳಿಗ್ಗೆ 10

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–7: ಎಚ್.ವಿ. ನಂಜುಂಡಯ್ಯ, ಮಿರ್ಜಾ ಇಸ್ಮಾಯಿಲ್ ಬಸವರಾಜು ಕಟ್ಟಿಮನಿ: ಅಧ್ಯಕ್ಷತೆ: ವ.ಚ. ಚನ್ನೇಗೌಡ, ನುಡಿನಮನ: ಎಸ್.ಎಚ್. ಭುವನೇಶ್ವರ್, ರಾ.ನಂ.ಚಂದ್ರಶೇಖರ, ಸಂತೋಷ ಹಾನಗಲ್ಲ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

14ನೇ ಪದವಿ ಪ್ರದಾನ ದಿನ: ಅತಿಥಿಗಳು: ರಿಷಿಕೇಶ ಟಿ. ಕೃಷ್ಣನ್, ಎಂ.ಆರ್. ಜಯರಾಮ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11.30

ಶಮಂತ.ಡಿ.ಎಸ್. ಅವರ 'ಹಿಮದಗ್ನಿ(ಕನ್ನಡದ ಮೊಟ್ಟ ಮೊದಲ ಕಾಶ್ಮೀರಿ ಡೈರಿ)' ಪುಸ್ತಕ ಬಿಡುಗಡೆ: ಲಲಿತಾ ಶೇಷಾದ್ರಿ, ಪುಸ್ತಕ ಪರಿಚಯ: ಎಂ.ಎಸ್. ಆಶಾದೇವಿ, ಅತಿಥಿಗಳು: ಎಸ್. ನಟರಾಜ್, ಗೀತಾ ಅರವಮುದನ್, ಡಾ. ರೂಪಕಲಾ, ಪಿ. ಕೃಷ್ಣಕಾಂತ್, ಆಯೋಜನೆ: ಸಾರಥಿ, ಸ್ಥಳ: ಮಾನಂದಿ ಸಭಾಂಗಣ, ವಾಸವಿ ದೇವಸ್ಥಾನ ರಸ್ತೆ, ವಿಶ್ವೇಶ್ವರಪುರ, ಮಧ್ಯಾಹ್ನ 2

ಬೈರಮಂಗಲ ರಾಮೇಗೌಡ ಮತ್ತು ಪಾಲನೇತ್ರ ಸಂಪಾದಿಸಿದ ವಿ. ಸೋಮಣ್ಣ ಅಭಿನಂದನಾ ಗ್ರಂಥ 'ವಿಜಯ ಪಥ' ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಪ್ರಹ್ಲಾದ್ ಜೋಶಿ, ಗ್ರಂಥ ಬಿಡುಗಡೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಆರ್. ಅಶೋಕ್, ಜಿ. ಪರಮೇಶ್ವರ್, ಉಪಸ್ಥಿತಿ: ವಿ. ಸೋಮಣ್ಣ, ಆಯೋಜನೆ: ವಿ. ಸೋಮಣ್ಣ ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4.30

ಹೆಲ್ತ್ ಡೆವಲಪ್‌ಮೆಂಟ್ ಸ್ಕಿಲ್ಸ್ ಕುರಿತು ಉಪನ್ಯಾಸ: ಉಪನ್ಯಾಸಕರು: ರತ್ನ ವೆಂಕಟೇಶ್, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ನರ್ತನ ಅಕಾಡೆಮಿ ಸಂಸ್ಥೆಯ ಭರತನಾಟ್ಯ ತಂಡ

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನರ್ತನ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ನೇಮಕಾತಿ ಅಕ್ರಮ: ಉಪಕರಣ ಪೂರೈಸಿದ್ದ ಆರೋಪಿ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ಬುಧವಾರ ಗೋಕಾಕ ತಾಲ್ಲೂಕಿನ ಉಪ್ಪಾರಹಟ್ಟಿಯ ಭೀಮಶಿ ಸಿದ್ದಪ್ಪ ಗುದಿಗೊಪ್ಪ (30) ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣ ಸಂಬಂಧ ಈವರೆಗೆ ಬಂಧಿತರ ಸಂಖ್ಯೆ 23ಕ್ಕೆ ಏರಿಕೆಯಾಗಿದೆ.

ಭೀಮಶಿ ಗುದಿಗೊಪ್ಪ

‘ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಈತ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪೂರೈಸಿದ್ದ. ಇದಲ್ಲದೇ, ಪ್ರಶ್ನೆಪತ್ರಿಕೆ ಸೋರಿಕೆ ಮಾಡಲು ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಲು ಇಬ್ಬರು ಆರೋಪಿಗಳಿಗೆ ಹಣ ನೀಡಿದ್ದ. ಅವನ ಬಳಿ ಇದ್ದ 6 ಮೊಬೈಲ್, ತಲಾ ಒಂದು ಲ್ಯಾಪ್‌ಟಾಪ್, ಕಾರು ಹಾಗೂ 3 ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನವೆಂಬರ್ 1ರಿಂದ ಅಧಿಕೃತ ಸೇವೆ: 10 ಸಾವಿರಕ್ಕೂ ಹೆಚ್ಚು ಡೌನ್‌ಲೋಡ್

ಓಲಾ–ಉಬರ್‌ಗೆ ‘ನಮ್ಮ ಯಾತ್ರಿ’ ಸಡ್ಡು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ, ಉಬರ್, ರ್‍ಯಾಪಿಡೊ ಆಟೊರಿಕ್ಷಾ ಸೇವೆ ದುಬಾರಿ ಬಗ್ಗೆ ವಿವಾದದ ಬೆನ್ನಲ್ಲೇ, ಆಟೊ ಚಾಲಕರೇ ಒಗ್ಗೂಡಿ ರಚಿಸಿಕೊಂಡಿರುವ ‘ನಮ್ಮ ಯಾತ್ರಿ’ ಆ್ಯಪ್ ಆಧಾರಿತ ಸೇವೆ ಮುನ್ನೆಲೆಗೆ ಬಂದಿದೆ. ನವೆಂಬರ್ 1ರಿಂದ ಅಧಿಕೃತ ಸೇವೆ ಆರಂಭವಾಗಲಿದ್ದರೂ, ಅಗ್ರಿಗೇಟರ್ ಆ್ಯಪ್ ಕಂಪನಿಗಳಿಗೆ ಸಡ್ಡು ಹೊಡೆಯಲು ಸಜ್ಜಾಗಿದೆ.

ಆಟೊ ಚಾಲಕರ ಒಕ್ಕೂಟವು ಖಾಸಗಿ ಸಂಸ್ಥೆಯಿಂದ ತಾಂತ್ರಿಕ ನೆರವು ಪಡೆದು ಈ ಆ್ಯಪ್ ಅಭಿವೃದ್ಧಿಪಡಿಸಿದೆ. ಜಿಲ್ಲಾಡಳಿತ ನಿಗದಿ ಮಾಡಿರುವ ದರದಲ್ಲೇ(ಮೊದಲ ಎರಡು ಕಿಲೋ ಮೀಟರ್‌ಗೆ ₹30 ಮತ್ತು ನಂತರದ ಪ್ರತಿ ಕಿಲೋ ಮೀಟರ್‌ಗೆ ₹15) ಆಟೊರಿಕ್ಷಾಗಳನ್ನು ಚಾಲನೆ ಮಾಡಲು ಈ ಒಕ್ಕೂಟ ಮುಂದಾಗಿದೆ. ಆಟೊ ನಿಲ್ದಾಣದಿಂದ ಮನೆ ತನಕ ರಿಕ್ಷಾಗಳನ್ನು ತಂದು ಕರೆದೊಯ್ಯುವುದರಿಂದ ಪಿಕಪ್ ಶುಲ್ಕವಾಗಿ ₹10 ಹೆಚ್ಚುವರಿ ಪಡೆಯಲು ನಿರ್ಧರಿಸಿದೆ. ಈ ಆ್ಯಪ್‌ನಲ್ಲಿ ಆಟೊರಿಕ್ಷಾ ಹೊರತಾಗಿ ಬೇರೆ ವಾಹನಗಳ ಸೇವೆ ಇರುವುದಿಲ್ಲ.



ನಮ್ಮ ಯಾತ್ರಿ ಆ್ಯಪ್

ಓಲಾ, ಉಬರ್, ರ್‍ಯಾಪಿಡೊ ಸೇರಿ ಅಗ್ರಿಗೇಟರ್ ಕಂಪನಿಗಳ ಆಟೊ ಸೇವೆಗೂ ದುಬಾರಿ ದರ ವಿಧಿಸುತ್ತಿದ್ದವು. ಜಿಎಸ್‌ಟಿ ಜತೆಗೆ ಕನ್ವಿನಿಯನ್ಸ್ ಶುಲ್ಕಗಳ ಹೆಸರಿನಲ್ಲಿ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದವು. ಇದರಿಂದ ಬೇಸತ್ತಿದ್ದ ಪ್ರಯಾಣಿಕರು ಮತ್ತು ಆಟೊ ಚಾಲಕರು ಈಗ ‘ನಮ್ಮ ಯಾತ್ರಿ’ ಕಡೆಗೆ ಮುಖ ಮಾಡಿದ್ದಾರೆ. ಕಳೆದ ವಾರ 100 ಮಂದಿಯಷ್ಟೇ ಆ್ಯಪ್ ಡೌನ್‌ಲೋಡ್ ಮಾಡಿದ್ದರು. ಈಗ 10 ಸಾವಿರಕ್ಕೂ ಹೆಚ್ಚು ಜನ ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

‘ಪ್ರಯಾಣಿಕರು ತಮ್ಮ ಪ್ರಯಾಣ ರದ್ದುಗೊಳಿಸಿದರೆ ₹50 ದಂಡ ವಸೂಲಿಯನ್ನೂ ಅಗ್ರಿಗೇಟರ್ ಕಂಪನಿಗಳು ವಿಧಿಸುತ್ತಿದ್ದವು. ಈ ವ್ಯವಸ್ಥೆಯನ್ನು ‘ನಮ್ಮ ಯಾತ್ರಿ’ ಹೊಂದಿರುವುದಿಲ್ಲ. ಪ್ರಯಾಣ ಆರಂಭಿಸುವ ಸ್ಥಳಕ್ಕೆ ಸಮೀಪದಲ್ಲಿರುವ ನಾಲ್ಕೈದು ಚಾಲಕರ ವಿವರ, ಅವರು ನಮೂದಿಸಿರುವ ದರಗಳ ಪಟ್ಟಿ ಪ್ರಯಾಣಿಕರಿಗೆ ಲಭ್ಯವಾಗುತ್ತದೆ. ಆದ್ದರಿಂದ ಪ್ರಯಾಣಿಕರೇ ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ’ ಎಂದು ಒಕ್ಕೂಟದ ಕಾರ್ಯದರ್ಶಿ ರುದ್ರಮೂರ್ತಿ ಹೇಳುತ್ತಾರೆ.

ನವೆಂಬರ್ 1ರಿಂದ ‘ನಮ್ಮ ಯಾತ್ರಿ’ ಸೇವೆ ಅಧಿಕೃತವಾಗಿ ಆರಂಭವಾಗಲಿದೆ. ಚಾಲಕರಿಗೆ ವಿಮಾ ಸೌಲಭ್ಯ ಒದಗಿಸುವ ಆಲೋಚನೆ ಇದೆ. ಹಲವು ವಿಶೇಷಗಳನ್ನು ಪ್ರಯಾಣಿಕರಿಗೆ ದೊರಕಿಸಲಾಗುವುದು ಎಂದು ಅವರು ಹೇಳಿದರು.

ಆಟೊ–ಮೆಟ್ರೊ ಫೀಡರ್ ಸೇವೆ

ಮೆಟ್ರೊ ರೈಲು ನಿಲ್ದಾಣಗಳಿಂದ ಸಮೀಪದ ನಿವಾಸಿಗಳಿಗೆ ಆಟೊ ಫೀಡರ್ ಸೇವೆ ಒದಗಿಸಲು ನಿರ್ಧರಿಸಲಾಗಿದೆ ಎಂದು ರುದ್ರಮೂರ್ತಿ ಹೇಳಿದರು.

ನಿಲ್ದಾಣಗಳಿಂದ 2 ಕಿಲೋ ಮೀಟರ್ ವ್ಯಾಪ್ತಿಗೆ ₹40 ದರ ನಿಗದಿ ಮಾಡಲಾಗುವುದು. ದ್ವಿಚಕ್ರ ವಾಹನ ಮತ್ತು ಕಾರುಗಳನ್ನು ಮೆಟ್ರೊ ನಿಲ್ದಾಣಗಳ ತನಕ ತಂದು ಪಾರ್ಕಿಂಗ್ ಶುಲ್ಕ ನೀಡಿ ನಿಲ್ಲಿಸಬೇಕಾದ ಸ್ಥಿತಿ ಪ್ರಯಾಣಿಕರಿಗೆ ಇದೆ. ಮಳೆ ಬಂದರೆ ದ್ವಿಚಕ್ರ ವಾಹನ ಸವಾರರು ಗಂಟೆಗಟ್ಟಲೆ ಕಾಯಬೇಕಾಗುತ್ತಿದೆ. ಇದೆಲ್ಲದಕ್ಕೂ ಆಟೊ ಮೆಟ್ರೊ ಫೀಡರ್ ಸೇವೆ ಪರಿಹಾರವಾಗಲಿದೆ ಎಂದರು.

ನಿಲ್ಲದ ದರ ಏರಿಳಿತ

ದುಬಾರಿ ದರದ ಬಗ್ಗೆ ಆಕ್ರೋಶ ವ್ಯಕ್ತವಾಗಿದ್ದರಿಂದ ಕನಿಷ್ಠ ದರವನ್ನು ಕಡಿಮೆ ಮಾಡಿರುವ ಓಲಾ, ಉಬರ್, ರ್‍ಯಾಪಿಡೊ ಕಂಪನಿಗಳು ಏರಿಳಿತವನ್ನು ಮುಂದುವರಿಸಿವೆ.

ಒಮ್ಮೊಮ್ಮೆ ಕನಿಷ್ಠ ದರ ₹35 ಇದ್ದರೂ ಮಳೆ ಬಂದ ಸಂದರ್ಭದಲ್ಲಿ ಅದೇ ಸ್ಥಳಕ್ಕೆ ₹100 ದಾಟುತ್ತದೆ. ದರ ನಿಗದಿ ಬಗ್ಗೆ ಇನ್ನೂ ಒಮ್ಮತದ ತೀರ್ಮಾನಕ್ಕೆ ಬರಲು ಸಾರಿಗೆ ಇಲಾಖೆಗೆ ಸಾಧ್ಯವಾಗಿಲ್ಲ. ದರ ನಿಗದಿ ಬಗ್ಗೆ ನವೆಂಬರ್ 7ರೊಳಗೆ ಹೈಕೋರ್ಟ್‌ಗೆ ಸಾರಿಗೆ ಇಲಾಖೆ ವರದಿ ಸಲ್ಲಿಸಬೇಕಿದೆ.

ಡಯಾಲಿಸಿಸ್ ಸಿಬ್ಬಂದಿ ಮುಷ್ಕರ ಇಂದು ಸಭೆ

ಬೆಂಗಳೂರು: ವೇತನ ಪಾವತಿ ವಿಳಂಬ ಹಾಗೂ ಕಾರ್ಮಿಕರ ಆರೋಗ್ಯ ವಿಮೆ (ಇಎಸ್‌ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿಸದಿರುವುದನ್ನು ವಿರೋಧಿಸಿ ರಾಜ್ಯದಾದ್ಯಂತ ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಗುರುವಾರದಿಂದ ಮುಷ್ಕರ ಹಮ್ಮಿಕೊಂಡಿದ್ದು, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಗುರುವಾರ ಮಧ್ಯಾಹ್ನ 2 ಗಂಟೆಗೆ ಸಭೆ ಕರೆದಿದ್ದಾರೆ.

‘ವೇತನ ಸೇರಿ ನಮ್ಮ ಸಮಸ್ಯೆಗಳ ಬಗ್ಗೆ ಪ್ರಶ್ನಿಸಿದಾಗ ವರ್ಗಾವಣೆ ಮಾಡಲಾಗುತ್ತಿದೆ. ಘಟಕಗಳಲ್ಲಿ ಯಂತ್ರಗಳನ್ನು ನಾವೇ ರಿಪೇರಿ ಮಾಡಿಕೊಳ್ಳಬೇಕಾದ ಸ್ಥಿತಿಯಿದೆ. ಆದ್ದರಿಂದ ಮುಷ್ಕರಕ್ಕೆ ನಿರ್ಧರಿಸಿದ್ದೇವೆ’ ಎಂದು ಕರ್ನಾಟಕ ರಾಜ್ಯ ಡಯಾಲಿಸಿಸ್ ನೌಕರರ ಸಂಘದ ಅಧ್ಯಕ್ಷ ಚೇತನ್ ಎಸ್.ಕೆ. ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

PUBLIC NOTICE

Public are informed that our client intends to purchase a Residential Property bearing No. 845, **“MARUTHI NILAYA”,** presently bearing BBMP E-Swathu No.72-1-845, along with a building comprising of Ground Floor, First Floor, Portico and Balcony, measuring East to West : 60 feet and North to South : 40 feet situated at **7th Main, II Cross, HAL II Stage, Indiranagar, Ward No. 112, Domlur, Bangalore,** and bounded on the:

East by : Road;
West by : Property No. 862;
North by : Property No. 844;
South by : Property No. 846.

from its owner **Mr. Raian F. Irani,** son of Mr. Farrokh K. Irani.

Persons having any right over the said property may lodge their objections/ claims with documentary evidence within **10 days** from the date of this publication, to the undersigned.

K.V. Narendra & Associates, Advocates
No. 557, 2nd Floor, 9th A Main, Indiranagar, Bangalore - 560038
Ph : 9945109229 / 9591067392

ನಗರದ ಫ್ಲಾಟ್ ಫಾರ್ಮ್ ರಸ್ತೆ ಜಕ್ಕರಾಯನಕೆರೆ ಬಳಿ ಶೇಷಾದ್ರಿಪುರಂ ಜೆಡಿಎಸ್ ಕಚೇರಿ ಜೆಪಿ ಭವನದ ಮುಂದೆ ಮೆಟ್ರೋ ಗೋಡೆ ಮಳೆ ಮತ್ತು ಗಾಳಿಗೆ ಉರುಳಿ ಕಾರು ಮತ್ತು ಬೈಕ್ ಜಕಮ್ ಗೊಂಡಿರುವ ದೃಶ್ಯ ಬುಧವಾರ ರಾತ್ರಿ ಕಂಡು ಬಂತು ಪ್ರಜಾವಾಣಿ ಚಿತ್ರ/ ಎಂ. ಎಸ್ ಮಂಜುನಾಥ್

ಸಾರ್ವಜನಿಕರ ಆಕ್ರೋಶಕ್ಕೆ ದನಿಯಾದ ಹೈಕೋರ್ಟ್

‘ನಮ್ಮನ್ನು ಹೊರಗೆಳೆದು ಹೊಡೆದಿಲ್ಲ ಅಷ್ಟೇ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹಣ ತುಂಬಿದ್ದರೂ ನಿವೇಶನ ನೀಡಿಲ್ಲ: ಆರೋಪ
- ಬಿಡಿಎಗೆ ಹೈಕೋರ್ಟ್ ತರಾಟೆ

ಬೆಂಗಳೂರು: ‘ಸರ್ಕಾರಿ ಅಧಿಕಾರಿಗಳು ಮತ್ತು ನಮ್ಮ ವ್ಯವಸ್ಥೆ ಸಾರ್ವಜನಿಕರೊಂದಿಗೆ ನಡೆದುಕೊಳ್ಳುತ್ತಿರುವ ಪರಿ ಯಾವಾಗ ಸ್ಫೋಟಗೊಳ್ಳುತ್ತದೆಯೋ ಗೊತ್ತಿಲ್ಲ’ ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

‘ಬೆಂಗಳೂರು ದಕ್ಷಿಣ ವ್ಯಾಪ್ತಿಯ 130 ಎಕರೆ ಪ್ರದೇಶದಲ್ಲಿ ಏರ್ ಕ್ರಾಫ್ಟ್ ಎಂಪ್ಲಾಯೀಸ್ ಕೋ–ಆಪ್ ಸೊಸೈಟಿ ನಿರ್ಮಿಸಿರುವ ಲೇ ಔಟ್‌ನಲ್ಲಿ ನಿವೇಶನಕ್ಕಾಗಿ ಹಣ ತುಂಬಿದ್ದರೂ ನಮಗೆ ಇನ್ನೂ ನಿವೇಶನ ನೀಡಿಲ್ಲ’ ಎಂದು ಆಕ್ಷೇಪಿಸಿ ಬಿ.ಆರ್.ಹೇಮಪ್ರಕಾಶ್ ಸೇರಿದಂತೆ ಐವರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪರ ಹಾಜರಾಗಿದ್ದ ಹಿರಿಯ ವಕೀಲ ನಂಜುಂಡ ರೆಡ್ಡಿ ಅವರು, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಹಾಗೂ ರಿಟ್ ಅರ್ಜಿಗಳು ವಿಚಾರಣೆಗೆ ಬಾಕಿ ಇವೆ. ಪರಿಷ್ಕೃತ ನಕ್ಷೆಗೆ ಸರ್ಕಾರ ಹಸಿರು ನಿಶಾನೆ ತೋರಿಲ್ಲ’ ಎಂದು ವಿವರಣೆ ನೀಡಲು ಮುಂದಾದರು.

ಇದಕ್ಕೆ ಕುಪಿತಗೊಂಡ ನ್ಯಾಯಪೀಠ, ‘ನೀವು (ಬಿಡಿಎ) ಬೇಕಾದವರಿಗೆಲ್ಲಾ ಬೇಕೆಂದ ಕಡೆ ನಿವೇಶನ ನೀಡುತ್ತೀರಿ. ಆದರೆ, ಬಡವರು ದುಡ್ಡು ತುಂಬಿದರೂ ನಿವೇಶನ ನೀಡುವುದಿಲ್ಲ. ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿ ಹತ್ತು ವರ್ಷಗಳಾಗಿವೆ. ಫಲಾನುಭವಿಗಳು ನಿವೇಶನಕ್ಕಾಗಿ ಎಷ್ಟು ಪರದಾಡಬೇಕು. ನಿಮ್ಮ ಜೊತೆ ಸಮರ ಮಾಡುತ್ತಾ ಮಾಡುತ್ತಾ ಅವರು ಇದ್ದಲ್ಲಿಯೇ ಸಮಾಧಿ ಕಟ್ಟಿಕೊಳ್ಳಬೇಕಾ’ ಎಂದು ತರಾಟೆಗೆ ತೆಗೆದುಕೊಂಡಿತು.

‘ನಮ್ಮ ಜನ ಇನ್ನೂ ಸುಮ್ಮನಿದ್ದಾರೆ. ಯಾಕೆಂದರೆ, ಅವರೆಲ್ಲಾ ಭಾಳಾ ಸಜ್ಜನರಿದ್ದಾರೆ. ಒಂದು ವೇಳೆ ನಮ್ಮಲ್ಲಿರುವಂತಹ ವ್ಯವಸ್ಥೆ ಏನಾದರೂ ಫ್ರಾನ್ಸ್, ಜರ್ಮನಿಯಂತಹ ದೇಶಗಳಲ್ಲಿ ಇದ್ದಿದ್ದರೆ ಅಲ್ಲಿನ ಜನರು ವ್ಯವಸ್ಥೆಯ ಪ್ರಮುಖರನ್ನು ಅವರು ವಾಕಿಂಗ್ ಹೋಗುವಾಗ ಇಲ್ಲವೇ ಕಾರುಗಳಲ್ಲಿ ತೆರಳುವಾಗ ಹೊರಗೆಳೆದು ಅಧಿಕಾರಿಗಳು, ನ್ಯಾಯಮೂರ್ತಿಗಳು, ವಕೀಲರೆನ್ನದೆ ಬಾರಿಸುತ್ತಿದ್ದರು’ ಎಂದು ಆಕ್ರೋಶ ಹೊರ ಹಾಕಿತು.

‘ನಮ್ಮ ಜನರು ನಮ್ಮಂತಹವರನ್ನೆಲ್ಲಾ ಬೈದುಕೊಂಡು ಅಡ್ಡಾಡುತ್ತಿದ್ದಾರಷ್ಟೇ. ಅವರ ಕೋಪ ಇನ್ನೂ ರಟ್ಟೆಗೆ ಇಳಿದಿಲ್ಲ. ಇದನ್ನು ನೀವು ನೆನಪಿಟ್ಟುಕೊಳ್ಳಿ. ಬೇಕಾದರೆ ನನ್ನ ಈ ಮಾತುಗಳು ನಿಜ ಹೌದೋ ಅಲ್ಲವೋ ಎಂಬುದನ್ನು ಸಾರ್ವಜನಿಕರ ಮಧ್ಯೆ ಮುಖಕ್ಕೆ ಬಟ್ಟೆ ಸುತ್ತಿಕೊಂಡು ಹೋಗಿ ಪರೀಕ್ಷಿಸಿ’ ಎಂದು ನ್ಯಾಯಪೀಠ ತೀವ್ರ ಅಸಮಾಧಾನ ಹೊರಹಾಕಿತು. ವಿಚಾರಣೆಯನ್ನು ನವೆಂಬರ್ 2ಕ್ಕೆ ಮುಂದೂಡಲಾಗಿದೆ.

ಹಣದ ಅಕ್ರಮ ವರ್ಗಾವಣೆ: ಕೆಎಸ್‌ಎಫ್‌ಐಸಿ ಅಧಿಕಾರಿಗೆ ಜೈಲು

ಬೆಂಗಳೂರು: ಕರ್ನಾಟಕ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದ ಹಾಸನ ಜಿಲ್ಲಾ ಘಟಕದ ಸಹಾಯಕ ವ್ಯವಸ್ಥಾಪಕರಾಗಿದ್ದ ಬಿ.ಸಿ. ಶಾಂತಕುಮಾರ್ ಹಣದ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿರುವುದು ಸಾಬೀತಾಗಿದ್ದು, ಅವರಿಗೆ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ಮೂರು ವರ್ಷಗಳ ಕಠಿಣ ಸಜೆ ವಿಧಿಸಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ ಶಾಂತಕುಮಾರ್ ವಿರುದ್ಧ ಲೋಕಾಯುಕ್ತ ಪೊಲೀಸರು 2009ರ ಡಿಸೆಂಬರ್ 1ರಂದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದರು. ಅವರ ಮನೆ ಹಾಗೂ ಇತರ ಸ್ಥಳಗಳ ಮೇಲೆ ದಾಳಿಮಾಡಿ ಶೋಧ ನಡೆಸಿದ್ದರು. ₹ 84.42 ಲಕ್ಷ ಮೊತ್ತದ ಅಕ್ರಮ ಆಸ್ತಿ ಹೊಂದಿರುವುದು ಪತ್ತೆಯಾಗಿತ್ತು. ಅವರು ಆದಾಯಕ್ಕಿಂತ ಶೇಕಡ 122.79 ರಷ್ಟು ಹೆಚ್ಚು ಆಸ್ತಿ ಹೊಂದಿದ್ದಾರೆ ಎಂದು ತನಿಖಾ ತಂಡ ವರದಿ ನೀಡಿತ್ತು.

ಭೂತಕೋಲ ವಿವಾದ: ನಟ ಚೇತನ್ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಲನಚಿತ್ರ ‘ಕಾಂತಾರ’ ಯಶಸ್ಸು ಸಾಧಿಸಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿರುವ ನಟ ಚೇತನ್ ಅಹಿಂಸಾ, ಭೂತಕೋಲ ಹಿಂದೂ ಸಂಸ್ಕೃತಿ ಅನ್ನುವುದು ಸುಳ್ಳು ಎಂದು ಹೇಳಿದ್ದು ಚರ್ಚೆಗೆ ಗ್ರಾಸವಾಗಿದೆ.

ಜಾಲತಾಣಗಳಲ್ಲಿ ಈ ಕುರಿತ ವಿವಾದ ಜೋರಾಗುತ್ತಿದ್ದಂತೆಯೇ ಸ್ಪಷ್ಟನೆ ನೀಡಿ ವಿಷಯ ತಿಳಿಗೊಳಿಸಲು ಯತ್ನಿಸಿದ್ದಾರೆ.

ಚೇತನ್ ಹೇಳಿದ್ದೇನು?: ‘ನಮ್ಮ ಕನ್ನಡ ಚಿತ್ರ ‘ಕಾಂತಾರ’ ರಾಷ್ಟ್ರಮಟ್ಟದಲ್ಲಿ ಸದ್ದು ಮಾಡುತ್ತಿರುವುದು ಖುಷಿ ತಂದಿದೆ. ಆದರೆ, ಭೂತಕೋಲ ಹಿಂದೂ ಸಂಸ್ಕೃತಿ ಎಂದು ಹೇಳಿರುವ ನಿರ್ದೇಶಕ ರಿಷಬ್ ಶೆಟ್ಟಿ ಅವರ ಮಾತು ಸುಳ್ಳು. ನಮ್ಮ ಪಂಬದ, ನಲಿಕೆ, ಪರವರ ಬಹುಜನ ಸಂಪ್ರದಾಯಗಳು. ವೈದಿಕ-ಬ್ರಾಹ್ಮಣೀಯ ಹಿಂದೂ ಧರ್ಮಕ್ಕಿಂತ ಹಿಂದಿನವು. ಮೂಲನಿವಾಸಿ ಸಂಸ್ಕೃತಿಗಳನ್ನು ಪರದೆಯ ಮೇಲೆ ಮತ್ತು ಹೊರಗೆ ಸತ್ಯದೊಂದಿಗೆ ಪ್ರದರ್ಶಿಸಬೇಕು ಎಂದು ನಾನು ಕೋರುತ್ತೇನೆ’ ಎಂದು ಹೇಳಿಕೊಂಡಿದ್ದರು.



ಚೇತನ್

ಸ್ಪಷ್ಟನೆ: ಸುದ್ದಿಗೋಷ್ಠಿ ನಡೆಸಿ ಸ್ಪಷ್ಟನೆ ನೀಡಿದ ಚೇತನ್, ‘ರಿಷಬ್ ಶೆಟ್ಟಿ ಅವರು ಭೂತಕೋಲ ಹಿಂದೂ ಸಂಪ್ರದಾಯ ಎಂದು ಹೇಳಿದ್ದಾರೆ. ನಾನು ಪಂಬದ ಅನ್ನೋ ಪುಸ್ತಕ ಓದಿದ್ದೇನೆ. ಈ ಪಂಬದ ಅನ್ನುವುದು ಆದಿವಾಸಿ ಪರಂಪರೆ. ಮೂಲನಿವಾಸಿ ಪರಂಪರೆ ಅಲ್ಲಿಂದ ಬಂದಿದೆ. ಪಂಜುರ್ಲಿ, ಪುಡಿಚಾಮುಂಡಿ (ಪಿಲಿ ಚಾಮುಂಡಿ) ಈ ವಿಚಾರಗಳು ನಮ್ಮ ಮೂಲನಿವಾಸಿ ಸಂಸ್ಕೃತಿ ಎಂದು ನಟ ಚೇತನ್ ಹೇಳಿದ್ದಾರೆ. ಹಿಂದೂ ಧರ್ಮದ ಬೆಳವಣಿಗೆಯ ದೃಷ್ಟಿಯಿಂದ ಮೂಲ ನಿವಾಸಿ ಸಂಸ್ಕೃತಿಯನ್ನು ವೈದಿಕ ಧರ್ಮದ ಒಳಗೆ ತರಲಾಗಿದೆ. ಪಂಜುರ್ಲಿ ಅಂದರೆ ಹಂದಿಯ ದೈವ ರೂಪದ ಆರಾಧನೆ. ಅದನ್ನು ವಿಷ್ಣುವಿನ ಅವತಾರ ಎಂದು ಹೇಳಿಕೊಂಡು ವರಾಹ ಎಂದು ಸಂಸ್ಕೃತದ ಶಬ್ದದಲ್ಲಿ ಕರೆದು ಬ್ರಾಹ್ಮಣ್ಯವನ್ನು ಹೇರುವ ಕೆಲಸ ಆಗಬಾರದು. ನೆಲಮೂಲ ಪರಂಪರೆಯ ಪಂಜುರ್ಲಿಯೇ ಬೇರೆ. ವೈದಿಕರು ಹೇಳುವ ವಿಷ್ಣುವಿನ ಅವತಾರವಾದ ವರಾಹವೇ ಬೇರೆ. ಇವೆರಡನ್ನೂ ಬೆರೆಸಬಾರದು. ಮೂಲ ಸಂಸ್ಕೃತಿಯನ್ನು ಹೈಜಾಕ್ ಮಾಡಬಾರದು’ ಎಂದಿದ್ದಾರೆ.

ನೋಬೊ ನಗರದಲ್ಲಿ ರಸ್ತೆ ಮೇಲೆ ಒಳಚರಂಡಿ ನೀರು ಹರಿಯುತ್ತಿರುವುದು

ನೋಬೊ ನಗರ: ರಸ್ತೆ ಮೇಲೆ ಒಳಚರಂಡಿ ನೀರು

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರ ವ್ಯಾಪ್ತಿಯ ನೋಬೊ ನಗರದಲ್ಲಿ ಒಳಚರಂಡಿ ನೀರು ರಸ್ತೆ ಮತ್ತು ಮಳೆ ನೀರು ಕಾಲುವೆಗಳಲ್ಲೇ ಹರಿಯುತ್ತಿದ್ದು, ಇಡೀ ಬಡಾವಣೆಯಲ್ಲಿ ದುರ್ನಾತ ಬೀರುತ್ತಿದೆ.

ಒಳಚರಂಡಿ ನೀರು ಸರಾಗವಾಗಿ ಹರಿದುಹೋಗುವ ವ್ಯವಸ್ಥೆ ಇಲ್ಲದೆ ರಸ್ತೆ ಮತ್ತು ರಸ್ತೆಬದಿಯ ಚರಂಡಿಯಲ್ಲಿ ಹರಿಯುವಂತಾಗಿದೆ. 10 ದಿನಗಳಿಂದ ಈ ಸಮಸ್ಯೆ ಮುಂದುವರಿದಿದ್ದು, ನಿವಾಸಿಗಳು ಮೂಗು ಮುಚ್ಚಿ ತಿರುಗಬೇಕಾದ ಸ್ಥಿತಿ ಇದೆ. ರಸ್ತೆಯ ಮೇಲೆಯೇ ನೀರು ಹರಿಯುತ್ತಿರುವುದರಿಂದ ವಾಹನಗಳು ಇದರ ಮೇಲೆಯೇ ಚಲಿಸುತ್ತಿವೆ.

ಜಲಮಂಡಳಿಗೆ ದೂರು ನೀಡಲಾಗಿದ್ದು, ಅಧಿಕಾರಿಗಳು ಸ್ಥಳಕ್ಕೆ ಬಂದು ಸಮಸ್ಯೆಯ ಮೂಲ ಹುಡುಕಾಟದಲ್ಲೇ ತೊಡಗಿದ್ದಾರೆ. ಕೂಡಲೇ ಸಮಸ್ಯೆ ಪರಿಹರಿಸಬೇಕು ಎಂದು ನಿವಾಸಿಗಳು ಒತ್ತಾಯಿಸಿದ್ದಾರೆ.

ಅ. 21ರಂದು ಗಂಧದಗುಡಿಗಾಗಿ ‘ಪುನೀತಪರ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಪಾಲ್ಗೊಂಡಿದ್ದ ಡಾಕ್ಯುಚಿತ್ರ ‘ಗಂಧದಗುಡಿ’ಯ ಬಿಡುಗಡೆ ಪೂರ್ವ ಕಾರ್ಯಕ್ರಮ (ಪ್ರಿ ರಿಲೀಸ್ ಈವೆಂಟ್) ಅಕ್ಟೋಬರ್ 21ರಂದು ಸಂಜೆ 6.30ಕ್ಕೆ ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ.

‘ಅಪ್ಪು (ಪುನೀತ್) ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡ ಈ ಚಿತ್ರದಲ್ಲಿ ಕರ್ನಾಟಕದ ಪ್ರಕೃತಿ, ಪರಿಸರ, ಜೀವ ವೈವಿಧ್ಯ ಎಲ್ಲವೂ ಚಿತ್ರಣಗೊಂಡಿವೆ. ಅ. 29ಕ್ಕೆ ಪುನೀತ್ ನಿಧನರಾಗಿ ಒಂದು ವರ್ಷ ಆಗುತ್ತದೆ. ಇದೇ ಹೊತ್ತಿನಲ್ಲಿ ಅವರನ್ನು ಮತ್ತೆ ತೆರೆಯ ಮೇಲೆ ತರಲು ನಮ್ಮ ಕುಟುಂಬ ಹಾಗೂ ಚಿತ್ರರಂಗದ ಎಲ್ಲರೂ ಒಂದಾಗಿದ್ದೇವೆ’ ಎಂದು ಪುನೀತ್ ಸಹೋದರ, ನಟ ರಾಘವೇಂದ್ರ ರಾಜ್‌ಕುಮಾರ್ ಹೇಳಿದರು.

ಪುನೀತ್ ರಾಜ್‌ಕುಮಾರ್

ಪಿಆರ್‌ಕೆ ಪ್ರೊಡಕ್ಷನ್ಸ್ ಅಡಿ ಪುನೀತ್ ಪತ್ನಿ ಅಶ್ವಿನಿ ಅವರ ನೇತೃತ್ವದಲ್ಲಿ ಈ ಚಿತ್ರ ನಿರ್ಮಾಣಗೊಂಡಿದೆ. ಈ ಚಿತ್ರದಲ್ಲಿ ಪುನೀತ್ ಸಾಮಾನ್ಯನಾಗಿಯೇ ಕಾಣಿಸಿಕೊಂಡಿದ್ದಾರೆ. ಅವರ ಆಸೆಯಂತೆ ಈ ಚಿತ್ರವನ್ನು ನಾಡಿನ ಜನತೆ ವೀಕ್ಷಿಸಿ ಸಂಭ್ರಮಿಸುವಂತೆ ಆಗಬೇಕು ಎಂದು ಅವರು ಕೋರಿದರು.

ಏನೇನಿರಲಿದೆ?

‘ಮುಖ್ಯಮಂತ್ರಿ, ವಿವಿಧ ಸಚಿವರು, ಅಧಿಕಾರಿಗಳು, ಚಿತ್ರರಂಗದ ಪ್ರಮುಖ ಗಣ್ಯರು, ನಟರು ಭಾಗವಹಿಸಲಿದ್ದಾರೆ. ಯಶ್, ಸೂರ್ಯ, ರಾಣಾ ದಗ್ಗುಬಾಟಿ, ಕುನಾಲ್ ಗಾಂಜಾವಾಲಾ, ಬಾಲಯ್ಯ ಸೇರಿ ಹಲವಾರು ಮಂದಿ ಬರಲಿದ್ದಾರೆ. ಶಿವರಾಜ್‌ಕುಮಾರ್, ಪ್ರಭುದೇವ, ರಮ್ಯಾ ಅವರ ನೃತ್ಯ ಕಾರ್ಯಕ್ರಮವಿದೆ. ಒಟ್ಟಿನಲ್ಲಿ ಹಾಡು, ಮನೋರಂಜನೆಯ ಉತ್ಸವ ಇದಾಗಿರಲಿದೆ. ಅಪ್ಪು ಅವರಿಗೆ ಊಟ ಅತ್ಯಂತ ಪ್ರಿಯವಾಗಿತ್ತು. ಆದ್ದರಿಂದ ವಿವಿಧ ಹೋಟೆಲ್‌ನವರು ಆಹಾರ ಮೇಳವನ್ನೂ ಹಮ್ಮಿಕೊಂಡಿದ್ದಾರೆ’ ಎಂದರು.

ಚಿತ್ರದ ನಿರ್ದೇಶಕ ಅಮೋಘವರ್ಷ ಮಾತನಾಡಿ, ‘ಈ ಚಿತ್ರ ಈಗಾಗಲೇ ಅನೇಕ ವಿಶೇಷತೆಗಳನ್ನು ಒಳಗೊಂಡಿದೆ. ಇನ್ನೂ ಒಂದು ಕುತೂಹಲ ಉಳಿದಿದೆ. ಪುನೀತಪರ್ವ ಕಾರ್ಯಕ್ರಮದಲ್ಲಿ ಅದನ್ನು ಅನಾವರಣ ಮಾಡಲಾಗುವುದು’ ಎಂದು ಕುತೂಹಲ ಮೂಡಿಸಿದರು.

ಕಾರ್ಯಕ್ರಮಕ್ಕಾಗಿ ಅರಮನೆ ಮೈದಾನದಲ್ಲಿ (ಕೃಷ್ಣ ವಿಹಾರ ಗೇಟ್ ನಂ 1) ಬೃಹತ್ ವೇದಿಕೆ ಹಾಕಲಾಗಿದೆ. ಧ್ವನಿ, ಬೆಳಕಿನ ಸಂಯೋಜನೆ, ಆಸನ, ಭದ್ರತಾ ವ್ಯವಸ್ಥೆ ಭರದಿಂದ ಸಾಗಿದೆ.

ಗೃಹ ಸಚಿವೆ ಸುಯೆಲ್ಲಾ ಬ್ರೇವರ್‌ಮನ್ ರಾಜೀನಾಮೆ

ಲಂಡನ್ (ಎಎಫ್‌ಪಿ): ಬ್ರಿಟನ್ ನೂತನ ಪ್ರಧಾನಿ ಲಿಜ್ ಟ್ರಸ್ ಅವರು ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಅವರ ಸರ್ಕಾರದಿಂದ ಒಬ್ಬೊಬ್ಬರೇ ಹೊರ ನಡೆಯುತ್ತಿರುವ ಬೆಳವಣಿಗೆ ಶುರುವಾಗಿದ್ದು, ಬುಧವಾರ ಗೃಹ ಸಚಿವೆ, ಭಾರತೀಯ ಮೂಲದ ಸುಯೆಲ್ಲಾ ಬ್ರೇವರ್‌ಮನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ತಮ್ಮ ಬಲಪಂಥೀಯ ಆರ್ಥಿಕತೆಯ ಕಾರ್ಯಸೂಚಿಯಿಂದ ಪ್ರಧಾನಿ ಟ್ರಸ್ ಹಿಂದೆ ಸರಿಯುತ್ತಿದ್ದಂತೆಯೇ ಅವರೂ ಈ ಹುದ್ದೆಯಲ್ಲಿ ಹೆಚ್ಚುಕಾಲ ಮುಂದುವರಿಯುವುದು ಅನುಮಾನ ಎಂದು ಹೇಳಲಾಗುತ್ತಿದೆ. ಈಗಾಗಲೇ ಟೋರಿಯ ಐವರು ಸಂಸದರು ಲಿಜ್ ಟ್ರಸ್ ಅವರನ್ನು ಪ್ರಧಾನಿ ಸ್ಥಾನದಿಂದ ಬದಲಾಯಿಸುವಂತೆ ಬಹಿರಂಗವಾಗಿ ಒತ್ತಾಯಿಸಿದ್ದಾರೆ.

ಇತ್ತೀಚೆಗಷ್ಟೇ ಹಣಕಾಸು ಸಚಿವ ಸ್ಥಾನಕ್ಕೆ ಕ್ವಾಸಿ ಕ್ವಾರ್ಟೆಂಗ್ ಅವರು ರಾಜೀನಾಮೆ ಸಲ್ಲಿಸಿದ್ದರು. ಅವರ ಸ್ಥಾನಕ್ಕೆ ಜೆರೆಮಿ ಹಂಟ್ ಅವರನ್ನು ಲಿಜ್ ನೇಮಿಸಿದರು. ಲಿಜ್ ಅವರಿಗೆ ಮುಖಭಂಗವಾಗುವ ರೀತಿ, ಅವರ ಚುನಾವಣಾ ಪ್ರಣಾಳಿಕೆಯ ಭರವಸೆಗೆ ವಿರುದ್ಧವಾಗಿ ಹಂಟ್ ಅವರು ಸಾಲ ಮತ್ತು ತೆರಿಗೆ ಕಡಿತದ ನಿರ್ಧಾರ ಹಿಂಪಡೆದಿದ್ದರು.

‘ರಾಷ್ಟ್ರೀಯ ಆಮ್ಲಜನಕ ಗ್ರಿಡ್ ನೀಲನಕ್ಷೆ’ ವರದಿ ಬಿಡುಗಡೆ

‘ವೈದ್ಯಕೀಯ ಆಮ್ಲಜನಕ: ಸದಾ ಸನ್ನದ್ಧ ಸ್ಥಿತಿಯಲ್ಲಿರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿನ ಆಮ್ಲಜನಕ ವ್ಯವಸ್ಥೆ ಕುರಿತು ಅಧ್ಯಯನ ನಡೆಸಿ ಸಿದ್ಧಪಡಿಸಿರುವ ‘ರಾಷ್ಟ್ರೀಯ ಆಮ್ಲಜನಕ ಗ್ರಿಡ್ ನೀಲನಕ್ಷೆ’ ವರದಿಯನ್ನು ಬುಧವಾರ ನಗರದಲ್ಲಿ ಬಿಡುಗಡೆ ಮಾಡಿದೆ.

‘ಯುಎಸ್‌ಎಐಡಿ ರೈಸ್’, ಸ್ವಸ್ಥ ಅಲಯನ್ಸ್ ಮತ್ತು ಬಿಲ್ ಆ್ಯಂಡ್ ಮೆಲಿಂಡಾ ಗೇಟ್ಸ್ ಫೌಂಡೇಷನ್ ನೆರವಿನೊಂದಿಗೆ ಒನ್ ಹೆಲ್ತ್ ಟ್ರಸ್ಟ್ (ಒಎಚ್‌ಟಿ) ಈ ವರದಿ ಸಿದ್ಧಪಡಿಸಿದೆ.

ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಈ ವರದಿ ಬಿಡುಗಡೆ ಮಾಡಿದರು. ಕೋವಿಡ್ ಪೂರ್ವ ಮತ್ತು ನಂತರದ ಪರಿಸ್ಥಿತಿ ಹಾಗೂ ಭವಿಷ್ಯದಲ್ಲಿ ವೈದ್ಯಕೀಯ ಆಮ್ಲಜನಕ ಅಗತ್ಯತೆಯ ಬಗ್ಗೆ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಸಕಾಲಕ್ಕೆ ವೈದ್ಯಕೀಯ ಆಮ್ಲಜನಕ ತಲುಪಿಸುವ ಮೂಲಕ ಅತ್ಯಮೂಲ್ಯ ಜೀವಗಳನ್ನು ಉಳಿಸಬೇಕು. ಉಸಿರಾಟದ ತೊಂದರೆ ಸೇರಿ ವಿವಿಧ ಕಾಯಿಲೆಗಳಿಗೆ ತುತ್ತಾಗಿರುವವರಿಗೆ ಅಗತ್ಯ ವೈದ್ಯಕೀಯ ಆಮ್ಲಜನಕ ಪೂರೈಕೆಯ ಅನಿವಾರ್ಯ ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮುಖ್ಯವಾಗಿ, ವೈದ್ಯಕೀಯ ಆಮ್ಲಜನಕವನ್ನು ಮಹಾನಗರಗಳನ್ನು ಹೊರತುಪಡಿಸಿ ಇತರ ಪಟ್ಟಣ ಮತ್ತು ನಗರಗಳಲ್ಲಿ ಸಮರ್ಪಕವಾಗಿ ಬಳಸುತ್ತಿಲ್ಲ. ಪೂರೈಕೆಯಲ್ಲೂ ವ್ಯತ್ಯಯವಾಗುತ್ತಿದೆ ಮತ್ತು ವೈದ್ಯಕೀಯ ಸಿಬ್ಬಂದಿಗೆ ಆಮ್ಲಜನಕ ಬಳಕೆ ಕುರಿತು ತರಬೇತಿ ಕೊರತೆ ಇದೆ. ಹೀಗಾಗಿ, ದೇಶದ ಪ್ರತಿಯೊಂದು ಸ್ಥಳಕ್ಕೂ ಆಮ್ಲಜನಕವು ಸಮರ್ಪಕವಾಗಿ ಮತ್ತು ಸಕಾಲಕ್ಕೆ ಲಭ್ಯವಾಗುವ ವ್ಯವಸ್ಥೆಯಾಗಬೇಕು. ಇದರಿಂದ, ಭವಿಷ್ಯದಲ್ಲಿ ಯಾವುದೇ ರೀತಿಯ ಬಿಕ್ಕಟ್ಟು ಎದುರಿಸಲು ಸನ್ನದ್ಧವಾಗಿರಬೇಕು ಎಂದು ಸಲಹೆ ನೀಡಲಾಗಿದೆ.

> **ಆಮ್ಲಜನಕ ಉತ್ಪಾದನೆಗೆ ಈಗ ಕರ್ನಾಟಕದಲ್ಲಿ ಎಲ್ಲ ರೀತಿಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಆದರೆ, ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ.**
> **ಡಿ. ರಂದೀಪ್,** ಆರೋಗ್ಯ ಇಲಾಖೆ ಆಯುಕ್ತ

ಆಮ್ಲಜನಕದ ಬೇಡಿಕೆಯ ಬಗ್ಗೆ ಮುಂಚಿತವಾಗಿ ತಿಳಿದುಕೊಳ್ಳುವ ವ್ಯವಸ್ಥೆ ರೂಪಿಸಬೇಕು. ಬೇಡಿಕೆಗೆ ತಕ್ಕಂತೆ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ವಿತರಣೆ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಬೇಕು ಎಂದು ತಿಳಿಸಿದೆ.

ಕೋವಿಡ್–19ಗೂ ಮೊದಲು ಆಮ್ಲಜನಕ ಉತ್ಪಾದನೆಯು ಮುಖ್ಯವಾಗಿ ಉದ್ಯಮಗಳ ಬೇಡಿಕೆಯನ್ನು ಅವಲಂಬಿಸಿತ್ತು. ಕೋವಿಡ್–19 ಸಾಂಕ್ರಾಮಿಕ ಕಾಯಿಲೆಯ ಬಳಿಕ ಸರ್ಕಾರವು ಆಸ್ಪತ್ರೆಗಳಲ್ಲಿ ಪಿಎಸ್‌ಎ ಘಟಕಗಳನ್ನು ಸ್ಥಾಪಿಸಿತು. ದೇಶದಲ್ಲಿ ಕೋವಿಡ್ ಪೂರ್ವದಲ್ಲಿ ಉತ್ಪಾದನೆಯಾಗುತ್ತಿದ್ದ ಶೇ 90ರಷ್ಟು ಆಮ್ಲಜನಕವನ್ನು ಕೈಗಾರಿಕೆಗಳಿಗೆ ಮೀಸಲಿರಿಸಲಾಗುತ್ತಿತ್ತು. ಉಳಿದದ್ದು ಮಾತ್ರ ವೈದ್ಯಕೀಯ ಆಮ್ಲಜನಕವಾಗಿತ್ತು ಎಂದು ವಿವರಿಸಲಾಗಿದೆ.

‘ಮಾದರಿ ಆಮ್ಲಜನಕ ಗ್ರಿಡ್ ಸಹ ವಿದ್ಯುತ್ ಗ್ರಿಡ್‌ಗಳ ಮಾದರಿಯಲ್ಲಿ ಕಾರ್ಯನಿರ್ವಹಿಸಬೇಕು. ಈ ಮೂಲಕ ಉತ್ಪಾದನೆ, ಸಂಗ್ರಹ, ಸರಬರಾಜು ವ್ಯವಸ್ಥೆಯ ಸಮರ್ಪಕವಾಗಿ ನಡೆಯಬೇಕು. ಜತೆಗೆ ವಿವಿಧ ರೀತಿಯಲ್ಲಿ ಉತ್ಪಾದನೆ, ಸಂಗ್ರಹ ಕೈಗೊಳ್ಳಬೇಕು. ಇದರಿಂದ ಮಾತ್ರ ಯಾವುದೇ ರೀತಿಯ ಬಿಕ್ಕಟ್ಟು ಎದುರಿಸಲು ಸಾಧ್ಯ ಎಂದು ಒನ್ ಹೆಲ್ತ್ ಟ್ರಸ್ಟ್‌ನ ಸಂಸ್ಥಾಪಕ ಮತ್ತು ಅಧ್ಯಕ್ಷ ಡಾ. ರಮಣನ್ ಲಕ್ಷ್ಮಿನಾರಾಯಣ್ ತಿಳಿಸಿದರು.

ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ‘ರಾಷ್ಟ್ರೀಯ ಆಮ್ಲಜನಕ ಗ್ರಿಡ್ ನೀಲನಕ್ಷೆ’ ವರದಿ ಬಿಡುಗಡೆ ಮಾಡಿದರು.

ವರದಿಯಲ್ಲಿ ನೀಡಿರುವ ಪ್ರಮುಖ ಸಲಹೆಗಳು

- ವೈದ್ಯಕೀಯ ಆಮ್ಲಜನಕದ ಸಮರ್ಪಕ ಬಳಕೆ ಕುರಿತು ವೈದ್ಯರು ಮತ್ತು ಇತರ ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಬೇಕು.
- ಉತ್ಪಾದನೆಯ ಸಾಮರ್ಥ್ಯವು ದಿನನಿತ್ಯದ ಅಗತ್ಯಗಳನ್ನು ಪೂರೈಸುತ್ತದೆ. ಆದರೆ, ಸಾಂಕ್ರಾಮಿಕ ಕಾಯಿಲೆಗಳು ಎದುರಾದ ಸಂದರ್ಭದಲ್ಲಿ ಪೂರೈಸುವುದು ಕಷ್ಟಸಾಧ್ಯ. ಆದ್ದರಿಂದ ಕೋವಿಡ್ ನಂತರ ಪ್ರತಿ ದಿನ ಸುಮಾರು 19 ಸಾವಿರ ಮೆಟ್ರಿಕ್ ಟನ್ ಸಂಗ್ರಹದಲ್ಲಿರಿಸಿಕೊಳ್ಳಬೇಕು.
- ಉತ್ಪಾದನೆಯು ಕೆಲವು ಭೌಗೋಳಿಕ ಪ್ರದೇಶದಲ್ಲಿ ಮಾತ್ರ ಹೆಚ್ಚಾಗಿದೆ. ಇದರಿಂದ, ದೂರದ ಸ್ಥಳಗಳಿಗೆ ಕೊಂಡೊಯ್ಯಲು ಸಾರಿಗೆ ವೆಚ್ಚ ಮತ್ತು ಸಮಯ ತೆಗೆದುಕೊಳ್ಳುತ್ತಿದೆ.
- ಆಮ್ಲಜನಕ ಸರಬರಾಜು ವ್ಯವಸ್ಥೆ ಬದಲಾಯಿಸಬೇಕು.
- ಐಎಸ್‌ಒ ಕಂಟೇನರ್‌ಗಳ ಕೊರತೆ ನೀಗಿಸಬೇಕು.
- ಆಮ್ಲಜನಕ ಬಳಕೆಯ ಬಗ್ಗೆ ನಿರಂತರವಾಗಿ ಮಾಹಿತಿ ಸಂಗ್ರಹಿಸಬೇಕು.

ನೈಋತ್ಯ ರೈಲ್ವೆ

Azadi Ka Amrit Mahotsav

ಟೆಂಡರ್ ಪ್ರಕಟಣೆ ಸಂ. 17/2022 ದಿನಾಂಕ : 14–10–2022

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ಮುಕ್ತಾಯದ ಸಮಯ : 14.00 ಗಂಟೆಗಳು**

ಕ್ರ	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಮುಕ್ತಾಯದ ದಿನಾಂಕ
1	38221176	ಹೆಚ್‌ಟಿ ಬಾಕ್ಸ್ ಎನ್ ಗೆ ನಕಲ್	1740 ಸಂಖ್ಯೆಗಳು	03-11-2022
2	30225014	ಐಟಮ್ಸ್ ಬಾಡಿ ಪಿಲ್ಲರ್ ಆರ್‌ಹೆಚ್ ಮತ್ತು ಎಲ್‌ಹೆಚ್ 02 ಸಂಖ್ಯೆಗಳು ಇರುವ ಸೆಟ್	5400 ಸೆಟ್‌ಗಳು	08-11-2022
3	33221288	ಸಿ3ಡಬ್ಲ್ಯು ಡಿಸ್ಟ್ರಿಬ್ಯೂಟರ್ ವಾಲ್ವ್	31 ಸಂಖ್ಯೆಗಳು	25-10-2022
4	30221087	ಕಂಟ್ರೋಲ್ ಡಿಸ್‌ಛಾರ್ಜ್ ಫ್ಲಷ್ ವಾಲ್ವ್	8873 ಸಂಖ್ಯೆಗಳು	03-11-2022
5	33221293	ಬ್ರೇಕ್ ಆಕ್ಚ್ಯುಯೇಟರ್‌ಗಳಿಗಾಗಿ ಫ್ಲೆಕ್ಸಿಬಲ್ ಹೋಸ್ 500 ಎಂಎಂ	2877 ಸಂಖ್ಯೆಗಳು	08-11-2022
6	31221354	ಇನ್ಸ್‌ಟಾಲೇಷನ್ ಲಿವರ್ ಅಸೆಂಬ್ಲಿ	1068 ಸಂಖ್ಯೆಗಳು	10-11-2022
7	56215124ಬಿ	24 ಫೈಬರ್ ಆರ್ಮರ್ಡ್ ಆಪ್ಟಿಕಲ್ ಫೈಬರ್ ಕೇಬಲ್	200 ಕಿ.ಮೀ.ಗಳು	03-11-2022
8	30221789	ಓವರ್‌ಹೌಲಿಂಗ್ ಕಿಟ್	185 ಸೆಟ್‌ಗಳು	10-11-2022
9	47225005	ಬಿಹೆಚ್‌ಇಎಲ್ ಅನುಸಾರವಾಗಿ ಟ್ಯಾಪ್ ಛೇಂಜರ್ ಸ್ವಿಚ್ ಗ್ರೂಪ್ ಕಂಪ್ಲೀಟ್	04 ಸಂಖ್ಯೆಗಳು	14-11-2022
10	33221291	ಫ್ಲೆಕ್ಸ್ ಬಾಲ್ ಕೇಬಲ್ ಶಾರ್ಟ್	97 ಸಂಖ್ಯೆಗಳು	08-11-2022
11	33221324	ಒನ್ ಕೋಚ್ ಸೆಟ್ ಕಂಟ್ರೋಲ್ ಆರ್ಮ್ ರೈಟ್ ಲೆಫ್ಟ್ ಅಪ್ಪರ್	50 ಸೆಟ್‌ಗಳು	15-11-2022
12	33225015	ಮಾಡಿಫೈಡ್ ಜಂಕ್ಷನ್ ಬಾಕ್ಸ್‌ನ ಸರಬರಾಜು, ಸ್ಥಾಪನೆ ಮತ್ತು ಪರೀಕ್ಷಿಸುವುದು	46 ಸೆಟ್‌ಗಳು	11-11-2022
13	33225017	ಐಜಿ 20 ಸ್ಪೀಡ್ ಸೆನ್ಸಾರ್ ಕೇಬಲ್	100 ಸಂಖ್ಯೆಗಳು	15-11-2022
14	75221056	ಪ್ರಿ ಲ್ಯಾಮಿನೇಟೆಡ್ ಶೇಡೆಡ್ ಕಾಂಪ್ರೆಗ್	8064 ಸಂಖ್ಯೆಗಳು	14-11-2022

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/423/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 — ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

ರಾಮನಗರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ : 13/1250–59/22–23
ದಿನಾಂಕ : 12–10–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರ್ಕಾರಿ ನೊಂದಾಯಿತ ಕಂಪನಿಯವರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮುಖಾಂತರ ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ, ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಲೆಕ್ಕ ಶೀರ್ಷಿಕೆ : ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಗರಿಷ್ಠ ಅಂದಾಜು ಮೊತ್ತ ರೂ. 41.14 ಲಕ್ಷಗಳು, ಕನಿಷ್ಠ ಅಂದಾಜು ಮೊತ್ತ ರೂ. 35.21 ಲಕ್ಷಗಳು, ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 27–10–2022 ರ ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ಕಡೆಯ ದಿನಾಂಕ : 29–10–2022 ರ ಸಂಜೆ 4.00 ಗಂಟೆಗೆ. (KG-II) ಟೆಂಡರ್ ಆರ್ಥಿಕ ಬಿಡ್ ತೆರೆಯುವ ಕಡೆಯ ದಿನಾಂಕ : 31–10–2022 ರ ಸಂಜೆ 4.30 ಗಂಟೆಗೆ. (KG-II) ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/293/ಮಣಿಪಾಲ್/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಆಯುಕ್ತರು (ಕಲ್ಯಾಣ ವಿಭಾಗ,) ಬಿಬಿಎಂಪಿ ಕೇಂದ್ರ ಕಛೇರಿ, 2ನೇ ಮಹಡಿ, ಆನೆಕ್ಸ್–2 ಕಟ್ಟಡ, ಎನ್ ಆರ್. ಚೌಕ, ಬೆಂಗಳೂರು–560 002.

ಸಂಖ್ಯೆ: ಬಿಬಿಎಂಪಿ/2022–23/ಇಂಡ್763 — ದಿನಾಂಕ:19.10.2022

ಟೆಂಡರ್ ಪ್ರಕಟಣೆ

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಸಹಾಯಕ ಆಯುಕ್ತರು (ಕಲ್ಯಾಣ ವಿಭಾಗ) ಬಿಬಿಎಂಪಿ ಇವರು ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಸಾಮಗ್ರಿಗಳ ವಿವರ
1	ಬಿಬಿಎಂಪಿ/2022–23/ಇಂಡ್763	Supply of Motorized Two-Wheeler-110CC and Above Gear Less BS-VI
2	ಬಿಬಿಎಂಪಿ/2022–23/ಇಂಡ್748/ ಕರೆ–3	Supply of Smart Cane For Blind. Call-3.

1) ಟೆಂಡರ್ ದಾಖಲೆಗಳನ್ನು ದಿನಾಂಕ **19.10.2022ರಿಂದ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.10.2022ರ ಸಂಜೆ 5.00 ಗಂಟೆಯವರೆಗೆ.** 3) ಪೂರ್ವಭಾವಿ ಸಭೆ ದಿನಾಂಕ: **21.10.2022ರ ಬೆಳಿಗ್ಗೆ 11.00 ಗಂಟೆಗೆ.** 4) ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ : **02.11.2022ರ ಸಂಜೆ 5.00 ಗಂಟೆಯವರೆಗೆ.** 5) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ : **03.11.2022ರ ಸಂಜೆ 5.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಅಥವಾ 080–22975570 ನಿಂದ ಪಡೆಯಬಹುದು.

ಸಹಾಯಕ ಆಯುಕ್ತರು (ಕಲ್ಯಾಣ ವಿಭಾಗ)

ಜಿಲ್ಲಾ ಪಂಚಾಯತ್, ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ-563101. ದೂ: 08152-222570
ಇ-ಮೇಲ್: eepredkolar1@gmail.com

ಏಕ–ಲಕೋಟೆ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಸಂಖ್ಯೆ: 19/ 2022–23 ದಿನಾಂಕ: 10.10.2022

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-I & 2ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಏಕ–ಲಕೋಟೆ ಪದ್ಧತಿಯಲ್ಲಿ (Single Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ **ಕೋಲಾರ ಜಿಲ್ಲೆಯ ಮುಳಬಾಗಿಲು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 03 ಸಂಖ್ಯೆ** ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸುತ್ತಿದ್ದು. **ಈ ಪೈಕಿ 02 ಸಂಖ್ಯೆ ಕಾಮಗಾರಿಗಳು ಪ.ಜಾತಿಗೆ ಹಾಗೂ 01 ಕಾಮಗಾರಿ ಪ.ಪಂಗಡಕ್ಕೆ ಮೀಸಲಾಗಿರುವ ಕಾಮಗಾರಿಗಳಾಗಿರುತ್ತವೆ.** ಟೆಂಡರ್‌ಗಿಟ್ಟ ಮೊತ್ತ ಸರಾಸರಿ **ರೂ. 16.77 ರಿಂದ 33.66 ಲಕ್ಷಗಳು ಆಗಿರುತ್ತದೆ.** ಸದರಿ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://eproc.karnataka.gov.in** ಮುಖಾಂತರ ಇ–ಟೆಂಡರ್‌ಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಫಾರಂಗಳನ್ನು ಆರೋಹಿಸಲು ಸಲ್ಲಿಸುವ ಕೊನೆಯ ದಿನಾಂಕ: **18.10.2022ರಿಂದ 10.11.2022ರ ಸಂಜೆ 16.00 ರವರೆಗೆ** (2) ಟೆಂಡರ್‌ಗಳನ್ನು ಇ–ಪ್ರೋಟಾಲ್‌ನಲ್ಲಿ ತೆರೆಯುವ **ದಿನಾಂಕ: 14.11.2022 ರಂದು ಸಂಜೆ 16.30 ಗಂಟೆಗೆಂದು ನಿಗದಿಪಡಿಸಲಾಗಿದೆ.** ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರಕ್ಯೂರ್ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 91 8046010000 & +91 8022631200, 080–22230960 & 22234115. ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಕೋಲಾರ
ವಾ.ಸಾ.ಸಂ.ಇ./ ಕೋಲಾರ/ ಆರ್.ಓ.ಸಂಖ್ಯೆ 340/ ಎಂಸಿಎ/ 2022–23.

COVID-19. DO NOT PANIC, BE AWARE
Wear Mask | 6 Feet Follow Physical Distancing | Maintain Hand Hygiene

ತಯಾರಿಗೆ ಟಿಪ್ಸ್

- ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆ ಪಡೆಯಲು ದೈಹಿಕ ಕ್ಷಮತೆ ಮುಖ್ಯವಾಗಿರುವುದರಿಂದ ಅಭ್ಯರ್ಥಿಗಳು ಇದರತ್ತ ಗಮನ ಹರಿಸಿ. ಉತ್ತಮ ಆಹಾರ ಸೇವನೆ, ವ್ಯಾಯಾಮ ನಿತ್ಯದ ಭಾಗವಾಗಲಿ.
- ಪಠ್ಯಕ್ರಮದ ಪ್ರಕಾರ ಅಧ್ಯಯನ ಸಾಮಗ್ರಿಗಳನ್ನು ಹೊಂದಿಸಿಕೊಂಡು, ವೇಳಾಪಟ್ಟಿ ತಯಾರಿಸಿಕೊಳ್ಳಿ.
- ಯಾವ ಪಠ್ಯದಿಂದ ಹೆಚ್ಚು ಪ್ರಶ್ನೆಗಳು ಬರಲಿವೆ ಎಂಬುದರ ಕುರಿತು ತಜ್ಞರ ಜೊತೆ, ಸಹಪಾಠಿಗಳ ಜೊತೆ ಚರ್ಚಿಸಿ. ಹಳೆಯ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸಿ.
- ಕೋಚಿಂಗ್ ಸೆಂಟರ್‌ಗಳು ನಡೆಸುವ ಮಾದರಿ ಪರೀಕ್ಷೆಗಳಿಗೆ ಹಾಜರಾಗಿ. ಒಎಂಆರ್ ಪತ್ರಿಕೆ ತುಂಬಲು ಸೂಕ್ತ ತಯಾರಿ ಮಾಡಿಕೊಳ್ಳಿ. ಈಗಾಗಲೇ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ನೇಹಿತರು ಅಥವಾ ಪರಿಚಯಸ್ಥರಿಂದ ಸೂಕ್ತ ಮಾರ್ಗದರ್ಶನ ಪಡೆಯಿರಿ.

–ಕಿಶೋರ್ ಕುಮಾರ್ ಎಸ್.ಕೆ. ಸ್ಪರ್ಧಾತ್ಮಕ ಪರೀಕ್ಷೆಗಳ ಮಾರ್ಗದರ್ಶಕರು, ಧಾರವಾಡ

1,591 ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಪೊಲೀಸ್ ಇಲಾಖೆ ಸೇರಬೇಕು ಎಂಬ ಯುವಕರ ಕನಸು ನನಸಾಗುವ ಮತ್ತೊಂದು ಅವಕಾಶ ಈಗ ಒದಗಿ ಬಂದಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಾಗೂ ಪೊಲೀಸ್ ಕಮಿಷನರೇಟ್‌ಗಳಲ್ಲಿ ಕಾರ್ಯನಿರ್ವಹಿಸಲು 1,591 ಪುರುಷ, ಮಹಿಳಾ, ತೃತೀಯ ಲಿಂಗಿ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಇಂದಿನಿಂದ (ಅ.20) ಆನ್‌ಲೈನ್ ಅರ್ಜಿ ಸಲ್ಲಿಕೆ ಆರಂಭವಾಗಲಿದೆ.

ಕರ್ನಾಟಕ ಸಾಮಾನ್ಯ ವೃಂದ 1,137 ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಹಾಗೂ ಕಲ್ಯಾಣ ಕರ್ನಾಟಕ ವೃಂದದ 454 ಸೇರಿ ಒಟ್ಟು 1,591 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗಳ ಸಂಪೂರ್ಣ ವರ್ಗೀಕರಣದ ಮಾಹಿತಿಗೆ ಇಲಾಖೆ ತನ್ನ ಜಾಲತಾಣದಲ್ಲಿ (https://ksp-recruitment.in/) ಪ್ರಕಟಿಸಿರುವ ಅಧಿಸೂಚನೆ ನೋಡಬಹುದು.

ಅರ್ಜಿ ಸಲ್ಲಿಸುವ ಪ್ರಕ್ರಿಯೆ: ಇಂದಿನಿಂದ (ಅ.20 ರಿಂದ) ಅರ್ಜಿ ಸಲ್ಲಿಕೆ ಆರಂಭವಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ನವೆಂಬರ್ 21, ಅರ್ಜಿ ಸಲ್ಲಿಕೆಗೆ ಕೊನೆ ದಿನ.

ಸಾಮಾನ್ಯ, ಒಬಿಸಿ ಅಭ್ಯರ್ಥಿಗಳಿಗೆ ₹400 ಹಾಗೂ ಎಸ್‌ಸಿ/ಎಸ್‌ಟಿ, ಪ್ರವರ್ಗ 1 ಅಭ್ಯರ್ಥಿಗಳು ₹200 ಅರ್ಜಿ ಶುಲ್ಕ ಪಾವತಿಸಬೇಕು. ಶುಲ್ಕವನ್ನು ಆನ್‌ಲೈನ್, ಚಲನ್ ಪ್ರತಿ ಮೂಲಕ ಬ್ಯಾಂಕ್ ನಲ್ಲಿ ಹಾಗೂ ಅಂಚೆ ಕಚೇರಿಗಳಲ್ಲಿ ಪಾವತಿಸಲು ಅವಕಾಶ ಇದೆ. ಅಭ್ಯರ್ಥಿಗಳು ಕೊನೆ ಕೊನೆ ದಿನಾಂಕದವರೆಗೆ ಕಾಯದೇ ಬೇಗ ಅರ್ಜಿ ಸಲ್ಲಿಸಿ ತಯಾರಿ ನಡೆಸುವುದು ಸೂಕ್ತ.

ಶೈಕ್ಷಣಿಕ ಅರ್ಹತೆ: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವವರು ಕನಿಷ್ಠ ಪಿಯುಸಿ ಪಾಸಾಗಿರಬೇಕು ಅಥವಾ ಪಿಯುಸಿಗೆ ತತ್ಸಮಾನವಾದ ಕೋರ್ಸ್‌ನ್ನು ಪೂರ್ಣಗೊಳಿಸಿರಬೇಕು.

ವೇತನ ಶ್ರೇಣಿ ಏನಿದೆ?

ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಆಗಿ ಆಯ್ಕೆಯಾಗುವ ವ್ಯಕ್ತಿಗೆ ರಾಜ್ಯ ಸರ್ಕಾರ ₹23,500–₹47,650 ವೇತನ ಶ್ರೇಣಿಯನ್ನು ನಿಗದಿಪಡಿಸಿದೆ. 2006ರ ನಿಯಮದಂತೆ ಅಂಶದಾಯಿ ಪಿಂಚಣಿ ಸೌಲಭ್ಯ ದೊರೆಯಲಿದೆ.

ವಯೋಮಿತಿ ಏನಿದೆ?

ಕನಿಷ್ಠ 19 ವರ್ಷ– ಗರಿಷ್ಠ 25 ವರ್ಷಗಳು(ಸಾಮಾನ್ಯ ವರ್ಗದ ಅಭ್ಯರ್ಥಿಗೆ), ಎಸ್.ಸಿ/ಎಸ್‌ಟಿ, ಒಬಿಸಿ ಅಭ್ಯರ್ಥಿಗಳು 27 ವರ್ಷ ಹಾಗೂ ಬುಡಕಟ್ಟು ಅಭ್ಯರ್ಥಿಗಳು 30 ವರ್ಷ ಮೀರಿರಬಾರದು.

ಆಯ್ಕೆ ವಿಧಾನ ಹೇಗಿದೆ?

ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ, ದೈಹಿಕ ಪರೀಕ್ಷೆ ಮೂಲಕ ನೇರ ನೇಮಕಾತಿ ನಡೆಯಲಿದೆ. ಸಂದರ್ಶನ ಇರುವುದಿಲ್ಲ. ವೈದ್ಯಕೀಯ ಪರೀಕ್ಷೆ ಪಾಸಾದ ಮೇಲೆ ಹುದ್ದೆಗಳಿಗೆ ಅನುಗುಣವಾಗಿ ಆಯ್ಕೆ ಪಟ್ಟಿ ಪ್ರಕಟವಾಗುತ್ತದೆ.

ಹಂತ 1: ಈ ಹಂತದಲ್ಲಿ 100 ಅಂಕಗಳಿಗೆ ಬಹುಆಯ್ಕೆ ಮಾದರಿಯ ಪ್ರಶ್ನೆ ಪತ್ರಿಕೆ ಇರುತ್ತದೆ.

ಹಂತ 2: ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳ ಮೆರಿಟ್ ಆಧಾರದ ಮೇಲೆ 1:5 ರಂತೆ ಅಭ್ಯರ್ಥಿಗಳನ್ನು ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಗೆ ಕರೆಯಲಾಗುತ್ತದೆ. ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನಿಷ್ಠ ಶೇ 30 ಅಂಕಗಳನ್ನು ಪಡೆಯಲೇಬೇಕು. ಅಂದಾಗ ಮಾತ್ರ ಈ ದೈಹಿಕ ಪರೀಕ್ಷೆಗ ಅರ್ಹತೆ ಇರುತ್ತದೆ.

ಹಂತ 3: ದೇಹದಾರ್ಢ್ಯತೆ ಹಾಗೂ ಸಹಿಷ್ಣುತೆ ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳನ್ನು ಪರಿಗಣಿಸಿ ಲಭ್ಯ ಹುದ್ದೆಗಳು ಹಾಗೂ ಮೀಸಲಾತಿಗೆ ಅನುಗುಣವಾಗಿ ತಾತ್ಕಾಲಿಕ ಆಯ್ಕೆ ಪಟ್ಟಿ ತಯಾರಿಸಲಾಗುತ್ತದೆ.

ಹಂತ 4: ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಇರುವ ಅಭ್ಯರ್ಥಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ವೈದ್ಯಕೀಯ ಪರೀಕ್ಷೆ ಪಾಸಾದ ಅಭ್ಯರ್ಥಿಗಳನ್ನು ಪರಿಗಣಿಸಿ ಲಭ್ಯ ಹುದ್ದೆಗಳು ಹಾಗೂ ಮೀಸಲಾತಿಗೆ ಅನುಗುಣವಾಗಿ ಅಂತಿಮ ಆಯ್ಕೆ ಪಟ್ಟಿಯನ್ನು ಆಯ್ಕೆ ಪ್ರಾಧಿಕಾರ ಹೊರಬಿಡುತ್ತದೆ.

ಹಂತ 5: ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಸಿಂಧುತ್ವ ಪೂರೈಸಿ ತರಬೇತಿಗೆ ಹಾಜರಾಗಬೇಕಾಗುತ್ತದೆ. ತರಬೇತಿ ನಂತರ ಎರಡೂವರೆ ವರ್ಷ ಪ್ರೊಬೆಷನರಿ ಅವಧಿ ಇರುತ್ತದೆ. ಇದು ಮುಗಿದ ಮೇಲೆ ಇಲಾಖೆಯಲ್ಲಿ ಅಭ್ಯರ್ಥಿಯು ಹುದ್ದೆಯನ್ನು ನಿಭಾಯಿಸಬೇಕಾಗುತ್ತದೆ.

ಪರೀಕ್ಷೆ ಹೇಗಿರುತ್ತದೆ?

ಮೊದಲೇ ಹೇಳಿದಂತೆ ಬಹುಆಯ್ಕೆಯ 100 ಅಂಕಗಳ 100 ಪ್ರಶ್ನೆಗಳ ಸ್ಪರ್ಧಾತ್ಮಕ ಪರೀಕ್ಷೆ ಇದಾಗಿರುತ್ತದೆ. ಪಿಯುಸಿ ಹಂತದವರೆಗಿನ ಪಠ್ಯಕ್ರಮ ಇರಲಿದೆ. ಒಂದೂವರೆ ಗಂಟೆ ಪರೀಕ್ಷಾ ಅವಧಿ ಇದ್ದು, 4 ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ(ನೆಗೆಟಿವ್ ಕರೆಕ್ಷನ್).

ಪರೀಕ್ಷೆ ದಿನಾಂಕ ಅಂತಿಮಗೊಂಡಿಲ್ಲ: ಈ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ದಿನಾಂಕ ಇನ್ನೂ ಘೋಷಣೆಯಾಗಿಲ್ಲ. ಅರ್ಜಿ ಸಲ್ಲಿಸಿದ ನಂತರ ಅಭ್ಯರ್ಥಿಗಳು ಪರೀಕ್ಷಾ ಪ್ರವೇಶ ಪತ್ರ, ಪರೀಕ್ಷಾ ದಿನಾಂಕ ಹಾಗೂ ಪಠ್ಯಕ್ರಮ, ವಿಸ್ತೃತ ಅಧಿಸೂಚನೆಯ ಪರಿಶೀಲನೆಗಾಗಿ ಇಲಾಖೆಯ https://ksp-recruitment.in/ ವೆಬ್‌ಸೈಟ್ ನೋಡಬೇಕು.

ಕೈಬರಹ ನಿಮ್ಮನ್ನು ಗೆಲ್ಲಿಸಬಲ್ಲದು!

ಪರೀಕ್ಷೆಯಲ್ಲಿನ ಉತ್ತರ ಪತ್ರಿಕೆಗಳಲ್ಲಿ ಸುಂದರವಾಗಿ, ಸ್ಫುಟವಾಗಿ ಬರೆಯುವುದರಿಂದ, ಮೌಲ್ಯಮಾಪಕರಿಗೆ ಸುಲಭವಾಗಿ ಉತ್ತರಗಳು ಅರ್ಥವಾಗುತ್ತವೆ. ಒಳ್ಳೆಯ ಕೈಬರಹ ಪರೀಕ್ಷೆಯಲ್ಲಿ ನಿಮ್ಮನ್ನು ಗೆಲಿಸಲೂಬಹುದು

ಪರೀಕ್ಷೆಗಳಲ್ಲಿ ಸಂವಹನ ಕೌಶಲ

ಭಾಗ 2

ಡಾ. ನಿರಂಜನ ವಾನಳ್ಳಿ

ಮೂವತ್ತು ವರ್ಷಗಳಲ್ಲಿ ಹಲವು ಪರೀಕ್ಷೆಗಳಿಗೆ ಪರೀಕ್ಷಕನಾದ ಅನುಭವದಲ್ಲಿ ಹೇಳುತ್ತಿದ್ದೇನೆ, ಯಾವುದೇ ಪರೀಕ್ಷೆ ಇರಲಿ ಎಲ್ಲಿ ಬರವಣಿಗೆ ಇರುತ್ತದೆಯೋ ಅದು ಒಂದು ಗಂಟೆಯ ಪರೀಕ್ಷೆಯೋ ಮೂರೂ ಗಂಟೆಯ ಪರೀಕ್ಷೆಯೋ ಆಗಿರಬಹುದು, ಎಲ್ಲಿ ಅಭ್ಯರ್ಥಿ ಪರೀಕ್ಷಾ ಘಟಕದಲ್ಲಿ ಕುಳಿತು ಬರೆಯಬೇಕಾಗುತ್ತದೆಯೋ, ಅಲ್ಲೆಲ್ಲ ಅಭ್ಯರ್ಥಿಯ ಹಸ್ತಾಕ್ಷರ ಮುಖ್ಯವಾಗುತ್ತದೆ. ಕಂಪ್ಯೂಟರಿನಲ್ಲಿ ಅಥವಾ ಒಎಂಆರ್ ಶೀಟಿನ ಮೇಲೆ ಸರಿ ಚುಕ್ಕೆ ಹಾಕಬೇಕಾದ ಸಂದರ್ಭದಲ್ಲಿ ಮಾತ್ರ ಅಭ್ಯರ್ಥಿಯ ಕೈಬರಹ ಎಂಥದ್ದು ಅಂತ ಯಾರೂ ಕೇಳುವುದಿಲ್ಲ. ಬೇರೆಲ್ಲಾ ಪರೀಕ್ಷೆಗಳಲ್ಲಿ ನಿಮ್ಮ ಕೈಬರಹ ನಿಮ್ಮ ಹಣೆಬರಹ ನಿರ್ಧರಿಸುತ್ತದೆ ಎಂದರೆ ತಪ್ಪಲ್ಲ.

ಈ ಹಂತದಲ್ಲಿ ನಾನು ಕೈಬರಹದ ಪ್ರಾಮುಖ್ಯದ ಬರೆಯುವಾಗ ಕೆಲವರು ಮೂಗು ಮುರಿಯಬಹುದು. ಈ ಆಧುನಿಕ ಕಾಲದಲ್ಲಿ ಯಾರೂ ಮಕ್ಕಳ ಕೈಬರಹದ ಬಗ್ಗೆ ಗಮನವನ್ನೇ ಕೊಡುವುದಿಲ್ಲ. ಹಿಂದೆಲ್ಲ ಅಂಕಲಿಪಿಯಲ್ಲಿ ಮಕ್ಕಳ ಕೈಬರಹವನ್ನು ತಿದ್ದಿಸಲಾಗುತ್ತಿತ್ತು. ಚಿತ್ರ ಬಿಡಿಸುವ ಹಾಗೆ ಸುಂದರ ಅಕ್ಷರಗಳನ್ನು ತಿದ್ದುವ ಕ್ರಿಯೆಗೆ ಬಹಳ ಮಹತ್ವವಿತ್ತು. ಈಗ ಮೊದಲ ದಿನದಿಂದಲೇ ಮೌಸ್ ಹಿಡಿಯುವ ಉಮೇದಿನಲ್ಲಿ ಅಕ್ಷರ ತಿದ್ದುವವರು ಯಾರೂ ಇಲ್ಲ. ದಿನ ನಿತ್ಯ ಇದರ ಬೆಲೆ ಅರಿವಿಗೆ ಬರುವುದಿಲ್ಲ. ಆದರೆ ಲಕ್ಷಾಂತರ ವಿದ್ಯಾರ್ಥಿಗಳು ತೆಗೆದುಕೊಳ್ಳುವ ದೊಡ್ಡ ಪರೀಕ್ಷೆಗಳಲ್ಲಿ ಬರೆಯುವಾಗ ನಿಮಗೆ ಉತ್ತರ ಗೊತ್ತಿರುವಷ್ಟೇ ಅದನ್ನು ಬರೆಯುವ ರೀತಿಯೂ ಮುಖ್ಯವಾಗುತ್ತದೆ ಎಂಬುದನ್ನು ಮರೆಯಬಾರದು.

ಕೇಂದ್ರ ಲೋಕಸೇವಾ ಆಯೋಗದಂಥ ಪರೀಕ್ಷೆಗಳಲ್ಲಿ ಮೂರು ಗಂಟೆಯ ಪ್ರಶ್ನೆಪತ್ರಿಕೆಗೆ ಉತ್ತರ ಬರೆಯುವಾಗ ಅಭ್ಯರ್ಥಿಗಳು ಉತ್ತರದತ್ತ ಗಮನವನ್ನು ಕೇಂದ್ರೀಕರಿಸುತ್ತಾರೆ. ಸಮಯವನ್ನು ಹೊಂದಿಸಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬರೆಯುವುದಷ್ಟೇ ಅವರ ತಲೆಯಲ್ಲಿರುತ್ತದೆ. ಬರೆಯುವ ಧಾವಂತದಲ್ಲಿ ಅವರ ಅಕ್ಷರಗಳು ಕೋಳಿಕಾಲು, ಗುಬ್ಬಿ ಕಾಲಿನಂತಾಗಿರುವುದನ್ನು ಅನೇಕ ವೇಳೆ ಗಮನಿಸಿದ್ದೇನೆ. ಸುಂದರವಾದ ಅಕ್ಷರಗಳ ಉತ್ತರ ಮೊದಲ ನೋಟಕ್ಕೆ ಪರೀಕ್ಷಕನನ್ನು ಸೆಳೆಯುತ್ತದೆ. ಇವೆಲ್ಲ ವೈಚಾರಿಕತೆಯನ್ನು, ಸರಿಯಾದ ಗ್ರಹಿಕೆಯನ್ನು ಬಯಸುವ ಪ್ರಶ್ನೆಗಳಾದ್ದರಿಂದ ಅಭ್ಯರ್ಥಿ ಏನು ಹೇಳುತ್ತಾನೆ ಎಂಬುದು ಬಹಳ ಮುಖ್ಯ. ಆದರೆ ಅವನು/ಅವಳು ಪ್ರಜ್ಞಾಪೂರ್ವಕವಾಗಿ ಯಾರೂ ಓದಬಾರದು ಎಂಬುದಕ್ಕಾಗಿಯೇ ಹೀಗೆ ಗೀಚಿದ್ದಾನೆ/ಳೆ ಎಂದು ಮೊದಲ ನೋಟಕ್ಕೆ ಪರೀಕ್ಷಕನಿಗೆ ಅನಿಸಿದಾಗ ಸಹಜವಾಗಿ ಅವನಿಗೆ ಗೊತ್ತಿಲ್ಲದಂತೆ ಅಂಥ ಉತ್ತರಗಳ ಬಗ್ಗೆ ಅಕಾರಣ ದ್ವೇಷ ಹುಟ್ಟದಿದ್ದರೂ ಪ್ರೀತಿಯಂತೂ ಹುಟ್ಟುವುದಿಲ್ಲ. ಇದು ಪರೀಕ್ಷಕನ ಅರಿವಿಗೆ ಬಾರದಂತೆ ಅರ್ಧ ಅಥವಾ ಒಂದು ಅಂಕ ಕಡಿಮೆ ಬರಲು ಕಾರಣವಾದರೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅದು ಬಹಳ ದುಬಾರಿಯಾಗುತ್ತದೆ.

ನಿಮಗೆ ಗೊತ್ತಿರಲಿ- ರಾಷ್ಟ್ರೀಯ ಪರೀಕ್ಷೆಗಳಲ್ಲಿ ಮೌಲ್ಯಮಾಪನ ಮಾಡುವವರು ಅಭ್ಯರ್ಥಿ ಬರೆದ ಪ್ರತಿ ಪುಟವನ್ನೂ ಓದಲು ಸಾಧ್ಯವೇ ಇಲ್ಲ. ಪ್ರತಿ ಪುಟಕ್ಕೆ ಸಿಗುವ ನಾಲ್ಕೋ ಐದೋ ಸೆಕೆಂಡುಗಳಲ್ಲಿ ಅವರು ಅಭ್ಯರ್ಥಿ ಬರೆದುದನ್ನು ನೋಡಬಹುದೇ ವಿನಾ ಓದಲಾಗದು. ಹೀಗಿರುವಾಗ ನೀವು ಬರೆದ ರೀತಿ-ಓದುವಂತೆ ಇರದಿದ್ದರೆ ನೋಡುವಂತಾದರೂ ಇರಬೇಕಲ್ಲ? ಒಂದು ಕ್ಷಣಕ್ಕೆ ಮೌಲ್ಯಮಾಪಕನಿಗೆ ನಿಮ್ಮ ಬರವಣಿಗೆಯಲ್ಲಿ ಏನಿದೆ ಎಂಬುದು ತಿಳಿಯಬೇಕು. ಮೊದಲ ನೋಟಕ್ಕೆ ಹೂರಣ ದಕ್ಕಬೇಕು. ಅದು ಅಭ್ಯರ್ಥಿಯ ಚಿಂತನಾ ಕ್ರಮವನ್ನು, ವಾದ ಸರಣಿಯನ್ನು, ಬಿಂಬಿಸಬೇಕು. ಈ ಉತ್ತರ ಕೇವಲ ಕಲಿತು ಬರೆದುದಲ್ಲ ಅವನಲ್ಲಿ ಏನೋ ವಿಶೇಷತೆಯಿದೆ ಎನಿಸಿದಾಗ ಮಾತ್ರ ನಿಮಗೆ ದಕ್ಕಬೇಕಾದ ಅಂಕ ದಕ್ಕಬಹುದು. ಇಲ್ಲವಾದಲ್ಲಿ ಒಂದು ಕ್ಷಣದ ಆ ನೋಟ ನಿಮ್ಮ ಸೋಲಿಗೆ ಬರೆದ ಮುನ್ನುಡಿಯಾದೀತು. ನೀವು ಎಷ್ಟೇ ಚೆನ್ನಾಗಿ ಬರೆದಿದ್ದೇನೆಂದು ಆತ್ಮಸ್ಥೈರ್ಯಹೊಂದಿದ್ದರೂ ಮೌಲ್ಯಮಾಪಕರಿಗೆ ಓದಲು ಬಾರದ ಸ್ಥಿತಿಯಲ್ಲಿದ್ದರೆ ಏನು ಪ್ರಯೋಜನ?

ಅದಕ್ಕೇ ಈ ಕಂಪ್ಯೂಟರ್ ಯುಗದಲ್ಲಿ ಕೂಡಾ ಸ್ಪರ್ಧಾತ್ಮಕ ಪರೀಕ್ಷೆಗಳತ್ತ ದೃಷ್ಟಿಯಿರುವವರು ಗಮನಿಸಬೇಕಾದ ಒಂದು ಅಂಶ ಅವರ ಕೈಬರಹದ್ದು. ಒಳ್ಳೆಯ ಕೈಬರಹ ನಿಮ್ಮನ್ನು ಗೆಲ್ಲಿಸಬಹುದು. ನಿಮಗೆ ಎಷ್ಟೇ ಜ್ಞಾನವಿದ್ದರೂ ಎಲ್ಲಾ ಪ್ರಶ್ನೆಗಳಿಗೆ 'ಸುಲಿದ ಬಾಳೆಯ ಹಣ್ಣಿನಂದದಿ' ಉತ್ತರ ಬರೆಯುವ ಸಾಮರ್ಥ್ಯವಿದ್ದರೂ ನಿಮ್ಮ ಕೈಬರಹ ನಿಮ್ಮನ್ನು ಸೋಲಿಸುವ ಅಪಾಯವಿದೆ.

ನಿಮ್ಮ ಹಸ್ತಾಕ್ಷರವು ನಿಮ್ಮ ವ್ಯಕ್ತಿತ್ವದ ಪ್ರತಿಬಿಂಬ ಎನ್ನುತ್ತಾರೆ. ಕೈಬರಹದ ಮೇಲೆ ನಿಮ್ಮ ಭವಿಷ್ಯ ಹೇಳುವವರೂ ಸಿಗುತ್ತಾರೆ. ಅದು ನಿಜವೋ ಗೊತ್ತಿಲ್ಲ. ಆದರೆ ನಿಮ್ಮ ಕೈಬರಹ ಮೌಲ್ಯಮಾಪಕನಿಗೆ ಮೊದಲ ನೋಟಕ್ಕೆ ನಿಮ್ಮ ಬಗ್ಗೆ ಒಂದು ಅಭಿಪ್ರಾಯ ಮೂಡಲು ಕಾರಣವಾಗುತ್ತದೆ ಹಾಗೂ ಆಭಿಪ್ರಾಯವೇ ನಿಮ್ಮ ಸೋಲು- ಗೆಲುವಿಗೆ ಕಾರಣವಾಗುತ್ತದೆ ಎಂಬುದು ಮಾತ್ರ ನಿಜ.

ನನ್ನ ಕೈಬರಹ ಚೆನ್ನಾಗಿಲ್ಲ, ಇದನ್ನು ಸರಿಪಡಿಸಬಹುದೇ ಎಂದು ಕೆಲವರು ಕೇಳಬಹುದು. ಖಂಡಿತ ಸಾಧ್ಯ. ಇಂದಿಗೂ ಮಾರುಕಟ್ಟೆಯಲ್ಲಿ ಸಿಗುವ ಕಾಪಿ ಪುಸ್ತಕ ತನ್ನಿ, ದಿನಾ ಒಂದಿಷ್ಟು ತಿದ್ದಿ. ಗೊತ್ತಾಗದಂತೆ ನಿಮ್ಮ ಕೈಬರಹ ಬದಲಾಗದಿದ್ದರೆ ಹೇಳಿ.

(ಲೇಖಕರು: ಸಂವಹನ ಪ್ರಾಧ್ಯಾಪಕರು ಮತ್ತು ಕುಲಪತಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ)

ಪೆಟ್ರೋಲಿಯಂ ಸಂಗ್ರಹಾಗಾರಗಳು

ಯು.ಟಿ ಆಯೆಷಾ ಫರ್ಜಾನ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ

ಇತ್ತೀಚೆಗೆ ಪೆಟ್ರೋಲಿಯಂ ಉತ್ಪಾದಕ ಮತ್ತು ರಫ್ತುದಾರ ರಾಷ್ಟ್ರಗಳ ಒಕ್ಕೂಟದ (ಒಪೆಕ್ +) ಪ್ರತಿನಿಧಿಗಳು ತೈಲ ಉತ್ಪಾದನೆ ಮತ್ತು ಪೂರೈಕೆಯನ್ನು ಬೃಹತ್ ಪ್ರಮಾಣದಲ್ಲಿ ಕಡಿತಗೊಳಿಸುವುದಾಗಿ ಘೋಷಿಸಿವೆ.

ಒಪೆಕ್ + ನ ಈ ನಿರ್ಧಾರದಿಂದ ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಗೆ ಸಮಸ್ಯೆ ಆಗಲಿದೆ. ಇನ್ನಷ್ಟು ಹಣದುಬ್ಬರಕ್ಕೆ ಕಾರಣವಾಗಿ ಆರ್ಥಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ. ಇದರ ಹಿನ್ನೆಲೆಯಲ್ಲಿ ಭಾರತವು ತನ್ನ ಆಯಕಟ್ಟಿನ ತೈಲ ಸಂಗ್ರಹಾಗಾರಗಳನ್ನು ಭರ್ತಿಮಾಡಿಕೊಳ್ಳುವುದು ಸೂಕ್ತ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮೀಸಲು ತೈಲ ಸಂಗ್ರಹಾಗಾರಗಳು

ಮೀಸಲು ತೈಲ ಸಂಗ್ರಹಾಗಾರಗಳು (ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಪ್ರೊಗ್ರಾಂ– SPRP)– ಇದು, ಕಚ್ಚಾ ತೈಲ ಪೂರೈಕೆಯಲ್ಲಿ ಏರುಪೇರಾದಾಗ ಅಥವಾ ಭವಿಷ್ಯದಲ್ಲಿ ತೈಲ ಬಿಕ್ಕಟ್ಟು ಎದುರಾದಾಗ, ಅದನ್ನು ನಿಭಾಯಿಸಲು ಕೇಂದ್ರ ಸರ್ಕಾರ ಕೈಗೊಂಡಿರುವ ಉಪಕ್ರಮ. ಎರಡು ಹಂತಗಳಲ್ಲಿ ಈ ತೈಲ ಸಂಗ್ರಹಾಗಾರಗಳನ್ನು ನಿರ್ಮಿಸಲಾಗಿದೆ. ಮೊದಲ ಹಂತದಲ್ಲಿ ಕೇಂದ್ರ ಸರ್ಕಾರ ತನ್ನ ವಿಶೇಷ ಉದ್ದೇಶದ ಘಟಕವಾದ (SPV - Special Purpose Vehicle) ಭಾರತೀಯ ಪೆಟ್ರೋಲಿಯಂ ಮೀಸಲು ದಾಸ್ತಾನು ನಿಯಮಿತದ(ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್– ISPRL) ಮೂಲಕ ಒಟ್ಟು 5.33 ಮಿಲಿಯನ್ ಮೆಟ್ರಿಕ್ ಟನ್‌ಗಳ (MMT) ಸಂಗ್ರಹ ಸಾಮರ್ಥ್ಯದ ಪೆಟ್ರೋಲಿಯಂ ಸಂಗ್ರಹಾಗಾರಗಳನ್ನು ಈ ಕೆಳಗಿನ ಮೂರು ಸ್ಥಳಗಳಲ್ಲಿ ಸ್ಥಾಪಿಸಿದೆ. ಆ ವಿವರ ಇಲ್ಲಿದೆ.

ಕ್ರ.ಸಂ	ರಾಜ್ಯ	ಸ್ಥಳ	ತೈಲ ಸಂಗ್ರಹ ಸಾಮರ್ಥ್ಯ (ಮಿ.ಮೆ.ಟನ್‌ಗಳಲ್ಲಿ)
1	ಆಂಧ್ರಪ್ರದೇಶ	ವಿಶಾಖಪಟ್ಟಣ	1.33
2	ಕರ್ನಾಟಕ	ಮಂಗಳೂರು	1.5
3	ಕರ್ನಾಟಕ	ಪಾದೂರು	2.5
ಒಟ್ಟು	5.33 ಮಿ.ಮೆ.ಟನ್‌ಗಳು		

ಹಂತ-2

- ಒಡಿಶಾದ ಚಂಡಿಖೋಲೆ (4 ಮಿ.ಮೆ.ಟನ್) ಮತ್ತು ಕರ್ನಾಟಕದ ಪಾದೂರ್ (2.5 ಮಿ.ಮೆ. ಟನ್) ನಲ್ಲಿ ಒಟ್ಟು 6.5 ಮಿ.ಮೆ.ಟನ್ ಗಳ ಸಂಗ್ರಹ ಸಾಮರ್ಥ್ಯದ ಇನ್ನೂ ಎರಡು ಪೆಟ್ರೋಲಿಯಂ ಸಂಗ್ರಹಾಗಾರಗಳನ್ನು ಸ್ಥಾಪಿಸಿದೆ.
- ನೈಸರ್ಗಿಕ ವಿಪತ್ತು ಅಥವಾ ಯುದ್ಧ ಸೇರಿದಂತೆ, ಕಚ್ಚಾ ತೈಲ ಪೂರೈಕೆಗೆ ಅಡ್ಡಿಯಾಗುವಂತಹ ಘಟನೆಗಳು ಸಂಭವಿಸಿದಾಗ, ಆ ಸಂದರ್ಭದಲ್ಲಿ ಪರಿಸ್ಥಿತಿ ನಿಭಾಯಿಸುವುದಕ್ಕಾಗಿ ಈ ಕಚ್ಚಾ ತೈಲದ ಬೃಹತ್ ಸಂಗ್ರಹಾಗಾರಗಳನ್ನು ಸ್ಥಾಪಿಸಲಾಗಿದೆ.
- ತೈಲ ಬಿಕ್ಕಟ್ಟಿನ ಸಂದರ್ಭದಲ್ಲಿ ಈ ಸಂಗ್ರಹಾಗಾರದಲ್ಲಿರುವ ಪೆಟ್ರೋಲಿಯಂ ಉತ್ಪನ್ನವನ್ನು ಬಳಸಲಾಗುತ್ತದೆ. ಅವಶ್ಯಕತೆಗೆ ಅನುಗುಣ ವಾಗಿ ಈ ಆಯಕಟ್ಟಿನ ನಿಕ್ಷೇಪಗಳಿಂದ ತೈಲವನ್ನು ಹೊರತೆಗೆಯುವ ನಿರ್ಧಾರವನ್ನು ಭಾರತ ಸರ್ಕಾರ ಕೈಗೊಳ್ಳುತ್ತದೆ.
- ಐಎಸ್‌ಆರ್‌ಪಿಎಲ್ ಸಂಸ್ಥೆ ಈ ಕಚ್ಚಾ ತೈಲ ಸಂಗ್ರಹಾಗಾರಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡುತ್ತಿದೆ.
- ವಿಶೇಷ ಉದ್ದೇಶದ ಘಟಕ(ಎಸ್‌ಪಿವಿ) ಐಎಸ್‌ಪಿಆರ್‌ಎಲ್ ಸಂಸ್ಥೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ವ್ಯಾಪ್ತಿಯಲ್ಲಿರುವ ತೈಲ ಉದ್ಯಮ ಅಭಿವೃದ್ಧಿ ಮಂಡಳಿಯ (OIDB) ನಿಯಂತ್ರಣದಲ್ಲಿರುವ ಅಂಗಸಂಸ್ಥೆಯಾಗಿದೆ.

ಪೆಟ್ರೋಲಿಯಂ ನಿಕ್ಷೇಪಗಳ ಅವಶ್ಯಕತೆ

ಸಾರಿಗೆ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ತೈಲ ಅತ್ಯವಶ್ಯಕ ವಾಗಿ ಬೇಕಿದೆ. ಆದರೆ, ಪೆಟ್ರೋಲಿಯಂ ನಿಕ್ಷೇಪಗಳ ವಿಷಯದಲ್ಲಿ ಭಾರತ ಇನ್ನೂ ಸ್ವಾವಲಂಬಿಯಾಗಿಲ್ಲ. ಈ ಕಾರಣದಿಂದಾಗಿ ತೈಲ ಬಿಕ್ಕಟ್ಟು ಎದುರಾದಾಗ, ದೇಶದ ಆರ್ಥಿಕ ಪರಿಸ್ಥಿತಿ ಏರುಪೇರಾಗದಂತೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ಈ ತೈಲ ಸಂಗ್ರಹಾಗಾರಗಳನ್ನು ಸ್ಥಾಪಿಸಲಾಗಿದೆ. ಹೆಚ್ಚಿನ ತೈಲ ರಫ್ತು ಮಾಡುವ ರಾಷ್ಟ್ರಗಳೆಲ್ಲವೂ ಮಧ್ಯಪ್ರಾಚ್ಯ ರಾಷ್ಟ್ರಗಳಾಗಿದ್ದು, ಇವೆಲ್ಲ ರಾಜಕೀಯ ಅಸ್ಥಿರತೆಯ ಪ್ರದೇಶವಾಗಿವೆ. ಈ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯದಲ್ಲಿ ಯುದ್ಧ, ನೈಸರ್ಗಿಕ ವಿಕೋಪಗಳಂತಹ ಅವಘಡಗಳು ಸಂಭವಿಸಿದಾಗ, ದೇಶದ ಆಂತರಿಕ ತೈಲ ಅವಶ್ಯಕತೆಗಳನ್ನು ಪೂರೈಸಲು ಕಚ್ಚಾ ತೈಲ ಸಂಗ್ರಹಾಗಾರಗಳನ್ನು ಹೊಂದುವುದು ಈ ಕಾರ್ಯತಂತ್ರದ ಉದ್ದೇಶವಾಗಿದೆ.

ಉದಾಹರಣೆಗೆ 1990ರಲ್ಲಿ ಕೊಲ್ಲಿ ಯುದ್ಧ ನಡೆದಾಗ ಅದರ ಪರಿಣಾಮವನ್ನು ಪಶ್ಚಿಮ ಏಷ್ಯಾ ರಾಷ್ಟ್ರಗಳು ಅನುಭವಿಸಿದವು. ಆಗ, ಭಾರತವು ಇಂಧನದ ಬಿಕ್ಕಟ್ಟನ್ನು ಎದುರಿಸಿತು. ಅದೇ ವೇಳೆ ಭಾರತದದಲ್ಲಿದ್ದ ತೈಲ ನಿಕ್ಷೇಪಗಳು ಕೇವಲ ದೇಶದಲ್ಲಿನ ಮೂರು ದಿನಗಳ ಅವಶ್ಯಕತೆಯನ್ನು ಪೂರೈಸುವಷ್ಟೇ ಶಕ್ತವಾಗಿದ್ದವು. ಭಾರತವು ಆಗಿನ ಬಿಕ್ಕಟ್ಟನ್ನು ಯಶಸ್ವಿಯಾಗಿ ಎದುರಿಸಿದರೂ, ಅದನ್ನು ಒಂದು ಪಾಠ ಎಂಬಂತೆ ಸ್ವೀಕರಿಸಿತು.

- 2019-20ರಲ್ಲಿ ತೈಲ ಬಳಕೆಯ ಪ್ರಮಾಣವನ್ನು ಗಮನಿಸಿದಾಗ, ಕೇಂದ್ರ ಸರ್ಕಾರಿ ಸ್ವಾಮ್ಯದಲ್ಲಿರುವ ಪೆಟ್ರೋಲಿಯಂ ನಿಕ್ಷೇಪಗಳು ಭಾರತದ ಕಚ್ಚಾ ತೈಲದ ಅಗತ್ಯತೆಗಳಲ್ಲಿ, ಒಂಬತ್ತೂವರೆ ದಿನಗಳಿಗಾಗುವಷ್ಟು ತೈಲವನ್ನು ಮಾತ್ರ ಪೂರೈಸಬಹುದು ಎಂದು ಅಂದಾಜಿಸಲಾಗಿದೆ. ದೇಶದಲ್ಲಿನ ಎಲ್ಲಾ ತೈಲ ಮಾರುಕಟ್ಟೆ ಕಂಪನಿಗಳ (OMCs)ಒಟ್ಟು ಶೇಖರಣಾ ವ್ಯವಸ್ಥೆಯು ದೇಶದ ಅವಶ್ಯಕತೆಯ 64.5 ದಿನಗಳಷ್ಟನ್ನು ಪೂರೈಸಲು ಶಕ್ತವಾಗಿದೆ. ಕೇಂದ್ರದ ಪ್ರಕಾರ ಇವೆರಡನ್ನೂ ಲೆಕ್ಕ ಹಾಕಿದರೆ ಭಾರತದಲ್ಲಿ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಸಂಗ್ರಹಣೆಯ ಒಟ್ಟು ರಾಷ್ಟ್ರೀಯ ಸಾಮರ್ಥ್ಯ 74 ದಿನಗಳದ್ದಾಗಿರುತ್ತದೆ.
- ಅಂತರರಾಷ್ಟ್ರೀಯ ಇಂಧನ ಏಜೆನ್ಸಿಯ ಶಿಫಾರಸುಗಳ ಪ್ರಕಾರ ಎಲ್ಲಾ ದೇಶಗಳು 90 ದಿನಗಳ ಆಮದು ಮೌಲ್ಯದ ಕಚ್ಚಾ ತೈಲ ದಾಸ್ತಾನುಗಳನ್ನು ಹೊಂದಿರಬೇಕು. ಆದ್ದರಿಂದ ನಾವು ಉದ್ದೇಶಿತ ಗುರಿಗಿಂತ ಬಹಳಷ್ಟು ಕೆಳಗಿದ್ದೇವೆ ಎನ್ನಬಹುದು.
- ಭಾರತದ ಕಚ್ಚಾ ತೈಲದ ಒಟ್ಟು ಬೇಡಿಕೆಯಲ್ಲಿ ಶೇ 83ರಷ್ಟನ್ನು ಆಮದು ಮೂಲಕ ಪಡೆಯಲಾಗುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಳಿತಗಳಾಗಿ, ರೂಪಾಯಿ ಮೌಲ್ಯ ಕುಸಿತವಾದಾಗ, ಆಮದು ಮೌಲ್ಯ ಹೆಚ್ಚಾಗುತ್ತದೆ. ಆದ್ದರಿಂದ ಅಂತಹ ಹಣಕಾಸಿನ ವೈಪರೀತ್ಯಗಳನ್ನು ಮತ್ತು ವಿತ್ತೀಯ ನಷ್ಟವನ್ನು ತಪ್ಪಿಸಲು ತೈಲ ಸಂಗ್ರಹಾಗಾರಗಳು ಅತ್ಯವಶ್ಯವಾಗಿವೆ.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು ಮಾಹಿತಿಗಾಗಿ

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

'ಪೆಟ್ರೋಲಿಯಂ ಸಂಗ್ರಹಾಗಾರ' ಯೋಜನೆ ಸೇರಿದಂತೆ ಮತ್ತಷ್ಟು ಪ್ರಚಲಿತ ವಿದ್ಯಮಾನಗಳ ಕುರಿತು ಸಿವಿಲ್ ಸರ್ವಿಸ್ ಪರೀಕ್ಷಾ ಕೇಂದ್ರಿತ ಸರಳಗನ್ನಡದ ವಿಡಿಯೊ ಸಹಿತ ವಿವರಣೆಗಳಿಗಾಗಿ 'ಪ್ರಜಾವಾಣಿ–ಡೆಕ್ಕನ್‌ಹೆರಾಲ್ಡ್'ನ 'ಮಾಸ್ಟರ್‌ಮೈಂಡ್' ಇ-ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

www.exammastermind.com

ಕೆಪಿಎಸ್‌ಸಿಯಲ್ಲಿ ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಗಳು

ಉದ್ಯೋಗ ವಾರ್ತೆ

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ 58 ಸಹಾಯಕ ಸಾಂಖ್ಯಿಕ ಅಧಿಕಾರಿಗಳ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಇದರಲ್ಲಿ ಮೂರು ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿವೆ.

ಅಭ್ಯರ್ಥಿಗಳು ಕೆಪಿಎಸ್‌ಸಿಯ ಅಧಿಕೃತ ವೆಬ್‌ಸೈಟ್ ಮೂಲಕ (ಆನ್‌ಲೈನ್) ಅರ್ಜಿ ಸಲ್ಲಿಸಬೇಕು. ಇಂದಿನಿಂದ (ಅ.20) ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ನವೆಂಬರ್ 18, 2022 ಅರ್ಜಿ ಸಲ್ಲಿಸಲು ಕೊನೆ ದಿನ.

ಅರ್ಜಿ ಶುಲ್ಕ ವಿವರ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹600, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಅಭ್ಯರ್ಥಿಗಳಿಗೆ ₹300, ಮಾಜಿ ಸೈನಿಕರಿಗೆ ₹50 ಶುಲ್ಕವಿದೆ. ಎಸ್‌ಸಿ, ಎಸ್‌ಟಿ, ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಅರ್ಜಿ ಪ್ರಕ್ರಿಯೆ ಶುಲ್ಕ ₹35 ಅನ್ನು ಎಲ್ಲರೂ ಪಾವತಿಸಬೇಕಿದೆ. ಅರ್ಜಿ ಶುಲ್ಕ ಸಲ್ಲಿಕೆಗೆ ನ.19 ಕೊನೆದಿನ. ಆನ್‌ಲೈನ್ ಮೂಲಕ ಶುಲ್ಕ ಪಾವತಿಸಬೇಕು.

ವೇತನ: ₹ 37900 ರಿಂದ ₹70850/- ತಿಂಗಳಿಗೆ

ಶೈಕ್ಷಣಿಕ ಅರ್ಹತೆ: ಗಣಿತ, ಪ್ಯೂರ್ ಮ್ಯಾಥೆಮೆಟಿಕ್ಸ್, ಸ್ಟ್ಯಾಟಿಸ್ಟಿಕ್ಸ್, ಅಪ್ಲೈಡ್ ಸ್ಟ್ಯಾಟಿಸ್ಟಿಕ್ಸ್ , ಸ್ಟ್ಯಾಟಿಸ್ಟಿಕ್ಸ್ ಜತೆಗೆ ಅರ್ಥಶಾಸ್ತ್ರ, ಕ್ವಾಂಟಿಟೇಟಿವ್ ತಂತ್ರಗಳು, ಪ್ಯೂರ್ ಎಕನಾಮಿಕ್ಸ್, ಪ್ಯೂರ್ ಮ್ಯಾಥೆಮೆಟಿಕ್ಸ್, ಅರ್ಥಶಾಸ್ತ್ರ ಅಥವಾ ಕಂಪ್ಯೂಟರ್ ಸೈನ್ಸ್ ಯಾವುದಾದರೂ ಒಂದು ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

ವಯೋಮಿತಿ: ಕನಿಷ್ಠ 18 ವರ್ಷಗಳು, ಗರಿಷ್ಠ 35 ವರ್ಷಗಳು. ಎಸ್‌ಸಿ, ಎಸ್‌ಟಿ, ಪ್ರ.ವ –1 ರ ಅಭ್ಯರ್ಥಿಗಳಿಗೆ 5 ವರ್ಷಗಳು, ಪ್ರ.ವ–2ಎ/2ಬಿ/3ಎ ಮತ್ತು 3 ಬಿ ಅಭ್ಯರ್ಥಿಗಳಿಗೆ 3 ವರ್ಷಗಳು, ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.

ಆಯ್ಕೆ ಪ್ರಕ್ರಿಯೆ: ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆ – ಈ ಎರಡು ವಿಧಾನಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಕನ್ನಡ ಭಾಷಾ ಪರೀಕ್ಷೆ ಕಡ್ಡಾಯ. ಈ ಪರೀಕ್ಷೆಯಲ್ಲಿ ಅರ್ಹತೆ ಪಡೆಯದ ಹೊರತು, ಅಭ್ಯರ್ಥಿಗಳು ಮುಂದಿನ ಸುತ್ತಿನ ಆಯ್ಕೆಗೆ ಅರ್ಹರಾಗುವುದಿಲ್ಲ.

ಕನ್ನಡ ಭಾಷಾ ಪರೀಕ್ಷೆಯಲ್ಲಿ 150 ಅಂಕಗಳ ಒಂದು ಪ್ರಶ್ನೆಪತ್ರಿಕೆ ಇರುತ್ತದೆ. ಅಭ್ಯರ್ಥಿಯು ಉತ್ತೀರ್ಣನಾಗಲು/ಮುಂದಿನ ಹಂತಕ್ಕೆ ಅರ್ಹತೆ ಪಡೆಯಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಇದು ಎಸ್‌ಎಸ್‌ಎಲ್‌ಸಿ ಹಂತದ ಪ್ರಥಮ ಭಾಷೆ ಕನ್ನಡವನ್ನು ಮಾನದಂಡವಾಗಿಟ್ಟುಕೊಂಡು ಈ ಪತ್ರಿಕೆಯನ್ನು ಸಿದ್ಧಪಡಿಸಲಾಗಿರುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆ: ಕನ್ನಡ ಭಾಷೆಯಲ್ಲಿ ಪಾಸಾದ ನಂತರ, ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬೇಕು. ಇದರಲ್ಲಿ ಎರಡು ಪತ್ರಿಕೆಗಳಿರುತ್ತವೆ. ಪ್ರತಿ ಪ್ರಶ್ನೆ ಪತ್ರಿಕೆ 100 ಅಂಕಗಳದ್ದು. ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪ್ರಶ್ನೆಗಳಿರುತ್ತವೆ. ಪ್ರತಿ ತಪ್ಪು ಉತ್ತರಕ್ಕೆ ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ ನಾಲ್ಕನೇ ಒಂದು ಭಾಗದಷ್ಟು (1/4) ಅಂಕಗಳನ್ನು ಕಳೆಯಲಾಗುತ್ತದೆ(ನೆಗೆಟಿವ್ ಕರೆಕ್ಷನ್).

ಅಭ್ಯರ್ಥಿಯ ಎರಡು ಪತ್ರಿಕೆಗಳ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು. ಪತ್ರಿಕೆ–1 ರಲ್ಲಿ ಸಾಮಾನ್ಯಜ್ಞಾನ ವಿಷಯವಿರುತ್ತದೆ. 100 ಅಂಕಗಳ, ಒಂದೂವರೆ ಗಂಟೆ ಅವಧಿಯ ಪರೀಕ್ಷೆ ಇದು. ಪತ್ರಿಕೆ ಎರಡರಲ್ಲಿ ಸಾಮಾನ್ಯ ಜ್ಞಾನ(35 ಅಂಕ), ಸಾಮಾನ್ಯ ಇಂಗ್ಲಿಷ್(35) ಮತ್ತು ಕಂಪ್ಯೂಟರ್ ಜ್ಞಾನ(30) ವಿಷಯದ ಪ್ರಶ್ನೆಗಳಿರುತ್ತವೆ. 2 ಗಂಟೆ ಅವಧಿಯ ಈ ಪತ್ರಿಕೆಯಲ್ಲಿ 100 ಅಂಕಗಳ ಪ್ರಶ್ನೆಗಳಿರುತ್ತವೆ. ಎರಡೂ ಪತ್ರಿಕೆಗಳೂ ಕನ್ನಡ ಮತ್ತು ಆಂಗ್ಲಭಾಷೆಯಲ್ಲಿರುತ್ತವೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಪರೀಕ್ಷಾ ದಿನಾಂಕಗಳನ್ನು ಆಯೋಗದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಅಧಿಸೂಚನೆ ಪ್ರಕಾರ, ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಪ್ರಮಾಣದ ಮೇಲೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಲಾಗುವುದು. ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವುದು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಒಟ್ಟು ಅಂಕಗಳಲ್ಲಿ ಕನಿಷ್ಠ ಶೇ 35ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯ.

ಅಧಿಸೂಚನೆ, ಅರ್ಜಿ ಸಲ್ಲಿಕೆ, ಪರೀಕ್ಷಾ ಪಠ್ಯಕ್ರಮ ಸೇರಿದಂತೆ ಹೆಚ್ಚಿನ ಮಾಹಿತಿಗಾಗಿ http//kpsc.kar.nic.in/Syllabus ಜಾಲತಾಣ ಕ್ಕೆ ಭೇಟಿ ನೀಡಿ.

ಪುಸ್ತಕ ರೂಪದಲ್ಲಿ ಭಾರತ್ ಜೋಡೊ ಯಾತ್ರೆ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಮೈಸೂರು: 'ಸಂಸದ ರಾಹುಲ್ ಗಾಂಧಿ ಕೈಗೊಂಡಿರುವ 'ಭಾರತ್ ಜೋಡೊ' ಯಾತ್ರೆ ಕುರಿತಂತೆ, ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಕೃತಿ ತರುವ ಆಲೋಚನೆ ಇದೆ' ಎಂದು ಕೆಪಿಸಿಸಿ ವಕ್ತಾರ ಎಚ್.ಎ. ವೆಂಕಟೇಶ್ ತಿಳಿಸಿದರು.

'ಸಾಮಾಜಿಕ ಜಾಲತಾಣದಲ್ಲಿ ಬಿಜೆಪಿಯವರು ನಡೆಸುತ್ತಿದ್ದ ಟೀಕೆಗಳಿಗೆ ರಾಹುಲ್ ಗಾಂಧಿ ಯಾತ್ರೆ ಮೂಲಕ ದಿಟ್ಟ ಉತ್ತರ ನೀಡಿದ್ದಾರೆ. ಇದು ದೇಶದ ಇತಿಹಾಸದಲ್ಲಿ ಐತಿಹಾಸಿಕ ದಾಖಲೆಯಾಗಿ ಉಳಿಯಲಿದೆ. ಹೀಗಾಗಿ, ಯಾತ್ರೆಯು ಕರ್ನಾಟಕದಲ್ಲಿ ಸಂಚರಿಸಿರುವ ಚಿತ್ರಣವನ್ನು ಪುಸ್ತಕದಲ್ಲಿ ದಾಖಲಿಸಲಾಗುವುದು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಚರ್ಚಿಸಿ ನಿರ್ಧರಿಸಲಾಗುವುದು' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೃತಿಯಲ್ಲಿ ಏನೇನಿರಲಿದೆ: 'ಯಾತ್ರೆಯಲ್ಲಿ ಭಾಗವಹಿಸಿದವರ ಅನುಭವ, ಸಂದರ್ಶನ, ರಾಹುಲ್ ಪ್ರತಿ ದಿನ ನಡೆಸಿದ ಭಾಷಣ, ಸಂವಾದ ಕಾರ್ಯಕ್ರಮಗಳ ವರದಿ, ಜನತೆ ತೋರಿದ ಅಭೂತಪೂರ್ವ ಸ್ವಾಗತ, ರಾಹುಲ್ ಗಾಂಧಿ ಅವರಿಗೆ ಆಶೀರ್ವದಿಸಿದ ಹಿರಿಯರ ಆ ಕ್ಷಣಗಳ ಚಿತ್ರಣ, ಪತ್ರಿಕೆಗಳಲ್ಲಿ ಪ್ರಕಟವಾದ ಹೇಳಿಕೆ, ಲೇಖನಗಳು, ಪ್ರಗತಿಪರರೊಂದಿಗಿನ ಮಾತು, ಸೋನಿಯಾ ಭಾಗವಹಿಸಿದ್ದ ಕ್ಷಣ, ಕಾರ್ಯಕರ್ತರಲ್ಲಿ ಹೆಚ್ಚಿದ ಸ್ಫೂರ್ತಿ, ಜನರು ನೀಡಿದ ಗೌರವ– ಸನ್ಮಾನಗಳನ್ನು ಕೃತಿಯಲ್ಲಿ ದಾಖಲಿಸಲಾಗುವುದು' ಎಂದರು.

'ನ.22ರಂದು ರಾಯಚೂರಿನಲ್ಲಿ ಹಾದು ಹೋಗಲಿರುವ ಯಾತ್ರೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಕೂಡ ಭಾಗವಹಿಸಲಿದ್ದಾರೆ. ಆ ಭೇಟಿಯನ್ನೂ ಕೃತಿಯಲ್ಲಿ ದಾಖಲಿಸಲಾಗುವುದು' ಎಂದರು.

UNIVERSITY OF MYSORE

Viswavidyanilaya Karya Soudha, Crawford Hall, Post Box No. 406, Mysore - 570 005

Telephone No. 2419440/2419361 Fax No. 0821-2419363/2419301

email: registrar@uni-mysore.ac.in Web site: www.uni-mysore.ac.in

No.GL-2/219/2015-16 Dated: 19-10-2022

NOTIFICATION

Nominations are invited for the conferment of University of Mysore Bharat Ratna Centenary Awards

1. Bharat Ratna Sri M. Visvesvaraya Centenary Award for Innovation Technology.
2. Bharat Ratna Dr. S. Radhakrishnan Centenary Award for Social Sciences and
3. Bharat Ratna Prof. C.N.R. Rao Centenary Award for Science.

The eligibility criteria for the nomination of the awards and other conditions are notified in the University website **http://uni-mysore.ac.in.**

Nominations have to be sent within 31.10.2022 at 5.00 pm to the Registrar, University of Mysore, Mysuru and email id : **uomcentenaryawards@uni-mysore.ac.in**

Sd/- Registrar
University of Mysore

ಸುರತ್ಕಲ್ ಟೋಲ್ ಗೇಟ್: 28ರಿಂದ ಅನಿರ್ದಿಷ್ಟಾವಧಿ ಧರಣಿ

ಮಂಗಳೂರು: ಸುರತ್ಕಲ್ ಟೋಲ್ ಗೇಟ್ ತೆರವಿಗೆ ಒತ್ತಾಯಿಸಿ ಅ.28 ರಿಂದ ಹಗಲು ರಾತ್ರಿ ಅನಿರ್ದಿಷ್ಟಾವಧಿ ಧರಣಿ ನಡೆಸಲು ಟೋಲ್ ಗೇಟ್ ವಿರೋಧಿ ಹೋರಾಟ ಸಮಿತಿ ನಿರ್ಧರಿಸಿದೆ.

ಸುರತ್ಕಲ್ ಟೋಲ್ ಗೇಟ್ ತೆರವಿಗೆ ಒತ್ತಾಯಿಸಿ ನಡೆಯುತ್ತಿರುವ ಹೋರಾಟವನ್ನು ಟೋಲ್ ಸಂಗ್ರಹ ಸ್ಥಗಿತಗೊಳ್ಳುವವರೆಗೂ ಮುಂದುವರಿಸಲು ಹಾಗೂ ಅ.28 ರಿಂದ ಸುರತ್ಕಲ್ ಟೋಲ್ ಗೇಟ್ ಸಮೀಪ ಅನಿರ್ದಿಷ್ಟ ಕಾಲ ಹಗಲು– ರಾತ್ರಿ ಧರಣಿ ನಡೆಸಲು ಸುರತ್ಕಲ್‌ನಲ್ಲಿ ಬುಧವಾರ ನಡೆದ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರಸಭೆ ಕಾರ್ಯಾಲಯ, ಬೀದರ,

ಸಂಖ್ಯೆ:ಬಿಎಂಸಿ/ಎನ್‌ಜಿ/ಸಿಆರ್–544/2018–19/59/2022–23 ದಿನಾಂಕ:18–10–2022.

ಟೆಂಡರ್ ಪ್ರಕಟಣೆ

1) ಕಾಮಗಾರಿ/ಸರಕು/ಸೇವೆಯ ವಿವರ: DMA/2022-23/OW/WORK_INDENT139882 (FOR SC CONTRACTORS), DMA/2022-23/OW/WORK_INDENT139884 (FOR ST CONTRACTORS), DMA/2022-23/OW/WORK_INDENT139885, DMA/2022-23/OW/WORK_INDENT139886, DMA/2022-23/OW/WORK_INDENT140065, DMA/2022-23/OW/WORK_INDENT139888 (FOR SC CONTRACTORS), DMA/2022-23/OW/WORK_INDENT139889 (FOR ST CONTRACTORS), DMA/2022-23/OW/WORK_INDENT139890, DMA/2022-23/OW/WORK_INDENT139891, 2) ಕಾಮಗಾರಿಯ ಅಂದಾಜು ಮೊತ್ತ: e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portal ನಲ್ಲಿ ನಮೂದಿಸಿದಂತೆ 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು: 07-11-2022 upto 04.00 PM, 6) ಟೆಂಡರ ತೆರೆಯುವ ದಿನಾಂಕ: 08–11–2022 at 04.30 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ: ಪೌರಾಯುಕ್ತರು ನಗರಸಭೆ ಬೀದರ. ಇ–ಮೇಲ್: itstaff_ulb_bidar@yahoo.com, 08482–240432, 8) ಅಂತರಜಾಲ ತಾಣದ ವಿಳಾಸ www.eproc.karnataka.gov.in

ಸಹಿ/– ಪೌರಾಯುಕ್ತರು
ನಗರಸಭೆ ಬೀದರ

ವಾ.ಸಾ.ಸಂ.ಇ/ಬೀದರ/287/ಎಂಸಿ&ಎ/2022–23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–26/12937/2022–23 ದಿನಾಂಕ: 19.10.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಇಪಿಐಪಿ ಕೈಗಾರಿಕಾ ಪ್ರದೇಶದ ಗಂಜಿಮಠ್ 2ನೇ ಹಂತದ ಪ್ಲಾಸ್ಟಿಕ್ ಪಾರ್ಕ್‌ನಲ್ಲಿ ಸಿ.ಐ.ಪಿ.ಇ.ಟಿ, ಆಡಳಿತ ಮತ್ತು ರಫ್ತು ಕಟ್ಟಡ, ಹಾಸ್ಟೆಲ್, ಅತಿಥಿ ಗೃಹ, ವೇರ್‌ಹೌಸ್ ಮತ್ತು ಕೆಫೆಟೇರಿಯ ಕಟ್ಟಡಗಳನ್ನು ನಿರ್ಮಾಣ ಮಾಡುವ ಕಾಮಗಾರಿ (2ನೇ ಕರೆ)

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08.11.2022 ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2, ಕೆಐಎಡಿಬಿ, ಬೆಂಗಳೂರು

DIPR/CP/2678/Zenkar/2022-23

ಟಿಕೆಟ್ ಆಕಾಂಕ್ಷಿಗಳಿಗೆ ಮೈಸೂರಿನಲ್ಲಿ ಜೆಡಿಎಸ್ ಸಮಾಲೋಚನಾ ಕಾರ್ಯಾಗಾರ ಆರಂಭ

'ಪಂಚರತ್ನ'ದೊಂದಿಗೆ ಚುನಾವಣಾ ಕಹಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಂಬರುವ ವಿಧಾನಸಭಾ ಚುನಾವಣೆ ಮತ್ತು ಕೋಲಾರ ಜಿಲ್ಲೆಯ ಮುಳಬಾಗಿಲಿನಿಂದ ನ.1ರಿಂದ ಆರಂಭಗೊಳ್ಳಲಿರುವ 'ಪಂಚರತ್ನ' ರಥಯಾತ್ರೆಗೆ ಸಜ್ಜಾಗುವ ಪ್ರಮುಖ ಕಾರ್ಯಸೂಚಿಯೊಂದಿಗೆ ಜೆಡಿಎಸ್ ಹಮ್ಮಿಕೊಂಡಿರುವ ಎರಡು ದಿನಗಳ ಸಮಾಲೋಚನಾ ಕಾರ್ಯಾಗಾರಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಹೊರವಲಯದ ರೆಸಾರ್ಟ್‌ನಲ್ಲಿ 126 ವಿಧಾನಸಭಾ ಕ್ಷೇತ್ರಗಳ ಸಂಭಾವ್ಯ ಅಭ್ಯರ್ಥಿಗಳು, ಟಿಕೆಟ್ ಆಕಾಂಕ್ಷಿಗಳು, ಶಾಸಕರು, ಮಾಜಿ ಶಾಸಕರು ಮತ್ತು ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಪ್ರಮುಖ ಪದಾಧಿಕಾರಿಗಳು ಭಾಗವಹಿಸಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಕೂಡ ಅ.20ರಂದು ಪಾಲ್ಗೊಳ್ಳಲಿದ್ದಾರೆ. 'ಪಂಚರತ್ನ' ರಥಯಾತ್ರೆ ಅಂತಿಮ ಹಂತದ ಸಿದ್ಧತೆಗಳ ಬಗ್ಗೆ ಚರ್ಚಿಸಿ, ಕಾರ್ಯಕರ್ತರು ಚುನಾವಣೆಗೆ ಸಜ್ಜಾಗುವಂತೆ ಸೂಚಿಸಲಾಯಿತು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, '123 ಸ್ಥಾನಗಳನ್ನು ಗೆಲ್ಲಲೇಬೇಕೆಂಬ ಸವಾಲನ್ನು ಸ್ವೀಕರಿಸಬೇಕು. ಕಾಂಗ್ರೆಸ್ ಹಾಗೂ ಬಿಜೆಪಿಯ ನಡವಳಿಕೆಯಿಂದ ಬೇಸತ್ತಿರುವ ಜನರು ಪರ್ಯಾಯ ಬಯಸಿದ್ದಾರೆ. ಜೆಡಿಎಸ್‌ನತ್ತ ಒಲವು ತೋರಿಸುತ್ತಿದ್ದಾರೆ. ಹೀಗಾಗಿ, ಗುರಿ ಮುಟ್ಟಲು ಬಹಳಷ್ಟು ಅವಕಾಶವಿದೆ' ಎಂದು ತಿಳಿಸಿದರು.

'ನಾವು ನೀಡಿರುವ ಟಾಸ್ಕ್ ಅನ್ನು ಕೆಲವರು ಸಮರ್ಥವಾಗಿ ಅನುಷ್ಠಾನಗೊಳಿಸುತ್ತಿದ್ದೀರಿ. ಕೆಲವು ಕ್ಷೇತ್ರದಲ್ಲಿನ ಕಾರ್ಯ ಸಮಾಧಾನ ತಂದಿಲ್ಲ. ಚುನಾವಣೆ ಘೋಷಣೆಯಾಗಲಿ ನಂತರ ನೋಡೋಣ ಎಂದು ಸುಮ್ಮನಿದ್ದೀರಿ. ಇದು ಸರಿಯಲ್ಲ. ಕುಮಾರಸ್ವಾಮಿಯೇ ಅಭ್ಯರ್ಥಿ ಎಂದು ತಿಳಿಸಿ ಜನರ ಮನಗೆಲ್ಲಬೇಕು' ಎಂದರು.

'ನ.1ರಿಂದ ಆರಂಭಗೊಳ್ಳುವ ಪಂಚರತ್ನ ರಥಯಾತ್ರೆಯು 22 ಜಿಲ್ಲೆಗಳ 106 ವಿಧಾನಸಭಾ ಕ್ಷೇತ್ರಗಳಲ್ಲಿ ಸಂಚರಿಸಲಿದೆ. ನ.1ರಂದು 126 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು' ಎಂದರು.

ಕೈಮುಗಿದ ಎಚ್‌ಡಿಕೆ: 'ಬೇರೆಯವರ ಜೊತೆ ಕೈಜೋಡಿಸುವ ಕಷ್ಟವನ್ನು ತಂದೊಡ್ಡಬೇಡಿ' ಎಂದು ಕೈಮುಗಿದು ಬೇಡಿಕೊಂಡ ಅವರು, '30-40 ಸೀಟು ಗೆದ್ದರೆ ಯಾರಾದರೂ ನೇತೃತ್ವ ವಹಿಸಿ ನೋಡಿಕೊಳ್ಳಲಿ, ನಾನು ದೂರದಲ್ಲಿದ್ದು ಸಲಹೆ ಕೊಡುತ್ತೇನಷ್ಟೆ. ಸುಮ್ಮನೆ ಸ್ಪರ್ಧಿಸಬೇಡಿ. ಗೆಲ್ಲಲೇಬೇಕೆಂದು ಸ್ಪರ್ಧಿಸಿ' ಎಂದು ತಿಳಿಸಿದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, ಮುಖಂಡ ಕುಪೇಂದ್ರ ರೆಡ್ಡಿ ಇದ್ದರು.

ಮೈಸೂರಿನಲ್ಲಿ ಜೆಡಿಎಸ್‌ನಿಂದ ಹಮ್ಮಿಕೊಂಡಿರುವ ಸಮಾಲೋಚನಾ ಕಾರ್ಯಾಗಾರವನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಉದ್ಘಾಟಿಸಿದರು/ ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ನ.1ರಂದ ಪಂಚರತ್ನ ರಥಯಾತ್ರೆಗೆ ಚಾಲನೆ
- ಜೆಡಿಎಸ್ ಸಾಧನೆ ಮುಂದಿಟ್ಟು ಜನರ ಬಳಿಗೆ

1994ರಲ್ಲಿ ದೇವೇಗೌಡರು ಮುಳಬಾಗಿಲಿನಿಂದ ಪ್ರಚಾರ ಆರಂಭಿಸಿ ಯಶಸ್ಸು ಗಳಿಸಿದ್ದರು. ಹೀಗಾಗಿ, ಈ ಬಾರಿ ಅಲ್ಲಿಂದಲೇ ಯಾತ್ರೆಗೆ ಚಾಲನೆ ನೀಡಲಿದ್ದೇವೆ

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಜಿ.ಟಿ. ದೇವೇಗೌಡ ಗೈರು

ಮೈಸೂರು: ಕಾರ್ಯಾಗಾರವು ಚಾಮುಂಡೇಶ್ವರಿ ಕ್ಷೇತ್ರದಲ್ಲೇ ನಡೆದರೂ, ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಗೈರು ಹಾಜರಿ ಎದ್ದು ಕಂಡಿತು.

ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಅವರು ಕಾರ್ಯಾಗಾರದಿಂದಲೂ ದೂರ ಉಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಎಚ್.ಡಿ.ಕುಮಾರಸ್ವಾಮಿ, 'ಮೈಸೂರಿನಲ್ಲಿ ಯಾವುದೇ ಗೊಂದಲ ಇಲ್ಲ. ಶಾಸಕ ಸಾ.ರಾ.ಮಹೇಶ್ ಎಲ್ಲವನ್ನೂ ಬಗೆಹರಿಸಿದ್ದಾರೆ. ಜಿಟಿಡಿ ಅನುಮತಿ ಪಡೆದೇ ಹೋಗಿದ್ದಾರೆ. ಮೈಸೂರಿನಲ್ಲಿ ಆರಂಭಗೊಳ್ಳಲಿರುವ 2ನೇ ಹಂತದ ಪಂಚರತ್ನ ಕಾರ್ಯಕ್ರಮದ ನೇತೃತ್ವ ಅವರೇ ವಹಿಸಲಿದ್ದಾರೆ' ಎಂದು ಅವರು ತಿಳಿಸಿದರು.

ನೇಮಕಾತಿ ಅಕ್ರಮ: 38 ಶಿಕ್ಷಕರ ಬಂಧನ

ಒಂದನೇ ಪುಟದಿಂದ...

'ಬಂಧಿತ ಶಿಕ್ಷಕರು ಅಕ್ರಮವಾಗಿ ನೇಮಕವಾಗಿರುವುದು ತನಿಖೆ ವೇಳೆ ಪತ್ತೆಯಾಗಿತ್ತು. ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ನೋಟಿಸ್ ಜಾರಿ ಮಾಡಿದ್ದರೂ ವಿಚಾರಣೆಗೆ ಬಂದಿರಲಿಲ್ಲ. ಬಂಧನಕ್ಕೆ 30 ತಂಡ ರಚಿಸಲಾಗಿತ್ತು. ಏಕಕಾಲದಲ್ಲಿ 51 ಸ್ಥಳಗಳಲ್ಲಿ ದಾಳಿ ನಡೆಸಿ ಶಿಕ್ಷಕರನ್ನು ಕಸ್ಟಡಿಗೆ ಪಡೆಯಲಾಗಿದೆ. ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗೆ ವಶಕ್ಕೆ ನೀಡುವಂತೆ ಕೋರಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಬಹುತೇಕ ಶಿಕ್ಷಕರು ಶಾಲೆಗೆ ತೆರಳಿದ್ದರು. ಕೆಲವು ಶಿಕ್ಷಕರು ಬೋಧನೆಯಲ್ಲಿ ತೊಡಗಿದ್ದರು. ಆಗಲೇ ಬಂಧಿಸಲಾಗಿದೆ.

ಬಂಧಿತ ಶಿಕ್ಷಕರು

ಕೆಜಿಎಫ್	
ಅಬ್ದುಲ್ ಗಫರ್	ಬಂಗಾರ ತಿರುಪತಿ
ಮುಳುಬಾಗಿಲು	
ಮಲ್ಲಣ್ಣ	ಯಳಗೊಂಡನಹಳ್ಳಿ
ಮಧ್ವಾಚಾರ್ಯ ತಿಕೋಟಿಕರ್	ಬಾಳಸಂದ್ರ
ಅಬ್ದುಲ್ ಕಬೀರ್	ಬಾಳಸಂದ್ರ
ಗಿರೀಶ್ ಡಮ್ಮಹಳ್ಳಿ	ಗುಮ್ಮಾಪುರ
ಬಸವರಾಜ ಶೇಕಪ್ಪ	ವಿರೂಪಾಕ್ಷಿ
ಶ್ರೀನಿವಾಸಪುರ	
ಬಸವರಾಜ ಬಿರಾದಾರ	ಕಲ್ಲೂರು
ಎ.ರೂಪಾ	ಕಲ್ಲೂರು
ಪ್ರಭು ಬಿರಾದಾರ	ಪುಲಗೂರಕೋಟ
ದಿರೇಶ್ ಕೊಮನೂರು	ರಾಯಲ್ಪಾಡ

ರಾಮನಗೌಡ ಗುರಡ್ಡಿ	ಕೂಗೋಪಲ್ಲಿ
ಚಂದ್ರಶೇಖರ್ ಬೆಳ್ಳಿ	ಬೈರಗಾನಹಳ್ಳಿ
ಬಂಗಾರಪೇಟೆ	
ಜಯಶ್ರೀ	ಕಾಮಸಮುದ್ರ
ದುರ್ಗಮ್ಮ	ಬೋದೇನಹಳ್ಳಿ
ಸಿದ್ದನಗೌಡ	ದೋಣಿಮೊಡಗು
ಕುಮಾರ ರಾಥೋಡ್	ದೋಣಿಮೊಡಗು
ಜಯಶ್ರೀ ಹಿರೇಮಠ	ದೊಡ್ಡೂರು
ವೀರೇಶ್	ದೊಡ್ಡೂರು
ಮುತ್ತಣ್ಣ	ಗೊಲ್ಲಹಳ್ಳಿ
ಮಂಜುನಾಥ್ ನಾಸಂಗಿ	ಡಿ.ಪಿ.ಹಳ್ಳಿ
ಶರಣಪ್ಪ ಬಿರಾದಾರ್	ತೊಪ್ಪನಹಳ್ಳಿ
ಟೋಪು ರಾಥೋಡ್	ತೊಪ್ಪನಹಳ್ಳಿ

ಡಯಾಲಿಸಿಸ್: ಇಂದಿನಿಂದ ಸಿಬ್ಬಂದಿ ಮುಷ್ಕರ

ಬೆಂಗಳೂರು: ವೇತನ ಪಾವತಿ ವಿಳಂಬ ಹಾಗೂ ಕಾರ್ಮಿಕರ ಆರೋಗ್ಯ ವಿಮೆ (ಇಎಸ್‌ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿಸದಿರುವುದನ್ನು ವಿರೋಧಿಸಿ ರಾಜ್ಯದಾದ್ಯಂತ ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಗುರುವಾರದಿಂದ ಮುಷ್ಕರ ಹಮ್ಮಿಕೊಂಡಿದ್ದಾರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

'ವಕ್ಫ್ ಆಸ್ತಿ ಕಬಳಿಕೆ ತನಿಖೆ ಶೀಘ್ರ'

ಪ್ರಜಾವಾಣಿ ವಾರ್ತೆ

ಮಹಾಗಾಂವ (ಕಲಬುರಗಿ ಜಿಲ್ಲೆ): 'ವಕ್ಫ್ ಮಂಡಳಿಗೆ ಸೇರಿದ್ದ ಸಾವಿರಾರು ಎಕರೆ ಆಸ್ತಿಯನ್ನು ಕಾಂಗ್ರೆಸ್ ನಾಯಕರು ನುಂಗಿದ್ದು, ಆಸ್ತಿ ಕಬಳಿಕೆ ಆರೋಪ ಕುರಿತು ಅನ್ವರ್ ಮಾಣಿಪ್ಪಾಡಿ ಆಯೋಗ ಸಲ್ಲಿಸಿದ ವರದಿಯಂತೆ ಶೀಘ್ರವೇ ತನಿಖೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಲಬುರಗಿ ಜಿಲ್ಲೆ ಕಮಲಾಪುರ ತಾಲ್ಲೂಕಿನ ಮಹಾಗಾಂವನಲ್ಲಿ ಬುಧವಾರ ನಡೆದ ಜನಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, 'ಬೆಂಗಳೂರು, ಕಲಬುರಗಿ ಸೇರಿ ರಾಜ್ಯದ ಹಲವೆಡೆ ವಕ್ಫ್ ಆಸ್ತಿಯನ್ನು ಕಾಂಗ್ರೆಸ್ ನಾಯಕರು ತಮ್ಮ ಹಾಗೂ ತಮ್ಮ ಸಹೋದರರ ಹೆಸರಿಗೆ ಮಾಡಿಕೊಂಡಿದ್ದಾರೆ. ಕೂಡಲೇ ಈ ಬಗ್ಗೆ ತನಿಖೆ ನಡೆಸಲಾಗುವುದು' ಎಂದರು.

'ಹಿಮಾಚಲ ಪ್ರದೇಶ, ಗುಜರಾತ್‌ನಲ್ಲಿ ಚುನಾವಣೆ ನಡೆಯುತ್ತಿದೆ. ಯುದ್ಧ ಭೂಮಿ ಬಿಟ್ಟು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೇರೆಡೆ ಪಾದಯಾತ್ರೆ ಮಾಡುತ್ತಿದ್ದಾರೆ. ಜನ ಸಂಕಲ್ಪ ಯಾತ್ರೆಯಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಜೆಪಿ ಗಾಳಿ ಬೀಸುತ್ತಿದೆ. 2023ರಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಧೂಳಿಪಟವಾಗಲಿದೆ' ಎಂದರು.

20 ನಿಮಿಷಗಳಲ್ಲಿ ಮುಗಿದ ಕಾರ್ಯಕ್ರಮ: ಮಹಾಗಾಂವನಲ್ಲಿ ಮಧ್ಯಾಹ್ನ ಕಾರ್ಯಕ್ರಮ ಶುರುವಾಗುವುದಕ್ಕೂ ಮುನ್ನವೇ ಗುಡುಗು ಸಹಿತ ಮಳೆ ಶುರುವಾಯಿತು. ಮುಖ್ಯಮಂತ್ರಿ ಅವರ 9 ನಿಮಿಷಗಳ ಭಾಷಣವನ್ನು ಜನರು ಮಳೆಯಲ್ಲೇ ಆಲಿಸಿದರು.

'ಕೆಲಸವಿಲ್ಲದ ಕಾಂಗ್ರೆಸ್‌ನಿಂದ ಪೇಸಿಎಂ, ಸೇಸಿಎಂ ಅಭಿಯಾನ'

ಯಾದಗಿರಿ: 'ಕಾಂಗ್ರೆಸ್‌ನವರಿಗೆ ಮಾಡಲು ಉದ್ಯೋಗ ಇಲ್ಲ. ಅದಕ್ಕೆ ಪೇ ಸಿಎಂ, ಸೇ ಸಿಎಂ ಅಭಿಯಾನ ಮತ್ತಿತರ ಕಾರ್ಯಕ್ರಮ ಮಾಡುತ್ತಾರೆ. ಅವರು ಮಾತನಾಡುತ್ತಾರೆ, ಮಾತನಾಡಲಿ. ನಮಗೆ ಜವಾಬ್ದಾರಿ, ಜನಪರ ಕಾಳಜಿ ಇದೆ. ನಾವು ಮಾತಿಗಿಂತ ಹೆಚ್ಚು ಕೆಲಸ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಯಾದಗಿರಿ ಜಿಲ್ಲೆಯ ಹುಣಸಗಿಯಲ್ಲಿ ಜನಸಂಕಲ್ಪ ಯಾತ್ರೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್‌ನ ಅಧಿಕಾರದ ಅವಧಿಯಲ್ಲಿ ಕೆಕೆಆರ್‌ಡಿಬಿಗೆ ಪೂರ್ಣಪ್ರಮಾಣದಲ್ಲಿ ಹಣ ಸಿಗುತ್ತಿರಲಿಲ್ಲ. ನರೇಗಾ ಹಣ ಲೂಟಿ ಮಾಡಿ ಈ ಯೋಜನೆಯಡಿ ಪ್ರಶಸ್ತಿ ಪಡೆಯಲು ಹೋಗಿದ್ದರು. ಕಾಂಗ್ರೆಸ್‌ನವರು ಚಾದರ, ನೆಲ ನೀರಾವರಿ ಹೆಸರಲ್ಲಿ ದುಡ್ಡು ಹೊಡೆದರು. ಅವರಿಗೆ ನಾಚಿಕೆ ಆಗುವುದಿಲ್ಲವೇ' ಎಂದರು.

ಹಿಂಬದಿ ಸವಾರರಿಗೂ ಸೀಟ್ ಬೆಲ್ಟ್ ಕಡ್ಡಾಯ

ಬೆಂಗಳೂರು: ಕಾರು ಮತ್ತು ಜೀಪ್‌ಗಳಲ್ಲಿ ಪ್ರಯಾಣಿಸುವ ಹಿಂಬದಿ ಸವಾರರೂ ಇನ್ನು ಮುಂದೆ ಸೀಟ್ ಬೆಲ್ಟ್ ಧರಿಸಬೇಕು. ಇಲ್ಲದಿದ್ದರೆ ₹1 ಸಾವಿರ ದಂಡ ಬೀಳಲಿದೆ!

ಈ ಸಂಬಂಧ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಸುತ್ತೋಲೆ ಹೊರಡಿಸಿದ್ದು, ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ರಾಜ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಎಲ್ಲಾ ವಲಯ ಪೊಲೀಸ್ ಮಹಾ ನಿರ್ದೇಶಕರು ಮತ್ತು ಬೆಂಗಳೂರು ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

ಎಂ–1 ವಾಹನ ಎಂದರೆ ಚಾಲಕ ಹೊರತುಪಡಿಸಿ ಎಂಟು ಮತ್ತು ಅದಕ್ಕಿಂತ ಕಡಿಮೆ ಸೀಟುಗಳನ್ನು ಹೊಂದಿರುವ ವಾಹನಗಳಲ್ಲಿ ಮುಮ್ಮುಖವಾಗಿ ಇರುವ ಎಲ್ಲಾ ಸೀಟುಗಳಲ್ಲಿ ಪ್ರಯಾಣಿಕರು ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ. ಈ ನಿಯಮ ಕಡ್ಡಾಯವಾಗಿ ಪಾಲನೆ ಆಗುವಂತೆ ನೋಡಿಕೊಳ್ಳಬೇಕು ಎಂದೂ ಕೇಂದ್ರ ಸರ್ಕಾರ ಸುತ್ತೋಲೆಯಲ್ಲಿ ತಿಳಿಸಿದೆ. ಹಿಂಬದಿಯ ಸೀಟುಗಳಿಗೆ ಕವರ್‌ಗಳನ್ನು ಅಳವಡಿಸುವಾಗ ಸೀಟ್ ಬೆಲ್ಟ್ ಲಾಕ್ ಮಾಡುವ ಮತ್ತು ಅನ್‌ಲಾಕ್ ಮಾಡುವ ಬಕಲ್‌ಗಳನ್ನು ಮುಚ್ಚದಂತೆ ನೋಡಿಕೊಳ್ಳಬೇಕು ಎಂದೂ ಸುತ್ತೋಲೆ ಹೇಳಿದೆ.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

'ಪ್ರಜಾಸತ್ತಾತ್ಮಕ ಪ್ರತೀಕ'

ಆಗ ನಾನಿನ್ನೂ ವಿದ್ಯಾರ್ಥಿ. ನಮ್ಮೂರಿನ ಬರಗೂರಿನ ಬಸ್‌ಸ್ಟ್ಯಾಂಡ್ ಬಳಿ ಕಾದು 'ಪ್ರಜಾವಾಣಿ'ಯನ್ನು ಪಡೆದು ಮೊದಲು ನಾನು ಓದಿ ಅನಂತರ ಸ್ನೇಹಿತನಿಗೆ ಮುಟ್ಟಿಸುತ್ತಿದ್ದೆ. ಹೀಗೆ ಆರಂಭವಾದ ನನ್ನ ಮತ್ತು 'ಪ್ರಜಾವಾಣಿ'ಯ 'ಓದು ಸಂಬಂಧ' ಅನಂತರದ ವರ್ಷಗಳಲ್ಲಿ 'ಬರಹ ಸಂಬಂಧ'ವಾಯಿತು. 'ಜಾಲಿಯ ಮರ' ಎಂಬ ನನ್ನ ಕತೆಯೊಂದು 'ಪ್ರಜಾವಾಣಿ'ಯ 'ಸಾಪ್ತಾಹಿಕ ಪುರವಣಿ'ಯಲ್ಲಿ ಪ್ರಕಟವಾಯಿತು. ಇದು ಪ್ರಜಾವಾಣಿಯಲ್ಲಿ ಪ್ರಕಟವಾದ ಮೊದಲ ಕತೆ. ಅಂದಿನಿಂದ ಕಡೇ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ನನ್ನದೊಂದು ಕತೆಯು 'ಸಾಪ್ತಾಹಿಕ ಪುರವಣಿ'ಯಲ್ಲಿ ಪ್ರಕಟವಾಗುತ್ತಿತ್ತು. ನಾನು 1974ರಿಂದ 1978ರವರೆಗೆ 'ಪ್ರಜಾವಾಣಿ'ಯಲ್ಲಿ ಪುಸ್ತಕ ವಿಮರ್ಶೆ ಬರೆದೆ.

ಮುಂದೊಮ್ಮೆ ಬೆಂಗಳೂರು ವಿ.ವಿ.ಯ ಅಧ್ಯಾಪಕ ಹುದ್ದೆಯ ಸಂದರ್ಶನದಲ್ಲಿ 'ಪ್ರಜಾವಾಣಿ'ಯ ನನ್ನ ಪುಸ್ತಕ ವಿಮರ್ಶೆಯ ವಿಷಯವೇ ಕೇಂದ್ರವಾಗಿತ್ತು. ಅನಂತರದ ವರ್ಷಗಳಲ್ಲಿ ನಾನು 'ಸಾಪ್ತಾಹಿಕ ಪುರವಣಿ'ಯಲ್ಲಿ 'ಪರಂಪರೆಯೊಂದಿಗೆ ಪಿಸುಮಾತು' ಎಂಬ ಸಾಹಿತ್ಯ ಕೇಂದ್ರಿತ, 'ಸಂವೇದನೆ' ಹೆಸರಿನ ಅಂಕಣಗಳನ್ನು ಬರೆದೆ. ನನ್ನ ಮತ್ತು 'ಪ್ರಜಾವಾಣಿ'ಯ ಸಂಬಂಧ ಇಂದಿಗೂ ಮುಂದುವರಿಯುತ್ತಿದೆ. 'ಪ್ರಜಾವಾಣಿ'ಯು ನಿಜವಾದ ಪ್ರಜಾಪ್ರಭುತ್ವವಾದಿ ಪತ್ರಿಕೆ. 75ನೇ ವರ್ಷ ತಲುಪಿದ 'ಪ್ರಜಾವಾಣಿ'ಗೆ ಮನದಾಳದ ಶುಭಾಶಯಗಳು.

ಬರಗೂರು ರಾಮಚಂದ್ರಪ್ಪ, ಸಾಹಿತಿ

ಪ್ರಜಾವಾಣಿ ದಿನನಿತ್ಯ ಬದುಕಿನ ಪಠ್ಯಪುಸ್ತಕ

ಪ್ರಜಾವಾಣಿ ಆಪ್ತವಾಗಿದ್ದು ಅದಕ್ಕೆ ಹೊಸ ಚಂದಾದಾರರನ್ನಾಗಿ ಮಾಡಲು ಹುಣಸೂರಿನ ಮೂಲೆ ಮೂಲೆಗೂ ಬೆಳಗ್ಗೆ 5.45ರಿಂದಲೇ ಸೈಕಲ್ ತುಳಿದು ಪ್ರಚಾರ ಮಾಡಿ ಫೀಜಿಗಿಷ್ಟು ಹಣಪಡೆದಾಗ.! 250ರಿಂದ 300ರಷ್ಟು ಹೊಸ ಚಂದಾದಾರನ್ನು ಸೃಷ್ಟಿಸಿದ್ದು ಖುಷಿಯೆನಿಸಿತ್ತು..

ಇನ್ನು ನಾನು ಸ್ನಾತಕೋತ್ತರ ಪದವಿ, ಅದರ ನಂತರ ಸರ್ಕಾರಿ ನೌಕರಿ ಪಡೆದಾಗಲೂ ನನ್ನ ಬಗಲಲ್ಲಿ-ಬ್ಯಾಗಲ್ಲಿ ಪ್ರಜಾವಾಣಿ ಕಾಯಂ! ಕನ್ನಡ ಸಾಹಿತ್ಯವನ್ನ ಅವರಿಸಿಕೊಂಡಿರುವ ಪತ್ರಿಕೆಯಿದು.

ಈ ಅಂತರ್ಜಾಲದ ವ್ಯೂಹದೊಳಗೆ ನಗುವ ನಿತ್ಯ-ನೂತನ ಪತ್ರಿಕೆ. ಕ್ಷೇಮ-ಕುಶಲದಿಂದ ಕರ್ನಾಟಕ ದರ್ಶನಮಾಡಿ ಸಿನಿಮಾ ಪುಟದಿಂದ ಮನರಂಜಿಸಿ ಸಾಪ್ತಾಹಿಕ ಪುರವಣಿಯಲ್ಲಿ ಪ್ರಪಂಚವನ್ನೇ ತೋರಿಸುವ ಪತ್ರಿಕೆ. ನೀವು ಅರಗಿಸಿಕೊಂಡ ಹಾಗೆ ಅರಿಯುವ ಪತ್ರಿಕೆ.

ವೀವೆಂಶ್ರೀ, ಓದುಗ, ಮೈಸೂರು

'ಪ್ರಜಾವಾಣಿ ಓದದಿದ್ದರೆ ದಿನ ಅಪೂರ್ಣ'



ವಸ್ತುನಿಷ್ಠತೆ, ಬದ್ಧತೆ ಮತ್ತು ವಿಶ್ವಾಸಕ್ಕೆ ಹೆಸರಾದ ಪತ್ರಿಕೆ ಇದಾಗಿದ್ದು, ರಾಜಕೀಯವಾಗಿ ತಟಸ್ಥ ಧೋರಣೆ ಹೊಂದಿದೆ. ಈವರೆಗೂ ಯಾವುದೇ ಘಟನೆಯನ್ನು ವೈಭವೀಕರಿಸಿಲ್ಲ. ಈ ಮೂಲಕ ಪತ್ರಿಕೋದ್ಯಮ ಧರ್ಮವನ್ನು ಎತ್ತಿ ಹಿಡಿಯುತ್ತಿದೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಸಂವಾದಗಳ ಮೂಲಕ ಜವಾಬ್ದಾರಿ, ಕಳಕಳಿ ಮೆರೆಯುತ್ತಿದೆ. ನಾನು 1971ರಂದು ಧಾರವಾಡದಿಂದ ಬೆಂಗಳೂರಿಗೆ ಸ್ಥಳಾಂತರಗೊಂಡೆ. ಅಂದಿನಿಂದ ಒಂದು ದಿನವೂ ಬಿಡದೆ ಈ ಪತ್ರಿಕೆಯನ್ನು ಓದುತ್ತಿದ್ದೇನೆ. ಪತ್ರಿಕೆಯಲ್ಲಿನ ಸಂಪಾದಕೀಯವನ್ನು ಅಣ್ಣ ಓದಿ ಹೇಳುತ್ತಿದ್ದರು. 'ಪ್ರಜಾವಾಣಿ' ಜೀವನದ ಅಂಗವಾಗಿದೆ. ಈ ಪತ್ರಿಕೆಯನ್ನು ಓದದಿದ್ದರೆ ದಿನ ಅಪೂರ್ಣ ಅನಿಸುತ್ತದೆ. ಪತ್ರಿಕೆಯು ಅಮೃತ ಮಹೋತ್ಸವ ಸಂಭ್ರಮದಲ್ಲಿರುವುದು ಕನ್ನಡಿಗರು ಹೆಮ್ಮೆ ಪಡುವ ಸಂಗತಿ.

ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ವಿಶ್ವಾಸಾರ್ಹ ಬ್ರ್ಯಾಂಡ್



'ಪ್ರಜಾವಾಣಿ' ಎಂದರೆ ಕೇವಲ ಯಾಂತ್ರಿಕವಾದ ಒಂದು ಪತ್ರಿಕೆಯಲ್ಲ, ನಿಜವಾದ ಅರ್ಥದಲ್ಲಿ ಒಂದು ವಿಶ್ವಾಸಾರ್ಹ ಬ್ರ್ಯಾಂಡ್. ಇದು ಈ ಸಂದರ್ಭಕ್ಕೆ ನಾನು ವ್ಯಕ್ತಪಡಿಸುತ್ತಿರುವ ಮೆಚ್ಚುಗೆಯಲ್ಲ. ಅದಕ್ಕಿಂತ ಮಿಗಿಲಾದ ಅನುಭವ!

ಪ್ರಜಾವಾಣಿ ಪತ್ರಿಕಾ ಬಳಗಕ್ಕೆ ಮೌಲ್ಯಾಧಾರಿತ ಅಸ್ತಿಭಾರ ಹಾಕಿದ ಕೀರ್ತಿಯು ಗುರುಸ್ವಾಮಿಗಳು ಮತ್ತು ನೆಟ್ಟಕಲ್ಲಪ್ಪ ಅವರಿಗೆ ಸಲ್ಲಬೇಕು. ಪತ್ರಿಕಾ ಧರ್ಮವನ್ನು ಅದು ಪ್ರತಿಪಾದಿಸುವ ಎಲ್ಲ ಮೌಲ್ಯಗಳೊಂದಿಗೆ ಪರಿಪಾಲಿಸಿಕೊಂಡು ಬಂದಿರುವುದು ಈ ಬಳಗದ ಹೆಗ್ಗಳಿಕೆ. ಇದಲ್ಲದೆ ಕನ್ನಡ ನಾಡಿನ ಜನಮಾನಸದಲ್ಲಿ ವೈಚಾರಿಕ ಜಾಗೃತಿ, ಸಾಹಿತ್ಯಪ್ರೀತಿ, ಸಾಮಾಜಿಕ ಕಳಕಳಿ, ವೈಜ್ಞಾನಿಕ ಮನೋಭಾವ, ಸಮರಸ, ವಿಶ್ಲೇಷಣೆಯ ಪ್ರಜ್ಞೆ ಬೇರೂರುವಂತೆ ಮಾಡಿರುವುದು ಮೌಲಿಕ ಕೊಡುಗೆಗಳಾಗಿವೆ. ಈ ಮೂಲಕ ಪತ್ರಿಕೆಯು ಜ್ಞಾನಾಧಾರಿತ ಸಮಾಜವನ್ನು ಕಟ್ಟಲು ನೀಡಿರುವ ಯೋಗದಾನ ಅನುಪಮ. 'ಪ್ರಜಾವಾಣಿ' ಮತ್ತು ಇದರ ಸೋದರ ಪತ್ರಿಕೆಗಳು ಹೀಗೆಯೇ ಉನ್ನತ ಪರಂಪರೆಯನ್ನು ಎತ್ತಿ ಹಿಡಿದು, ಉತ್ತರೋತ್ತರ ಯಶಸ್ಸನ್ನು ಕಾಣಲಿ ಎಂದು ಮನಸಾ ಹಾರೈಸುತ್ತೇನೆ.

ಡಾ ಸಿ.ಎನ್. ಅಶ್ವತ್ಥ ನಾರಾಯಣ, ಉನ್ನತ ಶಿಕ್ಷಣ ಮತ್ತು ಐಟಿ-ಬಿಟಿ ಸಚಿವ

ಪ್ರಜಾವಾಣಿ ರಾಜ್ಯದ ಅಸ್ಮಿತೆ



75 ವರ್ಷಗಳಿಂದ ನೊಂದವರ, ಬಡವರ ಪರವಾಗಿ ವರದಿಗಳನ್ನು ಬರೆದು ಸಾಮಾಜಿಕ ಜವಾಬ್ದಾರಿ ಮೆರೆದ 'ಪ್ರಜಾವಾಣಿ' ಕಾರ್ಯಕ್ಕೆ ಅಭಿನಂದನೆಗಳು. ರಾಜ್ಯದ ಅನೇಕ ಏಳುಬೀಳುಗಳಿಗೆ ಏಳೂವರೆ ದಶಕಗಳಿಂದ ಸಾಕ್ಷಿಯಂತಿರುವ ಪತ್ರಿಕೆ ರಾಜ್ಯದ ಅಸ್ಮಿತೆಯೂ ಹೌದು. ಪತ್ರಿಕೆ ಅನೇಕರ ಬದುಕಿಗೆ ಬೆಳಕು ನೀಡಿದೆ. ಸೌಹಾರ್ದ ಬೆಳೆಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ನಾಡಿನ ಸಾಕ್ಷಿ ಪ್ರಜ್ಞೆಯಂತಿರುವ, ಜನಪರ ಮತ್ತು ಪ್ರಜೆಗಳ ವಾಣಿ ಆಗಿರುವ 'ಪ್ರಜಾವಾಣಿ' ಹೆಜ್ಜೆಗಳು ನೂರ್ಮಡಿಯಾಗಲಿ. ಮತ್ತಷ್ಟು ಸಮಾಜಮುಖಿ ಕೆಲಸಗಳನ್ನು ಮುಂದುವರಿಸಲಿ.

ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಗವಿಮಠ ಕೊಪ್ಪಳ

ದೇಶಿಯ ಸಲಕರಣೆಗಳ ಖರೀದಿ ಆತ್ಮನಿರ್ಭರ ಭಾರತಕ್ಕೆ ಸಾಕ್ಷಿ: ಮೋದಿ

ಗಾಂಧಿನಗರ (ಪಿಟಿಐ): 'ಭಾರತೀಯ ರಕ್ಷಣಾ ಪಡೆಗಳು ದೇಶಿಯವಾಗಿ ಅಭಿವೃದ್ಧಿಪಡಿಸಿದ ರಕ್ಷಣಾ ಸಲಕರಣೆಗಳನ್ನೇ ಹೆಚ್ಚಾಗಿ ಖರೀದಿಸಲು ತೀರ್ಮಾನಿಸಿವೆ. ಇದು 'ಆತ್ಮನಿರ್ಭರ ಭಾರತ'ದ ಸಾಮರ್ಥ್ಯಕ್ಕೆ ಸಾಕ್ಷಿ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಡಿಫೆನ್ಸ್ ಎಕ್ಸ್‌ಪೋ–2022 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ರಕ್ಷಣಾ ವಲಯದಲ್ಲಿ ಕೆಲ ಕಂಪನಿಗಳ ಏಕಸ್ವಾಮ್ಯದ ಹೊರತಾಗಿಯೂ ಭಾರತವು ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಸ್ಥಾನ ಹೊಂದಿದೆ. ನಮ್ಮ ಆತ್ಮವಿಶ್ವಾಸ ಇಮ್ಮಡಿಗೊಳ್ಳುತ್ತಿರುವುದಕ್ಕೆ ಇದು ನಿದರ್ಶನ' ಎಂದಿದ್ದಾರೆ.

'2021–22ರಲ್ಲಿ ಭಾರತದ ರಕ್ಷಣಾ ಸಲಕರಣೆಗಳ ರಫ್ತು ಸಾಮರ್ಥ್ಯ ₹13 ಸಾವಿರ ಕೋಟಿಗೆ ತಲುಪಿದೆ. ಇದನ್ನು ₹40 ಸಾವಿರ ಕೋಟಿಗೆ ಹೆಚ್ಚಿಸುವ ಗುರಿ ಹೊಂದಿದ್ದೇವೆ' ಎಂದು ಹೇಳಿದ್ದಾರೆ.

'ಕರಾವಳಿ ಭದ್ರತೆಯು ಈಗ ಜಾಗತಿಕ ಆದ್ಯತೆಯಾಗಿ ಹೊರಹೊಮ್ಮಿದೆ. ಬಾಹ್ಯಾಕಾಶ ವಲಯದಲ್ಲಿನ ಭವಿಷ್ಯದ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ನಾವು ಹೆಚ್ಚಿನ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಜಾಗತೀಕರಣದ ಕಾಲಘಟ್ಟದಲ್ಲಿ ವಾಣಿಜ್ಯ ಉದ್ದೇಶದ ನೌಕಾಯಾನದ ಪಾತ್ರವೂ ಮಹತ್ವದ್ದಾಗಿದೆ' ಎಂದಿದ್ದಾರೆ.

ಭಾರತ ಮತ್ತು ಆಫ್ರಿಕಾ ನಡುವಣ ಬಾಂಧವ್ಯದ ಕುರಿತು ಮಾತನಾಡಿದ ಮೋದಿ, 'ನಂಬಿಕೆಯ ನೆಲೆಗಟ್ಟಿನಲ್ಲಿದ್ದ ಈ ಬಾಂಧವ್ಯವು ಮತ್ತಷ್ಟು ಆಳಕ್ಕೆ ವಿಸ್ತರಿಸುತ್ತಾ ಸಾಗಿದ್ದು, ಕಾಲಕ್ಕೆ ಅನುಗುಣವಾಗಿ ಹೊಸ ಆಯಾಮಗಳೆಡೆ ಹೊರಳುತ್ತಿದೆ' ಎಂದಿದ್ದಾರೆ.

'ಭಾರತದಲ್ಲಿ ತಯಾರಿಸಿರುವ ರಕ್ಷಣಾ ಸಲಕರಣೆಗಳ ರಫ್ತು ಪ್ರಮಾಣವು, ಹಿಂದಿನ ಕೆಲ ವರ್ಷಗಳಲ್ಲಿ ಒಟ್ಟು 8 ಪಟ್ಟು ಏರಿಕೆಯಾಗಿದೆ. ಹೀಗಾಗಿ ಇಡೀ ಜಗತ್ತು ಭಾರತದ ತಂತ್ರಜ್ಞಾನದ ಮೇಲೆ ನಂಬಿಕೆ ಇಟ್ಟಿದೆ. ನಾವು 75ಕ್ಕೂ ಹೆಚ್ಚು ರಾಷ್ಟ್ರಗಳಿಗೆ ರಕ್ಷಣಾ ಸಲಕರಣೆಗಳನ್ನು ರಫ್ತು ಮಾಡುತ್ತಿದ್ದೇವೆ. ನಮ್ಮ ನೀತಿಗಳು ಹಾಗೂ ಸುಧಾರಣೆಗಳು ಇದಕ್ಕೆ ಬಹುಮುಖ್ಯ ಕಾರಣ' ಎಂದಿದ್ದಾರೆ.

'ಭಾರತವು ತನ್ನ ರಕ್ಷಣಾ ಆಯವ್ಯಯದ ಶೇ 68ರಷ್ಟು ಮೊತ್ತವನ್ನು ದೇಶಿಯ ಕಂಪನಿಗಳಿಗಾಗಿ ಮೀಸಲಿಟ್ಟಿದೆ. ನಮ್ಮ ರಕ್ಷಣಾ ಪಡೆಗಳು ಹೊಸ ಆವಿಷ್ಕಾರದ ಅವಕಾಶಗಳನ್ನು ಕಂಡುಕೊಳ್ಳಬೇಕಿದೆ. ಸುಮಾರು 60 ಪ್ರಗತಿಶೀಲ ರಾಷ್ಟ್ರಗಳೊಂದಿಗೆ ದೇಶವು ತನ್ನ ಬಾಹ್ಯಾಕಾಶ ವಿಜ್ಞಾನವನ್ನು ಹಂಚಿಕೊಳ್ಳುತ್ತಿದೆ' ಎಂದು ತಿಳಿಸಿದರು.

ಭಾರತ–ಪಾಕ್ ಗಡಿ ಬಳಿ ವಾಯುನೆಲೆ ಸ್ಥಾಪನೆಗೆ ಅಡಿಗಲ್ಲು: ಭಾರತ, ಪಾಕಿಸ್ತಾನ ಗಡಿ ಹತ್ತಿರದ ಗುಜರಾತ್‌ನ ಬನಸ್‌ಕಾಂಟಾ ಜಿಲ್ಲೆಯ ಡೀಸಾ ಪ್ರದೇಶದಲ್ಲಿ ವಾಯುನೆಲೆ ಸ್ಥಾಪಿಸುವ ಯೋಜನೆಗೆ ಮೋದಿ ಬುಧವಾರ ಚಾಲನೆ ನೀಡಿದ್ದಾರೆ.

ಪ್ರಧಾನಿ ಮೋದಿ ಅವರು ರಕ್ಷಣಾ ಸಲಕರಣೆಗಳನ್ನು ವೀಕ್ಷಿಸಿದರು–ಪಿಟಿಐ ಚಿತ್ರ

'ಮಿಷನ್ ಸ್ಕೂಲ್ಸ್ ಆಫ್ ಎಕ್ಸಲೆನ್ಸ್ ಇನಿಶಿಯೇಟಿವ್' ಮಿಷನ್‌ಗೆ ಚಾಲನೆ

5ಜಿ ಟೆಲಿಕಾಂ ಸೇವೆಯು ದೇಶದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಲಿದೆ. ಹಾಗೆಯೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ದೇಶವನ್ನು ಇಂಗ್ಲಿಷ್ ಗುಲಾಮಗಿರಿಯ ಮನಸ್ಥಿತಿಯಿಂದ ಹೊರತರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ಬುಧವಾರ ಗಾಂಧಿನಗರ ಜಿಲ್ಲೆಯ ಅಡಾಲಜ್ ಪಟ್ಟಣದಲ್ಲಿ 'ಮಿಷನ್ ಸ್ಕೂಲ್ಸ್ ಆಫ್ ಎಕ್ಸಲೆನ್ಸ್ ಇನಿಶಿಯೇಟಿವ್' ಮಿಷನ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ದೆಹಲಿ: ಪಟಾಕಿ ಸಿಡಿಸಿದರೆ 6 ತಿಂಗಳು ಜೈಲು

ನವದೆಹಲಿ (ಪಿಟಿಐ) : ರಾಷ್ಟ್ರ ರಾಜಧಾನಿಯಲ್ಲಿ ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿಸುವುದನ್ನು ದೆಹಲಿ ಸರ್ಕಾರ ನಿಷೇಧಿಸಿದೆ.

'ದೆಹಲಿಯಲ್ಲಿ ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿದರೆ, ₹ 200 ದಂಡ ಹಾಗೂ 6 ತಿಂಗಳ ವರೆಗೆ ಜೈಲು ಶಿಕ್ಷೆ ವಿಧಿಸಲಾಗುವುದು' ಎಂದು ಪರಿಸರ ಸಚಿವ ಗೋಪಾಲ್ ರಾಯ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ದೆಹಲಿಯಲ್ಲಿ ಪಟಾಕಿಗಳ ಉತ್ಪಾದನೆ, ಸಂಗ್ರಹ ಹಾಗೂ ಮಾರಾಟ ಮಾಡಿದವರಿಗೆ ಸ್ಫೋಟಕಗಳ ಕಾಯ್ದೆಯನ್ವಯ ಮೂರು ವರ್ಷಗಳ ಜೈಲು ಶಿಕ್ಷೆ ಹಾಗೂ ₹ 5 ಸಾವಿರ ವರೆಗೆ ದಂಡ ವಿಧಿಸಲು ಅವಕಾಶ ಇದೆ' ಎಂದರು.

'ದಿಯೆ ಜಲಾವ್ರೋ, ಪಟಾಖೆ ನಹಿ' (ದೀಪಗಳನ್ನು ಬೆಳಗಿಸಿ, ಪಟಾಕಿಗಳನ್ನಲ್ಲ) ಎಂಬ ಧ್ಯೇಯವಾಕ್ಯದೊಂದಿಗೆ ಜನಜಾಗೃತಿ ಕಾರ್ಯಕ್ರಮಕ್ಕೆ ಅ. 21ರಂದು ಚಾಲನೆ ನೀಡಲಾಗುವುದು' ಎಂದರು. 'ಪಟಾಕಿ ಮೇಲಿನ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಸಂಬಂಧ 408 ತಂಡಗಳನ್ನು ರಚಿಸಲಾಗಿದೆ. ಎಂದರು.

ಅಕ್ಟೋಬರ್ 16ಕ್ಕೆ ಅಂತ್ಯಗೊಂಡ ಅವಧಿಯಲ್ಲಿ, ಸ್ಫೋಟಕಗಳ ಕಾಯ್ದೆ ಉಲ್ಲಂಘನೆಗೆ ಸಂಬಂಧಿಸಿ 188 ಪ್ರಕರಣಗಳನ್ನು ದಾಖಲಿಸಲಾಗಿದ್ದು, 2,917 ಕೆ.ಜಿಯಷ್ಟು ಪಟಾಕಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

'ಎಲ್ಲ ಜನರ ಹಕ್ಕು ರಕ್ಷಣೆ: ಭಾರತದ ಜವಾಬ್ದಾರಿ'

ಮುಂಬೈ (ಪಿಟಿಐ): 'ದೇಶದ ಎಲ್ಲರನ್ನು ಒಳಗೊಳ್ಳುವ ತೀವ್ರ ಬದ್ಧತೆ ಮತ್ತು ಎಲ್ಲ ಜನರ ಮಾನವ ಹಕ್ಕುಗಳ ಕುರಿತು ಗೌರವ ತೋರಿಸಿದರೆ ಮಾತ್ರ ಭಾರತದ ಧ್ವನಿಯು ವಿಶ್ವಮಟ್ಟದಲ್ಲಿ ಅಧಿಕಾರಯುತವಾಗಿಯೂ ವಿಶ್ವಾಸಾರ್ಹವಾಗಿಯೂ ಧ್ವನಿಸುತ್ತದೆ' ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಬುಧವಾರ ಅಭಿಪ್ರಾಯಪಟ್ಟರು.

'ಮಾನವ ಹಕ್ಕುಗಳ ಮಂಡಳಿಯ ಚುನಾಯಿತ ಸದಸ್ಯ ರಾಷ್ಟ್ರವಾಗಿ, ಭಾರತಕ್ಕೆ ಅಲ್ಪಸಂಖ್ಯಾತ ಸೇರಿದಂತೆ ಎಲ್ಲ ಜನರ ಹಕ್ಕನ್ನು ರಕ್ಷಿಸುವ ಜವಾಬ್ದಾರಿ ಇದೆ' ಎಂದೂ ಹೇಳಿದರು.

3 ದಿನಗಳ ಭಾರತದ ಭೇಟಿಯಲ್ಲಿರುವ ಅವರು, ಬುಧವಾರ 'ಇಂಡಿಯಾ@75: ಯುಎನ್–ಇಂಡಿಯಾ ಪಾರ್ಟ್‌ನರ್‌ಶಿಪ್: ಸ್ಟ್ರೆಂಥನಿಂಗ್ ಸೌತ್–ಸೌತ್ ಕೋ–ಆಪರೇಷನ್' ಕುರಿತು ಬಾಂಬೆಯ ಐಐಟಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

'ಭಾರತದ ಬಹುತ್ವದ ಮಾದರಿಯು ಸರಳವಾದ ಆದರೆ ಅತ್ಯಂತ ದೃಢವಾದ ಗ್ರಹಿಕೆಯನ್ನು ಆಧರಿಸಿದೆ. ಅತ್ಯಂತ ಶ್ರೀಮಂತವಾದ ವೈವಿಧ್ಯವು ನಿಮ್ಮ ದೇಶವನ್ನು ಗಟ್ಟಿಗೊಳಿಸಿದೆ. ಈ ಗ್ರಹಿಕೆಯು ಪ್ರತಿ ಭಾರತೀಯ ಜನ್ಮಜಾತ ಹಕ್ಕು. ಆದರೆ, ಅದು ಖಾತರಿ ಅಲ್ಲ. ಆದರೆ, ಅದನ್ನು ಪ್ರತಿ ದಿನವೂ ಪೋಷಿಕಬೇಕು, ಬಲಪಡಿಸಬೇಕು ಮತ್ತು ನವೀಕರಿಸಬೇಕು' ಎಂದರು.

'ಇಲ್ಲಿಯವರೆಗೂ ಬಹುತ್ವ ಭಾರತವನ್ನು ಜಗತ್ತು ಗೌರವಿಸುತ್ತಾ ಬಂದಿದೆ. ಎಲ್ಲರನ್ನೂ ಒಳಗೊಳ್ಳುವ, ಬಹುತ್ವದ, ವೈವಿಧ್ಯ ಸಮುದಾಯಗಳನ್ನು ಒಳಗೊಳ್ಳುವ ಕಾರ್ಯಕ್ಕೆ ಕೈಜೋಡಿಸಿ ಎಂದು ಭಾರತದ ಜನರನ್ನು ಆಗ್ರಹಿಸುತ್ತೇನೆ' ಎಂದರು.

ನೀಟ್, ಸಿಇಟಿ ಅವ್ಯವಸ್ಥೆ ಅಭ್ಯರ್ಥಿಗಳ ಪರದಾಟ

ಒಂದನೇ ಪುಟದಿಂದ...

ಶುಲ್ಕ ಪಾವತಿಸಿದರೂ, ಆನ್‌ಲೈನ್‌ನಲ್ಲಿ ಪಾವತಿಯ ವಿವರಗಳು ಲಭ್ಯವಾಗುತ್ತಿಲ್ಲ. ಅದರ ಮುದ್ರಣ ಪ್ರತಿ ಪಡೆಯಲು ಸಾಧ್ಯವಾಗಲಿಲ್ಲ. ಈ ಕುರಿತು ಕೆಇಎ ಸಹಾಯವಾಣಿಗೆ ನಿರಂತರ ಕರೆ ಮಾಡಿದರೂ ಪ್ರಯೋಜನವಾಗಲಿಲ್ಲ' ಎಂದು ಅಭ್ಯರ್ಥಿ ವಿನಯ್ ಆಕ್ರೋಶ ವ್ಯಕ್ತಪಡಿಸಿದರು.

'ನೋಂದಣಿಗೆ ಹಲವು ಬಾರಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹಾಗಾಗಿ, ಮೊಮ್ಮಗಳನ್ನು ಕರೆದುಕೊಂಡು ಕೆಇಎ ಕಚೇರಿಗೆ ಬಂದಿದ್ದೇವೆ. ಬೆಳಿಗ್ಗೆಯಿಂದ ಕಾಯುತ್ತಿದ್ದೇವೆ. ಅಖಿಲ ಭಾರತ ಮಟ್ಟದಲ್ಲಿ ಉತ್ತಮ ರ‍್ಯಾಂಕ್ ಇದ್ದರೂ, ಕೆಇಎನಲ್ಲಿ ನೋಂದಣಿ ಮಾಡಿಕೊಳ್ಳದಿದ್ದರೆ ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ಲಭಿಸುವುದಿಲ್ಲ. ಕಷ್ಟಪಟ್ಟು ಓದಿದ ಮಕ್ಕಳಿಗೆ ಅನ್ಯಾಯವಾಗುತ್ತದೆ' ಎಂದು ಮೈಸೂರಿನ ಸುಧಾ ಆತಂಕ ತೋಡಿಕೊಂಡರು.

> **ಸರ್ವರ್ ಸಮಸ್ಯೆ ಇರುವುದು ನಿಜ. ಅದಕ್ಕಾಗಿ ನೋಂದಣಿ ಅವಧಿ ವಿಸ್ತರಿಸಲಾಗಿದೆ. ಉಳಿದಂತೆ ಅಭ್ಯರ್ಥಿಗಳು ಕೆಇಎ ಮಾರ್ಗಸೂಚಿ ಅನುಸರಿಸಿ, ಅರ್ಜಿ ಭರ್ತಿ ಮಾಡಬೇಕು.**
> **ಎಸ್. ರಮ್ಯಾ,** ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ.

'ಆನ್‌ಲೈನ್‌ನಲ್ಲಿ ಹೆಸರು ನೋಂದಣಿಗೆ ಸರಿಯಾದ ಪಾಸ್‌ವರ್ಡ್ ಹಾಕಿದರೂ, ತಪ್ಪು ಎಂದು ಉತ್ತರ ಬರುತ್ತಿದೆ. ಪಾಸ್‌ವರ್ಡ್ ಬದಲಿಸಿದರೂ ಪ್ರಯೋಜನವಾಗಿಲ್ಲ. ಮೊಬೈಲ್‌ನಿಂದ ಅಪ್‌ಲೋಡ್ ಸಾಧ್ಯವಾಗುತ್ತಿಲ್ಲ. ಹೆಸರು ತಾಳೆಯಾಗುತ್ತಿಲ್ಲ ಎಂದು ಬರುತ್ತಿದೆ. ಲಾಗಿನ್ ಐ.ಡಿಯೇ ಸರಿ ಇಲ್ಲ ಎಂದು ತೋರಿಸುತ್ತದೆ' ಎಂದು ಕಲಬುರಗಿಯ ಸಾತ್ವಿಕ್, ಬೆಂಗಳೂರಿನ ಅರುಣ್, ನಾಗಮಂಗಲದ ಚರಣ್ ಸೇರಿದಂತೆ ಹಲವು ವಿದ್ಯಾರ್ಥಿಗಳು ತರಹೇವಾರಿ ಸಮಸ್ಯೆಗಳನ್ನು ತೆರೆದಿಟ್ಟರು.

ಅಂಕಿ–ಅಂಶಗಳು

9,500 ನೋಂದಾಯಿಸಿದ ಸಿಇಟಿ ಅಭ್ಯರ್ಥಿಗಳು

6,400 ನೋಂದಣಿ ಮಾಡಿಕೊಂಡ ನೀಟ್ ಅಭ್ಯರ್ಥಿಗಳು

ನೀಟ್ ನೋಂದಣಿ ಅವಧಿ ವಿಸ್ತರಣೆ: ಸರ್ವರ್‌ಗಳು ಡೌನ್ ಆಗಿ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾದ ಕಾರಣ ಯುಜಿ–ನೀಟ್–2022ರ ಅಭ್ಯರ್ಥಿಗಳ ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಸಲ್ಲಿಕೆ ಅವಧಿಯನ್ನು ಕೆಇಎ ವಿಸ್ತರಿಸಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಹಾಗೂ ಶುಲ್ಕ ಪಾವತಿಸಲು ಅ.23ರವರೆಗೆ, ಅರ್ಜಿ ಸಲ್ಲಿಕೆಗೆ ಅ.25ರ ಮಧ್ಯಾಹ್ನ 12ರವರೆಗೆ ಅವಕಾಶ ನೀಡಲಾಗಿದೆ.

'ಯಾವುದೇ ತನಿಖೆಗೆ ಸಿದ್ಧ'

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜೆ. ಜಯಲಲಿತಾ ಸಾವಿನ ಕುರಿತು ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ. ಆರ್ಮುಗಸ್ವಾಮಿ ನೇತೃತ್ವದ ಏಕ ಸದಸ್ಯ ಆಯೋಗ ಸಲ್ಲಿಸಿರುವ ವರದಿಯಲ್ಲಿರುವ ತಮ್ಮ ಮೇಲಿನ ಗುರುತರ ಆರೋಪಗಳನ್ನು ಜಯಲಲಿತಾ ಆಪ್ತೆ ವಿ.ಕೆ. ಶಶಿಕಲಾ ಅಲ್ಲಗಳೆದಿದ್ದಾರೆ. 'ಇದರಲ್ಲಿ ಯಾವುದೇ ರೀತಿಯ ತನಿಖೆ ಎದುರಿಸಲು ಸಿದ್ಧ' ಎಂದು ಅವರು ಹೇಳಿದ್ದಾರೆ.

ವಿ.ಕೆ. ಶಶಿಕಲಾ

ವಿಧಾನಸಭೆಯಲ್ಲಿ ಮಂಗಳವಾರ ಸಲ್ಲಿಸಿರುವ ಆಯೋಗದ ವರದಿಯಲ್ಲಿ ವಿ.ಕೆ. ಶಶಿಕಲಾ ಮತ್ತು ಜಯಲಲಿತಾ ಸಾಯುವಾಗ ಆರೋಗ್ಯ ಸಚಿವರಾಗಿದ್ದ ಸಿ. ವಿಜಯಭಾಸ್ಕರ್, ವೈದ್ಯ ಕೆ.ಎಸ್. ಶಿವಕುಮಾರ್ (ಇವರು ಶಶಿಕಲಾ ಸಂಬಂಧಿ), ಆರೋಗ್ಯ ಕಾರ್ಯದರ್ಶಿಯಾಗಿದ್ದ ಜೆ.ರಾಧಾಕೃಷ್ಣನ್ ಅವರ ಪಾತ್ರದ ಕುರಿತೂ ತನಿಖೆ ಆಗಬೇಕೆಂದು ಹೇಳಿದೆ.

ಈ ಬಗ್ಗೆ ಕಾನೂನು ಅಭಿಪ್ರಾಯ ಪಡೆದು, ಕ್ರಮ ಕೈಗೊಳ್ಳುವ ನಿರ್ಧಾರವನ್ನು ಡಿಎಂಕೆ ಸರ್ಕಾರ ಪ್ರಕಟಿಸಿದ ನಂತರ ಶಶಿಕಲಾ ಅವರು 'ಅಮ್ಮನ (ಜಯಲಲಿತಾ) ಸಾವಿನಲ್ಲಿ ಯಾವುದೇ ರಹಸ್ಯವಿಲ್ಲ. ಅಮ್ಮನ ಸಾವನ್ನು ರಾಜಕೀಯಗೊಳಿಸಲಾಗುತ್ತಿದೆ. ಇಂತಹ ನಿರ್ಲಜ್ಜ ರಾಜಕಾರಣವನ್ನು ಜನರು ಒಪ್ಪಲಾರರು. ಊಹಾಪೋಹಾದ ವರದಿಯನ್ನೂ ಜನ ನಂಬುವುದಿಲ್ಲ' ಎಂದು ಹೇಳಿಕೆ ನೀಡಿದ್ದಾರೆ.

'ಜಯಲಲಿತಾ ಅವರ ಚಿಕಿತ್ಸೆಯ ಎಲ್ಲ ನಿರ್ಧಾರಗಳನ್ನು ಅಪೊಲೊ ಆಸ್ಪತ್ರೆ ವೈದ್ಯರು ಏಮ್ಸ್ ವೈದ್ಯರೊಂದಿಗೆ ಸಮಾಲೋಚಿಸಿಯೇ ತೆಗೆದುಕೊಂಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಸರ್ಕಾರಿ ವೈದ್ಯರ ಸಲಹೆ ಪಡೆಯದ ಅಪೊಲೊ ವೈದ್ಯರು: ಜಯಲಲಿತಾ ಅವರಿಗೆ 2016ರಲ್ಲಿ ಚಿಕಿತ್ಸೆ ನೀಡಿದ್ದ ಅಪೊಲೊ ಆಸ್ಪತ್ರೆಯ ವೈದ್ಯರು, ತಮಗೆ ಸಲಹೆ ಕೊಡಲು ನೇಮಿಸಿದ್ದ ಸರ್ಕಾರಿ ತಜ್ಞ ವೈದ್ಯರನ್ನು ವಿಶ್ವಾಸಕ್ಕೇ ತೆಗೆದುಕೊಂಡಿರಲಿಲ್ಲ. ಇದನ್ನು ವೈದ್ಯರ ತಂಡವೇ ಸ್ಪಷ್ಟಪಡಿಸಿರುವ ಅಂಶವೂ ಆಯೋಗದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪಿಎಸ್‌ಐ ನೇಮಕ ಅಕ್ರಮ; ಬಿಎಸ್‌ಎಫ್ ಅಧಿಕಾರಿ ಬಂಧನ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಸೇವೆಗಳ ಆಯ್ಕೆ ಮಂಡಳಿ (ಜೆಕೆಎಸ್‌ಎಸ್‌ಬಿ) ನಡೆಸಿದ ಸಬ್ ಇನ್‌ಸ್ಪೆಕ್ಟರ್ ನೇಮಕಾತಿಯಲ್ಲಿ ಆಗಿರುವ ಅಕ್ರಮಕ್ಕೆ ಸಂಬಂಧಿಸಿ ಗಡಿ ಭದ್ರತಾ ಪಡೆಯ (ವೈದ್ಯಾಧಿಕಾರಿ) ಕಮಾಂಡೆಂಟ್ ಕರ್ನಲ್ ಸಿಂಗ್ ಎಂಬುವವರನ್ನು ಸಿಬಿಐ ಬುಧವಾರ ಬಂಧಿಸಿದೆ.

ಪಿಎಸ್‌ಐ ಪರೀಕ್ಷೆಯಲ್ಲಿ ತಮ್ಮ ಪುತ್ರನಿಗೆ ಮುಂಚಿತವಾಗಿಯೇ ಪ್ರಶ್ನೆ–ಪತ್ರಿಕೆ ಸೋರಿಕೆ ಮಾಡಿಸಿದ ಆರೋಪ ಅವರ ಮೇಲೆ ಇತ್ತು. ಜಮ್ಮು–ಕಾಶ್ಮೀರದ ಅಖ್ನೂರ್‌ನಲ್ಲಿರುವ ಕೋಚಿಂಗ್ ಸೆಂಟರ್ ಮಾಲೀಕ ಅವಿನಾಶ್ ಗುಪ್ತಾ ಮತ್ತು ಪ್ರಶ್ನೆ ಪತ್ರಿಕೆ ಮುದ್ರಣದ ಹೊಣೆ ಹೊತ್ತಿದ್ದ ಬೆಂಗಳೂರು ಮೂಲದ ಕಂಪನಿಯನ್ನು ಸಿಬಿಐ ಎಫ್‌ಐಆರ್‌ನಲ್ಲಿ ಆರೋಪಿಗಳ ಪಟ್ಟಿಯಲ್ಲಿ ಹೆಸರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸಿಂಗ್ ಅವರನ್ನು ಮಂಗಳವಾರ ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸಿ ಜಮ್ಮುವಿನ ಸಿಬಿಐ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಪ್ರಶ್ನೆ ಪತ್ರಿಕೆಯನ್ನು ಪರೀಕ್ಷೆಗೆ ಕೆಲವೇ ಗಂಟೆಗಳು ಬಾಕಿ ಇರುವಾಗ ಇತರ ಕೆಲ ಅಭ್ಯರ್ಥಿಗಳಿಗೆ ಮಾರಾಟ ಮಾಡಿ, ₹20ರಿಂದ ₹30 ಲಕ್ಷದವರೆಗೆ ಹಣ ಗಳಿಸಿದ್ದರು' ಎಂದು ಸಿಬಿಐ ವಕ್ತಾರರು ಹೇಳಿದ್ದಾರೆ.

'ಮತಾಂತರ, ಒಳನುಸುಳುವಿಕೆಯಿಂದ ಜನಸಂಖ್ಯಾ ಅಸಮತೋಲನ'

ಪ್ರಯಾಗರಾಜ್ (ಪಿಟಿಐ): 'ಧಾರ್ಮಿಕ ಮತಾಂತರ ಹಾಗೂ ಬಾಂಗ್ಲಾದೇಶದ ವಲಸಿಗರಿಂದಾಗಿಯೇ ದೇಶದಲ್ಲಿ ಜನಸಂಖ್ಯಾ ಅಸಮತೋಲನ ಸೃಷ್ಟಿಯಾಗಿದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ದೂರಿದ್ದಾರೆ.

ದತ್ತಾತ್ರೇಯ ಹೊಸಬಾಳೆ

ಇಲ್ಲಿ ಮುಕ್ತಾಯಗೊಂಡ ನಾಲ್ಕು ದಿನಗಳ ಆರ್‌ಎಸ್‌ಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಬಳಿಕ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಸಂಘವು ಮತಾಂತರದ ಕುರಿತು ಜನರಲ್ಲಿ ಅರಿವು ಮೂಡಿಸಲಿದೆ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತರಲು ಪ್ರಯತ್ನಿಸಲಿದೆ' ಎಂದು ಹೇಳಿದ್ದಾರೆ.

'ಮತಾಂತರ ತಡೆಗಟ್ಟುವ ಉದ್ದೇಶದಿಂದ ಜಾರಿಗೊಳಿಸಲಾಗಿರುವ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಿದೆ. ಬಲವಂತವಾಗಿ ಹಾಗೂ ಆಮಿಷ ಒಡ್ಡಿ ಮತಾಂತರ ಮಾಡುವುದಕ್ಕೆ ಕಾಯ್ದೆಯ ಮೂಲಕ ಕಡಿವಾಣ ಹಾಕುವ ಕೆಲಸವನ್ನು ಉತ್ತರಪ್ರದೇಶ ಸೇರಿದಂತೆ ಕೆಲ ರಾಜ್ಯಗಳು ಮಾಡಿವೆ' ಎಂದಿದ್ದಾರೆ. 'ಒಳನುಸುಳುವಿಕೆ ಅಥವಾ ವಲಸೆ ಕೂಡ ಜನಸಂಖ್ಯಾ ಅಸಮತೋಲನಕ್ಕೆ ಕಾರಣವಾಗಿದೆ. ಉತ್ತರ ಬಿಹಾರದ ಪುರ್ನಿಯಾ ಮತ್ತು ಕತಿಹಾರ್ ಹಾಗೂ ಇತರ ರಾಜ್ಯಗಳಲ್ಲಿ ಇದನ್ನು ಕಾಣಬಹುದಾಗಿದೆ. ಮತಾಂತರಗೊಂಡವರನ್ನು ಮೀಸಲಾತಿಯಿಂದ ಹೊರಗಿಡಬೇಕಿದೆ' ಎಂದು ತಿಳಿಸಿದ್ದಾರೆ.

'ಮಹಿಳೆಯರು ಎಲ್ಲಾ ವಲಯಗಳಿಗೂ ಕಾಲಿಡುತ್ತಿದ್ದಾರೆ. ಸಾಮಾಜಿಕ ಕಾರ್ಯಗಳಲ್ಲಿ ಹಿಂದೂ ಧರ್ಮದ ಮಹಿಳೆಯರ ಭಾಗವಹಿಸುವಿಕೆ ಹಾಗೂ ತೀರ್ಮಾನ ಕೈಗೊಳ್ಳುವಿಕೆಯನ್ನು ಉತ್ತೇಜಿಸುವ ಕುರಿತು ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಚರ್ಚಿಸಲಾಗಿದೆ' ಎಂದಿದ್ದಾರೆ.

ಮತಾಂತರವಾಗುವ ಹಿಂದೂಗಳ ಮೀಸಲಾತಿ ರದ್ದುಪಡಿಸಿ: ವಿಎಚ್‌ಪಿ

ಜೈಪುರ(ಪಿಟಿಐ): ಕ್ರೈಸ್ತ ಧರ್ಮಕ್ಕೆ ಮತಾಂತರವಾಗುವ ಹಿಂದೂಗಳ ಮೀಸಲಾತಿ ಸೌಲಭ್ಯವನ್ನು ಹಿಂಪಡೆಯಬೇಕೆಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಬುಧವಾರ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದೆ.

'ಕ್ರೈಸ್ತ ಧರ್ಮಕ್ಕೆ ಮತಾಂತರವಾದ ಬಳಿಕವೂ ಕೆಲವರು ಇನ್ನೂ ಹಿಂದೂ ಹೆಸರು ಮತ್ತು ರುಜುವಾತುಗಳನ್ನು ದಾಖಲೆಗಳಲ್ಲಿ ಬಳಸಿ, ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ನೀಡಲಾದ ಮೀಸಲಾತಿಯ ಲಾಭವನ್ನು ಪಡೆಯುತ್ತಿದ್ದಾರೆ' ಎಂದು ವಿಎಚ್‌ಪಿಯ ರಾಷ್ಟ್ರೀಯ ವಕ್ತಾರ ವಿಜಯ್ ಶಂಕರ್ ತಿವಾರಿ ಅವರು ಆರೋಪಿಸಿದ್ದಾರೆ.

'ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಸೇರಿದ ಹಾಗೂ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವವರಿಗೆ ಮೀಸಲಾತಿ ಸೌಲಭ್ಯ ದೊರೆಯದಂತೆ ಸಮೀಕ್ಷೆ ನಡೆಸಿ ಕೇಂದ್ರ ಸರ್ಕಾರವು ಯೋಜನೆ ರೂಪಿಸಬೇಕು' ಎಂದಿದ್ದಾರೆ.

ಗುಪ್ತಾಂಗಕ್ಕೆ ಕಬ್ಬಿಣದ ರಾಡ್ ತುರುಕಿದ ಆರೋಪಿಗಳು: ಮಹಿಳಾ ಆಯೋಗ ಆರೋಪ

ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ನವದೆಹಲಿ/ಗಾಜಿಯಾಬಾದ್ (ಪಿಟಿಐ): ಐವರು ಸೇರಿ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ನಡೆದಿದೆ. 'ಆಸ್ತಿ ವೈಷಮ್ಯದ ಕಾರಣಕ್ಕಾಗಿ ಅತ್ಯಾಚಾರ ನಡೆದಿದೆ. ಐವರಲ್ಲಿ ನಾಲ್ಕು ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಬುಧವಾರ ಹೇಳಿದರು.

ಎರಡು ದಿನಗಳ ಕಾಲ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿ, ನಂತರ ಆಕೆಯ ಕೈ–ಕಾಲುಗಳನ್ನು ಕಟ್ಟಿ ರಸ್ತೆಯಲ್ಲಿ ಎಸೆಯಲಾಗಿತ್ತು. ಅವರನ್ನು ದೆಹಲಿಯ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ದೆಹಲಿ ನಿವಾಸಿಯಾಗಿರುವ 37 ವರ್ಷದ ಮಹಿಳೆಯು, ತನ್ನ ಸಹೋದರನ ಹುಟ್ಟುಹಬ್ಬ ಆಚರಣೆಗಾಗಿ ಭಾನುವಾರ ಗಾಜಿಯಬಾದ್‌ಗೆ ತೆರಳಿದ್ದರು. ಆಚರಣೆ ಮುಗಿದ ಬಳಿಕ, ತಡರಾತ್ರಿ ವೇಳೆಗೆ ಸಹೋದರ ಆಕೆಯನ್ನು ಆಟೊ ನಿಲ್ದಾಣದ ಬಳಿ ಬಿಟ್ಟು ತೆರಳಿದರು. ಆ ಸ್ಥಳಕ್ಕೆ ಎಸ್‌ಯುವಿನಲ್ಲಿ ಬಂದ ಆಕೆಗೆ ಪರಿಚಯ ಇರುವ ಕೆಲವರು ಆಕೆಯನ್ನು ಅಪಹರಿಸಿ, ಅತ್ಯಾಚಾರ ಎಸಗಿದ್ದಾರೆ' ಎಂದರು.

> **ಘಟನೆಯು ಭಯಾನಕ ಮತ್ತು ಆಘಾತಕಾರಿಯಾಗಿದೆ. ಈ ಘಟನೆಯು ದೆಹಲಿಯಲ್ಲಿ ನಡೆದಿದ್ದ ನಿರ್ಭಯಾ ಅತ್ಯಾಚಾರವನ್ನು ನೆನಪಿಸುತ್ತದೆ**
> **ಸ್ವಾತಿ ಮಾಲೀವಾಲ್,** ದೆಹಲಿ ಮಹಿಳಾ ಆಯೋಗದ ಮುಖ್ಯಸ್ಥೆ

ಪೊಲೀಸರಿಗೆ ನೋಟಿಸ್: 'ಮಹಿಳೆಯ ಕೈ–ಕಾಲುಗಳನ್ನು ಕಟ್ಟಿ, ಆಕೆಯ ಗುಪ್ತಾಂಗಕ್ಕೆ ಕಬ್ಬಿಣದ ರಾಡನ್ನು ತುರುಕಿ, ಆಕೆಯನ್ನು ಗೋಣಿಚೀಲದಲ್ಲಿ ಸುತ್ತಿದ ಸ್ಥಿತಿಯಲ್ಲಿ ಮಹಿಳೆ ಪತ್ತೆಯಾಗಿದ್ದಾರೆ' ಎಂದು ದೆಹಲಿ ಮಹಿಳಾ ಆಯೋಗ ಆರೋಪಿಸಿದೆ. ಘಟನೆಯನ್ನು ಆಯೋಗ ಖಂಡಿಸಿದೆ. ಈ ಸಂಬಂಧ ಗಾಜಿಯಬಾದ್ ಪೊಲೀಸರಿಗೆ ಆಯೋಗದ ಮುಖ್ಯಸ್ಥೆ ಸ್ವಾತಿ ಮಾಲೀವಾಲ್ ನೋಟಿಸ್ ನೀಡಿದ್ದಾರೆ.

'ಮಹಿಳೆಯನ್ನು ದೆಹಲಿಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಆಕೆಯ ಸ್ಥಿತಿ ಗಂಭೀರವಾಗಿದೆ' ಎಂದು ದೆಹಲಿ ಮಹಿಳಾ ಆಯೋಗ ಹೇಳಿದೆ. ಆದರೆ, 'ಮಂಗಳವಾರ ಬೆಳಿಗ್ಗೆ ಮಹಿಳೆಯನ್ನು ಆಸ್ಪತ್ರೆಗೆ ಕರೆತರಲಾಗಿತ್ತು. ಮಹಿಳೆ ಸ್ಥಿತಿ ಸ್ಥಿರವಾಗಿದೆ. ಆಕೆಗೆ ಯಾವುದೇ ರೀತಿ ಆಂತರಿಕ ಗಾಯಗಳಾಗಿರುವುದು ಕಂಡುಬಂದಿಲ್ಲ' ಎಂದು ಗುರು ತೇಜ್ ಬಹದ್ದೂರ್ ಆಸ್ಪತ್ರೆಯ ವಕ್ತಾರ ಡಾ. ರಜತ್ ಜಾಂಬಾ ತಿಳಿಸಿದ್ದಾರೆ.

ನಾಲ್ಕೂವರೆ ವರ್ಷದ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ

ಹೈದರಾಬಾದ್ (ಪಿಟಿಐ): ಇಲ್ಲಿನ ಬಂಜಾರ ಹಿಲ್ಸ್‌ನಲ್ಲಿರುವ ಶಾಲೆಯಲ್ಲಿ ಪ್ರಾಂಶುಪಾಲರ ಕಾರು ಚಾಲಕನಿಂದಲೇ ನಾಲ್ಕೂವರೆ ವರ್ಷದ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಪ್ರಕರಣ ಸಂಬಂಧ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಘಟನೆ ಸಂಬಂಧ ಮಗುವಿನ ತಾಯಿ ದೂರು ದಾಖಲಿಸಿದ್ದಾರೆ. ಕಳೆದ ಐದು ತಿಂಗಳಿನಿಂದ ಶಾಲೆಗೆ ತೆರಳುತ್ತಿರುವ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ. ಇತ್ತೀಚೆಗೆ ಮಗಳು ಕಾಲು ನೋವು ಎಂದು ಹೇಳುತ್ತಿದ್ದಳು. ಈ ಬಗ್ಗೆ ಪರಿಶೀಲಿಸಿದಾಗ ಶಾಲೆಯಲ್ಲಿ ಕೆಲಸ ಮಾಡುವ ವ್ಯಕ್ತಿ ಶಾಲೆಯ ಕೋಣೆಯೊಂದಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ನಡೆಸಿದ್ದಾಗಿ ಹೇಳಿದ್ದಾಳೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪರಿಶೀಲಿಸಲು ಪೋಷಕರು ಶಾಲೆಗೆ ತೆರಳಿದಾಗ ಮಗು ಆರೋಪಿಯನ್ನು ಗುರುತಿಸಿದೆ. ಆರೋಪಿಯು ಶಾಲೆಯ ಪ್ರಾಂಶುಪಾಲರ ಕಾರು ಚಾಲಕ ಎಂದು ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹16000-20000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹150.50
ಆರ್‌ಎಸ್‌ಎಸ್-5 ₹142

ಷೇರುಪೇಟೆ ವಹಿವಾಟು 147



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,487
ಇಂದಿನ ಅಂತ್ಯ	17,512
▲	25
ದಿನದ ಗರಿಷ್ಠ	17,607

ವಿನಿಮಯ ದರ

$ ಡಾಲರ್	83
£ ಪೌಂಡ್	93.64
€ ಯುರೊ	81.48
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1640)
ಸೋಯಾ (ರಿಫೈನ್ಡ್)	₹1315 (1300)
ಸೂರ್ಯಕಾಂತಿ (ರಿಫೈನ್ಡ್)	₹1530 (1530)
ಪಾಮೋಲಿನ್	₹977 (957)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಬಿ. ವಿ. ಕಮಲಮ್ಮ
(ಶ್ರೀ ಲೇ. ಸಾರಕ್ಕಿ ಜಿ. ಜಯರಾಮರೆಡ್ಡಿರವರ ಧರ್ಮಪತ್ನಿ)
ಜನನ: 02-12-1952 – ನಿಧನ: 08-10-2022
ಇವರು ದಿನಾಂಕ 08-10-2022 ನೇ ಶನಿವಾರ ಬೆಳಿಗ್ಗೆ 04:30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ 20-10-2022ನೇ ಗುರುವಾರ ಬೆಳಿಗ್ಗೆ 08:00 ಗಂಟೆಗೆ ಪುಣ್ಯಾಹ ಮತ್ತು 12:00ಕ್ಕೆ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಬಯಸುವ:
ಇಂತಿ ದುಃಖತಪ್ತರು: ಮೃತರ ಮಕ್ಕಳು, ಮೊಮ್ಮಕ್ಕಳು ಹಾಗೂ ಸಾರಕ್ಕಿ ಕುಟುಂಬದವರು.

2ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಸದಾಶಿವಣ್ಣ ಎಂ.ಎ.ಕೆ.ಎಂ.ಎಸ್.
ನಿವೃತ್ತಿ ಹೆಚ್ಚುವರಿ ನಿರ್ದೇಶಕರು, ಎ.ಪಿ.ಎಂ.ಸಿ
27-10-1955 – 19-10-2020
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ.
ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಸದಾ ನೆನಪಿನಲ್ಲಿರುವ ಪತ್ನಿ ಶ್ರೀಮತಿ ಸುಂದರಮ್ಮ, ಕುಟುಂಬ ವರ್ಗದವರು, ಬಂಧುಗಳು ಹಾಗೂ ಮಿತ್ರರು

LOOKING FOR JOB OPPORTUNITY
Refer Classifieds on Wednesday

ನಿಮ್ಮ ಪ್ರೀತಿಯ ಸ್ಮರಣೆಯಲ್ಲಿ

ನಮ್ಮ ನಿಮ್ಮೆಲ್ಲರ ನೆಚ್ಚಿನ
ಶ್ರೀ ಹೆಚ್. ಎಮ್. ಆನಂದ ರೆಡ್ಡಿ ಯವರು
— 19-06-1951 - 08-10-2022 —
ತಮ್ಮ ಜೀವನದ ಅದ್ಭುತ ಪಯಣ ಮುಗಿಸಿ ನಮ್ಮೆಲ್ಲರಿಂದ ದೂರವಾಗಿದ್ದಾರೆ. ತಾವೆಲ್ಲರೂ ಅವರ
ವೈಕುಂಟ ಸಮಾರಾಧನೆಗೆ
ಬಂದು ಅವರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ನಿಮ್ಮಲ್ಲಿ ಕೇಳಿಕೊಳ್ಳುತ್ತೇವೆ.
ದಿನಾಂಕ 20-10-2022ನೇ ಗುರುವಾರ ಬೆಳಿಗ್ಗೆ 9 ರಿಂದ ಮದ್ಯಾಹ್ನ 12ರ ವರೆಗೆ
ಹೆಚ್.ಎಮ್.ಆರ್ ನಿಲಯ, ನಂ.39, ಹೆಚ್.ಎಮ್.ಆರ್ ಲೇಔಟ್, 1ನೇ ಅಡ್ಡರಸ್ತೆ, ಗೋಕುಲ, ಮತ್ತಿಕೆರೆ, ಬೆಂಗಳೂರು-560054
ಭೋಜನ : ಮದ್ಯಾಹ್ನ 12:30 ಕ್ಕೆ
ಇಂತಿ ದುಃಖತಪ್ತರು : ಶ್ರೀಮತಿ ಲಕ್ಷ್ಮಿ ಆನಂದ ರೆಡ್ಡಿ & ಮಕ್ಕಳು ಹಾಗೂ ಕುಟುಂಬದವರು

ವೈಕುಂಠ ಸಮಾರಾಧನೆ

ಜನನ : 17-11-1934
ಮರಣ : 12-10-2022
ಶ್ರೀ ಬಿ.ಆರ್. ಸಿ. ಗೌಡರು, B.Sc. (Agri)
(ನಿವೃತ್ತ ಉಪನಿರ್ದೇಶಕರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ)
ನಮ್ಮ ಪೂಜ್ಯ ತಂದೆಯವರು ದಿನಾಂಕ: 12-10-2022ರಂದು ದೈವಾದೀನರಾದ ಪ್ರಯುಕ್ತ ಅವರ ವೈಕುಂಠ ಸಮಾರಾಧನೆಯನ್ನು ದಿನಾಂಕ: 22-10-2022ನೇ ಶನಿವಾರ ಬೆಳಗ್ಗೆ 11-00ಕ್ಕೆ ನಮ್ಮ ಸ್ವಗೃಹ ಬಿದನೆಗೆರೆ, ಕುಣಿಗಲ್ ಟೌನ್ ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು
ಪ್ರೊ. ಬಿ.ಸಿ. ಲೋಕೇಶ್ ಮತ್ತು ಡಾ. ಬಿ.ಸಿ. ಜಗದೀಶ್, ಡಾ. ಬಿ. ರಮೇಶ್ ಹಾಗೂ ಕುಟುಂಬ ವರ್ಗದವರು
ಶ್ರೇಯಸ್ : (9972899999)

ಧನ್‌ತೇರಸ್ ಮಾರಾಟ ಶೇ 10ರಷ್ಟು ಏರಿಕೆ ನಿರೀಕ್ಷೆ

ಚಿನ್ನಾಭರಣ ಮಾರಾಟ ಶೇ 30 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಹಬ್ಬದ ಋತುವಿನಲ್ಲಿ ಚಿನ್ನಾಭರಣಗಳಿಗೆ ಉತ್ತಮ ಬೇಡಿಕೆ ಬಂದಿದೆ. ಕೋವಿಡ್‌ಗೂ ಮೊದಲಿನ ಸಂದರ್ಭಕ್ಕೆ ಹೋಲಿಸಿದರೆ, ಈ ವರ್ಷದ ದೀಪಾವಳಿ ಪೂರ್ವದ ಚಿನ್ನಾಭರಣ ಮತ್ತು ಚಿನ್ನ ಮಾರಾಟವು ಶೇಕಡ 30ಕ್ಕೂ ಹೆಚ್ಚು ಏರಿಕೆ ಕಂಡಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ನಿರ್ದೇಶಕ ಎನ್. ವಿದ್ಯಾಸಾಗರ್ ತಿಳಿಸಿದರು.

2019ರ ಧನ್‌ತೇರಸ್‌ನಲ್ಲಿ ಆಗಿದ್ದ ಮಾರಾಟದ ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿಯ ಮಾರಾಟದಲ್ಲಿ ಶೇ 10ರಷ್ಟು ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು. ಇದೇ 23ರಂದು ಧನ್‌ತೇರಸ್ ನಡೆಯಲಿದೆ.

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಕಳೆದ ಎರಡು ವರ್ಷ ಜನರು ಖರೀದಿಯಿಂದ ತುಸು ದೂರ ಉಳಿದಿದ್ದರು. ಈಗ ಪರಿಸ್ಥಿತಿ ಸುಧಾರಿಸಿದೆ. ಜನರು ಚಿನ್ನಾಭರಣ ಖರೀದಿ ಮತ್ತು ಚಿನ್ನದ ಮೇಲೆ ಹೂಡಿಕೆ ಮಾಡಲು ಆಸಕ್ತಿ ತೋರಿಸುತ್ತಿದ್ದಾರೆ ಎಂದು ಅವರು ಹೇಳಿದರು.

‘ಧನ್‌ತೇರಸ್ ಅನ್ನು ಚಿನ್ನಾಭರಣಗಳ ಖರೀದಿಗೆ ಶುಭ ದಿನವೆಂದು ಪರಿಗಣಿಸಲಾಗುತ್ತಿದೆ. ಈ ಬಾರಿಯ ಧನ್‌ತೇರಸ್‌ನಲ್ಲಿ ಚಿನ್ನಾಭರಣ ಖರೀದಿ ಹೆಚ್ಚಾಗುವ ನಿರೀಕ್ಷೆ ಇದೆ’ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಮಾಜಿ ಅಧ್ಯಕ್ಷ ವೆಂಕಟೇಶ ಬಾಬು ತಿಳಿಸಿದರು.

‘ಚಿನ್ನದ ಮೇಲಿನ ಕಸ್ಟಮ್ಸ್ ಸುಂಕ ಶೇ 2.5ರಷ್ಟು ಹೆಚ್ಚಾಗಿದೆ. ಅಲ್ಲದೆ, ಡಾಲರ್ ಮೌಲ್ಯ ವೃದ್ಧಿಯಾಗುತ್ತಿದೆ. ಹೀಗಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿದಿದ್ದರೂ ದೇಶದಲ್ಲಿ ದರ ಕಡಿಮೆ ಆಗುತ್ತಿಲ್ಲ’ ಎಂದು ಅವರು ಮಾಹಿತಿ ನೀಡಿದರು.

‘ಮುಂಬರುವ ದಿನಗಳಲ್ಲಿ ಚಿನ್ನದ ದರ ಇಳಿಕೆ ಕಂಡಲ್ಲಿ ಬೇಡಿಕೆ ಇನ್ನಷ್ಟು ಹೆಚ್ಚಾಗಬಹುದು’ ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಭಾರತದ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸೋಮಸುಂದರಂ ಪಿ.ಆರ್. ಅಭಿಪ್ರಾಯಪಟ್ಟಿದ್ದಾರೆ.

‘ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇರುವುದರ ಜೊತೆಗೆ ಅಕಾಲಿಕ ಮಳೆಯು ಕೃಷಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ಹೀಗಾಗಿ ಈ ಬಾರಿಯ ಧನ್‌ತೇರಸ್‌ನಲ್ಲಿ ಚಿನ್ನಾಭರಣ ಮಾರಾಟವು 2021ರ ಮಟ್ಟದಲ್ಲಿಯೇ ಇರಬಹುದು ಎಂದು ನಿರೀಕ್ಷಿಸಲಾಗಿದೆ’ ಎಂದು ಅಖಿಲ ಭಾರತ ಹರಳು ಮತ್ತು ಚಿನ್ನಾಭರಣ ಸಮಿತಿಯ ಅಧ್ಯಕ್ಷ ಆಶಿಶ್ ಪೇಠೆ ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಅಮೆರಿಕದ ಡಾಲರ್ ಮೌಲ್ಯ ವೃದ್ಧಿ: ಚಿನ್ನದ ದರ ಇಳಿಕೆಗೆ ಅಡ್ಡಿ
- ಚಿನ್ನದ ಬೆಲೆ ಇಳಿದರೆ ಬೇಡಿಕೆ ಇನ್ನಷ್ಟು ಹೆಚ್ಚಳ ಸಾಧ್ಯತೆ

ಕಚೇರಿಯಿಂದ ಕೆಲಸ: ಪ್ರೇಮ್‌ಜಿ ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪ್ರೊ ಕಂಪನಿಯ ಅಧ್ಯಕ್ಷ ರಿಷದ್ ಪ್ರೇಮ್‌ಜಿ ಅವರು ತಮ್ಮ ಕಂಪನಿಯ ನೌಕರರು ಕೆಲವು ಸಮಯದವರೆಗೆ ಕಚೇರಿಯಿಂದ ಕೆಲಸ ಮಾಡಬೇಕು ಎಂಬ ಇಂಗಿತ ವ್ಯಕ್ತಪಡಿಸಿದರು.

ನಾಸ್ಕಾಂ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕೋವಿಡ್ ನಂತರದ ಸಂದರ್ಭದಲ್ಲಿ ಸಂಸ್ಥೆಯಲ್ಲಿ ತಾವೆಲ್ಲ ಒಂದಾಗಿದ್ದೇವೆ ಭಾವವನ್ನು ಮೂಡಿಸುವುದು ಸವಾಲಾಗಿತ್ತು ಎಂದು ನೆನಪಿಸಿಕೊಂಡರು.

‘ಹೊಸದಾಗಿ ನೇಮಕಗೊಂಡ ಹಲವರು ಕಂಪನಿಯಲ್ಲಿ ಕೆಲವರ ಜೊತೆ ಮಾತ್ರ ಒಡನಾಟ ಹೊಂದಿರುತ್ತಾರೆ’ ಎಂದು ಅವರು ಹೇಳಿದರು.

ನೌಕರರನ್ನು ಮತ್ತೆ ಕಚೇರಿಗೆ ಕರೆಸಲು ಯತ್ನಿಸುವ ಜೊತೆಯಲ್ಲೇ ಕಂಪನಿಯು ಒಂದಿಷ್ಟು ಹೊಂದಾಣಿಕೆಗಳನ್ನೂ ಮಾಡಿಕೊಳ್ಳಲಿದೆ ಎಂದು ಪ್ರೇಮ್‌ಜಿ ಹೇಳಿದರು.

‘ನಾವು ಒಂದಿಷ್ಟು ಬದಲಾವಣೆಗಳನ್ನು ಕೂಡ ಮಾಡಿಕೊಳ್ಳಬೇಕು. ಹೊಸ ಸಂದರ್ಭಕ್ಕೆ ನಾವು ಕೂಡ ಹೊಂದಿಕೊಳ್ಳಬೇಕು’ ಎಂದು ಅವರು ಹೇಳಿದರು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹275-640
ದ್ವಿತಳಿ (ಬಿ.ವಿ) ₹311-806

ಮುಂಬೈ ಧಾರಣೆ

ಶೇಂಗಾ

19–10-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1650)
ಒಂದು ವಾರದ ಡೆಲಿವರಿ	1625 (1645)
ಸೋಯಾ ಕಚ್ಚಾ	1225 (1210)
ಪಾಮ್ ವಾರದ ಡೆಲಿವರಿ	975 (955)
ಸೂರ್ಯಕಾಂತಿ ಎಣ್ಣೆ ಕಚ್ಚಾ	1420 (1420)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,000 (50,150)
ಬೆಳ್ಳಿ ಕೆ.ಜಿ 55,550 (56,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-56000
ಕುಮಟ	
ಚಿಪ್ಪು	29809-3339
ಕೋಕ	17569-30119
ಹೊಸಚಾಲಿ	37509-42019
ಫ್ಯಾಕ್ಟರಿ	10169-19411
ಪುತ್ತೂರು	
ಕೋಕ	11000-26000
ಹೊಸತು	35500-48500
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-47500
ಶಿವಮೊಗ್ಗ	
ಬೆಟ್ಟೆ	50670-53599
ಗೊರಬಲು	17200-37550
ಹೊಸತು	46839-49009
ರಾಶಿ	455599-49009
ಸರಕು	59000-78810
ಸಿದ್ದಾಪುರ	
ಬಿಳಿಗೋಟು	28099-33699
ಚಾಲಿ	37289-41099
ಕೋಕ	26299-33299
ಕೆಂಪುಗೋಟು	30119-33499
ರಾಶಿ	46299-49399
ತಟ್ಟಿಬೆಟ್ಟೆ	38009-43109
ಶಿರಸಿ	
ಬೆಟ್ಟೆ	43989-46899
ಬಿಳಿಗೋಟು	24022-37099
ಚಾಲಿ	34899-42742
ಕೆಂಪುಗೋಟು	17099-29402
ರಾಶಿ	49300-49300

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟೇಷನ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15600	16100	195.10 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2057 ಡಾಲರ್ಸ್

ಬಿಲ್ಕಿಸ್ ಬಾನು ಅತ್ಯಾಚಾರ: 3 ವರ್ಷ ಪೆರೋಲ್‌ನಲ್ಲಿದ್ದರು ಅಪರಾಧಿಗಳು

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಮೇಲಿನ ಸಾಮೂಹಿಕ ಅತ್ಯಾಚಾರದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 11 ಅಪರಾಧಿಗಳ ಪೈಕಿ ಇಬ್ಬರು ಪೆರೋಲ್ ಮೇಲೆ ಹೊರಗಿದ್ದಾಗ ಅವರ ಮೇಲೆ ಅಪರಾಧ ಪ್ರಕರಣಗಳು ದಾಖಲಾಗಿವೆ. ಅಲ್ಲದೇ, 11 ಅಪರಾಧಿಗಳು ಪೆರೋಲ್ ಮೇಲೆ ಸುಮಾರು ಮೂರು ವರ್ಷ ಹೊರಗಿದ್ದ ಅಂಶವೂ ಬಹಿರಂಗಗೊಂಡಿದೆ.

ಅಪರಾಧಿಗಳು ಬಿಡುಗಡೆಗೆ ಮೊದಲೇ ಪೆರೋಲ್ ಮೇಲೆ ಒಂದು ಸಾವಿರ ದಿನಗಳು ಹೊರಗಿದ್ದರು. ಇದರಲ್ಲಿ ಒಬ್ಬ ಅಪರಾಧಿ ಮಿತೇಶ್ ಚಮನ್‌ಲಾಲ್ ಭಟ್ ಪೆರೋಲ್‌ನಲ್ಲಿದ್ದಾಗ 2020ರಲ್ಲಿ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿ, ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿದ್ದು, ಈತನ ಮೇಲೆ ದೋಷಾರೋಪ ಪಟ್ಟಿಯೂ ಸಲ್ಲಿಕೆಯಾಗಿದೆ ಎಂದು ಗುಜರಾತ್ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ತಿಳಿಸಿದೆ.

ಈ ಅಫಿಡವಿಟ್‌ನಲ್ಲಿ ಸಿಬಿಐ ವಿಶೇಷ ನ್ಯಾಯಾಲಯದ ನಕಾರಾತ್ಮಕ ಅಭಿಪ್ರಾಯವನ್ನು ಸರ್ಕಾರ ಯಾವ ನಿರ್ಲಕ್ಷಿಸಿದೆ ಎಂಬುದು ಕಾಣಿಸುತ್ತದೆ. ಅಲ್ಲದೇ ತಮ್ಮದೇ ಪೊಲೀಸರು ಕೆಲವು ಅಪರಾಧಿಗಳ ವಿರುದ್ಧ ವ್ಯಕ್ತಿಗತ ನೀಡಿದ ವರದಿಯನ್ನೂ ಪರಿಗಣಿಸಿಲ್ಲ. ಅಪರಾಧಿಗಳ ಬಿಡುಗಡೆಗೆ ಸಲಹೆ ಕೊಡುವ ಜೈಲು ಸಲಹಾ ಸಮಿತಿ ಸದಸ್ಯರಾಗಿ ಬಿಜೆಪಿ ಶಾಸಕರು ಮತ್ತು ಸಾಮಾಜಿಕ ಕಾರ್ಯಕರ್ತರು, ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳ ಬಿಡುಗಡೆಗಾಗಿಯೇ ಸೇರಿರುವುದನ್ನು ದಾಖಲೆಗಳು ತೋರಿಸಿವೆ.

11 ಅಪರಾಧಿಗಳಿಗೆ ಕ್ಷಮಾದಾನ ನೀಡಿ, ಬಿಡುಗಡೆಗೊಳಿಸಿರುವ ಕ್ರಮ ಪ್ರಶ್ನಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಸಂಬಂಧಿಸಿ ಸಲ್ಲಿಸಿರುವ ಪ್ರತಿಕ್ರಿಯೆಯಲ್ಲಿ ವಾಸ್ತವಾಂಶಗಳೇ ಕಾಣೆಯಾಗಿವೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಗುಜರಾತ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು. ಕೋರ್ಟ್‌ಗೆ ಸಲ್ಲಿಸಿರುವ ಪ್ರತಿಕ್ರಿಯೆಯನ್ನು ಸಾರ್ವಜನಿಕರಿಗೆ ಒದಗಿಸಲು ನಿರ್ದೇಶಿಸಿತ್ತು.

ಸುದ್ದಿ 2 ನಿಮಿಷ

₹ 83ಕ್ಕೆ ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ರೂಪಾಯಿಯ ಮೌಲ್ಯವು ಅಮೆರಿಕದ ಡಾಲರ್ ಎದುರು ಇದೇ ಮೊದಲ ಬಾರಿಗೆ ₹ 83ರ ಮಟ್ಟಕ್ಕೆ ಕುಸಿದಿದೆ. ಬುಧವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು 60 ಪೈಸೆಯಷ್ಟು ಕುಸಿದಿದೆ.

ವಿದೇಶಿ ಬಂಡವಾಳದ ಹೊರಹರಿವು, ಡಾಲರ್ ಮೌಲ್ಯವರ್ಧನೆ ಹಾಗೂ ಕಚ್ಚಾ ತೈಲ ಬೆಲೆ ಮತ್ತೆ ಹೆಚ್ಚಾಗುತ್ತಿರುವುದು, ಹೂಡಿಕೆದಾರರು ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಮನಸ್ಸು ಮಾಡುತ್ತಿಲ್ಲದಿರುವುದು ರೂಪಾಯಿ ಮೌಲ್ಯ ಇಳಿಕೆಗೆ ಕಾರಣ ಎಂದು ತಜ್ಞರು ಹೇಳಿದ್ದಾರೆ.

ಡಾಲರ್ ಮೌಲ್ಯವು ಜಪಾನ್‌ನ ಯೆನ್ ಎದುರು 32 ವರ್ಷಗಳ ಗರಿಷ್ಠ ಮಟ್ಟ ತಲುಪಿದೆ. ಯೂರೊ ಮತ್ತು ಬ್ರಿಟಿಷ್ ಪೌಂಡ್ ಮೌಲ್ಯ ಕೂಡ ಇಳಿಕೆಯಾಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ಒಂದು ಹಂತದಲ್ಲಿ ₹ 83.01ರವರೆಗೆ ಇಳಿಕೆಯಾಗಿತ್ತು. ವಹಿವಾಟಿನ ಅಂತ್ಯದ ಹೊತ್ತಿಗೆ ₹ 83ಕ್ಕೆ ತಲುಪಿತು. ಅಕ್ಟೋಬರ್‌ನಲ್ಲಿ ರೂಪಾಯಿ ಇದುವರೆಗೆ 160 ಪೈಸೆಯಷ್ಟು ಮೌಲ್ಯ ಕಳೆದುಕೊಂಡಿದೆ.

ಷೇರುಪೇಟೆ ಏರಿಕೆ: ಬುಧವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆಗಳಲ್ಲಿ ತುಸು ಏರಿಕೆ ದಾಖಲಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 146 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 25 ಅಂಶ ಏರಿಕೆ ದಾಖಲಿಸಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಒಟ್ಟು ₹ 453 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಷೇರುಗಳ ಮೌಲ್ಯ ಹೆಚ್ಚಾಯಿತು.

21 ದಿನ; 300 ವಿಟಾರಾ ಮಾರಾಟ

ಬೆಂಗಳೂರು: ಮಾರುತಿ ಸುಜುಕಿ ಕಂಪನಿಯ ಗ್ರ್ಯಾಂಡ್ ವಿಟಾರಾ ಮಾದರಿಯ 300ಕ್ಕೂ ಹೆಚ್ಚು ವಾಹನಗಳನ್ನು ರಾಜ್ಯದ ನೆಕ್ಸಾ ಮಳಿಗೆಗಳು ಈ ಮಾದರಿ ಬಿಡುಗಡೆ ಆದ 21 ದಿನಗಳಲ್ಲಿ ಗ್ರಾಹಕರಿಗೆ ಹಸ್ತಾಂತರ ಮಾಡಿವೆ. ರಾಜ್ಯದಲ್ಲಿ ಈ ವಾಹನಕ್ಕೆ ಇದುವರೆಗೆ ನಾಲ್ಕೂವರೆ ಸಾವಿರಕ್ಕೂ ಹೆಚ್ಚು ಬುಕಿಂಗ್‌ಗಳು ಬಂದಿವೆ.

ಮಧ್ಯಮ ಗಾತ್ರದ ಈ ಎಸ್‌ಯುವಿ ವಾಹನವನ್ನು ಮಾರುತಿ ಸುಜುಕಿ ಜುಲೈನಲ್ಲಿ ಅನಾವರಣ ಮಾಡಿದೆ. ಕಾರು ಉದ್ಯಮದಲ್ಲಿ ಈ ಮೊದಲು ಎಸ್‌ಯುವಿ ಪಾಲು ಶೇ 19ರಷ್ಟು ಇದ್ದಿದ್ದು ಈಗ ಶೇ 40ಕ್ಕೆ ಏರಿಕೆಯಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಗ್ರ್ಯಾಂಡ್ ವಿಟಾರಾ ವಾಹನದ ಬೆಲೆಯು ₹ 10.45 ಲಕ್ಷದಿಂದ (ಎಕ್ಸ್ ಷೋರೂಂ) ಆರಂಭವಾಗುತ್ತದೆ.

ಗ್ರ್ಯಾಂಡ್ ವಿಟಾರಾ ವಾಹನವು 1.5 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಹೊಂದಿದೆ. ಇದು ಪ್ರತಿ ಲೀಟರ್‌ಗೆ ಗರಿಷ್ಠ 27.97 ಕಿ.ಮೀ. ಇಂಧನ ದಕ್ಷತೆಯನ್ನು ನೀಡುತ್ತದೆ ಎಂದು ಕಂಪನಿ ಹೇಳಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಕೆಚ್ಚೆದೆಯ ರಾಣಿ ಚೆನ್ನಮ್ಮನ ಅಂಗಳದಲ್ಲಿ...
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಕನ್ನಡ ಧ್ವನಿ

ಉಕ್ರೇನ್ ತೊರೆಯಲು ತನ್ನ ನಾಗರಿಕರಿಗೆ ಭಾರತ ಸೂಚನೆ

ಉಕ್ರೇನ್‌ನ 4 ಪ್ರದೇಶಗಳಲ್ಲಿ ರಷ್ಯಾದಿಂದ ಸೇನಾಡಳಿತ

ಮಾಸ್ಕೊ/ಕೀವ್ (ಎಪಿ/ಎಎಫ್‌ಪಿ): ಅಕ್ರಮವಾಗಿ ಸ್ವಾಧೀನಪಡಿಸಿಕೊಂಡ ಉಕ್ರೇನ್‌ನ ನಾಲ್ಕು ಪ್ರದೇಶಗಳಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಬುಧವಾರ ಸೇನಾಡಳಿತ ಘೋಷಿಸಿದ್ದಾರೆ. ಇದೇ ವೇಳೆ ಯುದ್ಧಪೀಡಿತ ಉಕ್ರೇನ್ ಅನ್ನು ಆದಷ್ಟು ಶೀಘ್ರ ತೊರೆಯಲು ತನ್ನ ನಾಗರಿಕರಿಗೆ ಭಾರತ ಸೂಚಿಸಿದೆ.

ರಷ್ಯಾ ಸೇರಿರುವ ಲುಹಾನ್ಸ್ಕ್, ಡೊನೆಟ್ಸ್ಕ್, ಕೆರ್ಸಾನ್, ಝುಪೊರಿಝಿಯಾ ಪ್ರದೇಶಗಳ ಮುಖ್ಯಸ್ಥರಿಗೆ ಹೆಚ್ಚುವರಿ ತುರ್ತು ಅಧಿಕಾರವನ್ನು ಪುಟಿನ್ ನೀಡಿದ್ದಾರೆ.

ಉಕ್ರೇನ್‌ನಲ್ಲಿ ಸೇನಾ ಕಾರ್ಯಾಚರಣೆ ಮುಂದುವರಿಸಿರುವ ಪುಟಿನ್, ಕಾರ್ಯಾಚರಣೆಗೆ ಸರ್ಕಾರದ ವಿವಿಧ ಇಲಾಖೆಗಳ ನಡುವೆ ಸಂವಹನ ಹೆಚ್ಚಿಸಲು ಸಮನ್ವಯ ಸಮಿತಿ ಸ್ಥಾಪನೆಗೆ ಆದೇಶಿಸಿದ್ದಾರೆ.

ಸೇನಾಡಳಿತದಲ್ಲಿ ಸಾರ್ವಜನಿಕರು ಒಟ್ಟುಗೂಡುವುದು ಮತ್ತು ಪ್ರಯಾಣ ಕೈಗೊಳ್ಳುವುದನ್ನು ನಿರ್ಬಂಧಿಸುತ್ತದೆ. ಅಲ್ಲದೇ ಬಿಗಿಯಾದ ಸೆನ್ಸಾರ್‌ಶಿಪ್ ಇರಲಿದೆ. ಕಾನೂನು ಜಾರಿ ಏಜೆನ್ಸಿಗಳಿಗೆ ಹೆಚ್ಚಿನ ಅಧಿಕಾರವೂ ಇರಲಿದೆ. ಪುಟಿನ್ ಅವರು ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿಲ್ಲ.

ನಾಗರಿಕರ ತೆರವು: ವಶಪಡಿಸಿಕೊಂಡಿರುವ ಪ್ರಮುಖ ಪ್ರದೇಶಗಳಿಂದ ನಾಗರಿಕರನ್ನು ಸಾಮೂಹಿಕವಾಗಿ ತೆರವುಗೊಳಿಸುವ ಬೃಹತ್ ಕಾರ್ಯಾಚರಣೆಯನ್ನು ರಷ್ಯಾ ಬುಧವಾರ ಆರಂಭಿಸಿದೆ. ಉಕ್ರೇನಿನ ದಕ್ಷಿಣದ ನಗರಗಳ ಮೇಲೆ ಬುಧವಾರ ಕೂಡ ರಷ್ಯಾ ಪಡೆಗಳು ಕ್ಷಿಪಣಿ, ಶೆಲ್ ಹಾಗೂ ಡ್ರೋನ್ ದಾಳಿ ನಡೆಸಿವೆ. ನಗರಗಳು, ಹಲವು ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ವಿದ್ಯುತ್, ನೀರಿನ ಅಭಾವ ಎದುರಾಗಿದೆ. ನಾಗರಿಕರು ಚಳಿಯಿಂದ ತತ್ತರಿಸಿ, ಸ್ವಯಂಪ್ರೇರಿತವಾಗಿ ಸ್ಥಳ ತೊರೆಯುವ ಪರಿಸ್ಥಿತಿ ಸೃಷ್ಟಿಸಲಾಗಿದೆ.

ಉಕ್ರೇನ್‌ನ ಕಮಿಹಿವ್ ಪ್ರದೇಶದಲ್ಲಿ ಉಕ್ರೇನ್‌ನ ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದು ಉರುಳಿಸಲಾದ ರಷ್ಯಾದ ರಾಕೆಟ್ – ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಜಾಗತಿಕ ಉಗ್ರ ಪಟ್ಟಿಗೆ ಶಾಹಿದ್: ಚೀನಾ ಅಡ್ಡಗಾಲು

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್ ಎ ತಯ್ಯಬಾದ ಉಗ್ರ ಶಾಹಿದ್ ಮಹಮೂದ್‌ನನ್ನು ಜಾಗತಿಕ ಭಯೋತ್ಪಾದಕ ಪಟ್ಟಿಗೆ ಸೇರಿಸಲು ವಿಶ್ವಸಂಸ್ಥೆಯಲ್ಲಿ ಭಾರತ ಮತ್ತು ಅಮೆರಿಕ ಸಲ್ಲಿಸಿದ ಪ್ರಸ್ತಾವವನ್ನು ಚೀನಾ ತಡೆಹಿಡಿದಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಲ್ ಕೈದಾ ಮೇಲಿನ ನಿರ್ಬಂಧಗಳ ಸಮಿತಿಯ ನಿಯಮದಡಿಯಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕನನ್ನು ಜಾಗತಿಕ ಉಗ್ರನೆಂದು ಘೋಷಿಸುವ ಪ್ರಸ್ತಾವವನ್ನು ಚೀನಾ ತಡೆ ಹಿಡಿಯಿತು. ವಿಶ್ವಸಂಸ್ಥೆಯಲ್ಲಿ ಭಯೋತ್ಪಾದಕರನ್ನು ಕಪ್ಪು ಪಟ್ಟಿಗೆ ಸೇರಿಸುವ ಪ್ರಯತ್ನಕ್ಕೆ ಕೆಲವು ತಿಂಗಳುಗಳಿಂದ ಚೀನಾ ಅಡ್ಡಗಾಲು ಹಾಕುತ್ತಿರುವ ನಾಲ್ಕನೇ ನಿದರ್ಶನವಿದು.

ಅಮೆರಿಕದ ಖಜಾನೆ ಇಲಾಖೆಯು ಮಹಮೂದ್‌ನನ್ನು 2016ರ ಡಿಸೆಂಬರ್‌ನಲ್ಲಿ ಜಾಗತಿಕ ಭಯೋತ್ಪಾದಕನೆಂದು ಘೋಷಿಸಿತ್ತು. ಈತ ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಪ್ರಮುಖ ಸಂಚುಕೋರ ಸಾಜಿದ್ ಮಿರ್‌ನ ಆಪ್ತನಾಗಿದ್ದಾನೆ.

ಗೊಟಬಯಗೆ ಸಮನ್ಸ್

ಕೊಲಂಬೊ (ಪಿಟಿಐ): ಶ್ರೀಲಂಕಾದ ಉತ್ತರ ಭಾಗದ ಜಾಫ್ನಾದಲ್ಲಿ 2011ರಲ್ಲಿ ಇಬ್ಬರು ಮಾನವ ಹಕ್ಕು ಕಾರ್ಯಕರ್ತರ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಲು ನ್ಯಾಯಾಲಯಕ್ಕೆ ಹಾಜರಾಗುವಂತೆ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರಿಗೆ ಸಮನ್ಸ್ ಕಳುಹಿಸಲು ಸುಪ್ರೀಂ ಕೋರ್ಟ್ ಅಧಿಕಾರಿಗಳಿಗೆ ಸೂಚಿಸಿದೆ.

ಬ್ರಿಜ್ ಅಗರ್‌ವಾಲ್, ಸುನಿತಾ

ಭಾರತ ಮೂಲದ ದಂಪತಿಯಿಂದ ಯುಎಚ್‌ಗೆ ದೇಣಿಗೆ

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕದ ಉದ್ಯಮಿ, ವಿಕೆಸಿ ಗ್ರೂಪ್‌ನ ಅಧ್ಯಕ್ಷ ಬ್ರಿಜ್ ಅಗರ್‌ವಾಲ್- ಸುನಿತಾ ಅವರು ಹ್ಯೂಸ್ಟನ್ ವಿಶ್ವವಿದ್ಯಾಲಯದ (ಯುಎಚ್) ಕಾಲೇಜ್ ಆಫ್ ಟೆಕ್ನಾಲಜಿ ಪ್ರಯೋಗಾಲಯ ಅಭಿವೃದ್ಧಿಗೊಳಿಸಲು ₹ 8.30 ಕೋಟಿ (1 ದಶಲಕ್ಷ ಡಾಲರ್) ದೇಣಿಗೆ ನೀಡಿದ್ದಾರೆ.

ಬ್ರಿಜ್ ಅಗರ್‌ವಾಲ್ ಅವರು ಈ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಯೂ ಹೌದು. ಗ್ರೇಟರ್ ಹ್ಯೂಸ್ಟನ್‌ನ ಉಪನಗರವಾದ ಶುಗರ್ ಲ್ಯಾಂಡ್‌ನಲ್ಲಿಯ ಕ್ಯಾಂಪಸ್‌ಗೆ ಈ ದೇಣಿಗೆ ನೀಡಲಾಗಿದೆ.

ಜೈಲು ಅಧಿಕಾರಿಗಳ ಪಾತ್ರ: ತನಿಖೆಗೆ

ನವದೆಹಲಿ (ಪಿಟಿಐ): ‘ರೋಹಿಣಿ ಜೈಲಿನಲ್ಲಿದ್ದ ವಂಚಕ ಸುಕೇಶ್ ಚಂದ್ರಶೇಖರ್, ಅಲ್ಲಿಂದಲೇ ಸಂಘಟಿತ ಅಪರಾಧ ಜಾಲವೊಂದನ್ನು ಮುನ್ನಡೆಸುತ್ತಿದ್ದ. ಇದರಲ್ಲಿ 82 ಮಂದಿ ಜೈಲು ಅಧಿಕಾರಿಗಳು ಶಾಮೀಲಾಗಿರುವ ಆರೋಪ ಕೇಳಿಬಂದಿದೆ. ಈ ಕುರಿತು ತನಿಖೆ ನಡೆಸಲು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ದೆಹಲಿ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧ ಘಟಕಕ್ಕೆ ಅನುಮತಿ ನೀಡಿದ್ದಾರೆ’ ಎಂದು ಮೂಲಗಳು ಬುಧವಾರ ತಿಳಿಸಿವೆ.

ಪ್ರಕರಣದ ತನಿಖೆ ಕೈಗೊಂಡಿದ್ದ ಆರ್ಥಿಕ ಅಪರಾಧ ಘಟಕದ ಅಧಿಕಾರಿಗಳು ಈ ಮೊದಲು 7 ಮಂದಿ ಜೈಲು ಅಧಿಕಾರಿಗಳನ್ನು ಬಂಧಿಸಿದ್ದರು. ಅವರ ವಿಚಾರಣೆಯಿಂದ ಇತರರ ಪಾತ್ರದ ಸುಳಿವು ಸಿಕ್ಕಿತ್ತು. ಈ ವಿಚಾರವನ್ನು ಲೆಫ್ಟಿನೆಂಟ್ ಗವರ್ನರ್ ಅವರ ಗಮನಕ್ಕೆ ತಂದಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

WANTED SALES executives for Chalo Mobility. Interested candidates must speak Kannada. Please visit office no:77, Private bus stand near high school field, AVK college road, Davanagere between 10:30 AM- 01:00 PM during Monday- Saturday. Education: 10th Pass. Age: 18+. Salary: 17256 per month. Call: 9606818611

Wanted

ತಕ್ಷಣವೇ ಬೇಕಾಗಿದೆ: ಬೆಂಗಳೂರಿನಲ್ಲಿ ಆಫೀಸ್ ಕೆಲಸಕ್ಕೆH.R, ಟೆಲಿಕಾಲರ್ಗಳು, ರಿಸೆಪ್ಷನಿಸ್ಟ್ ಕೆಲಸಕ್ಕಾಗಿ ಯುವತಿಯರು ಬೇಕಾಗಿದ್ದಾರೆ. ವಸತಿಯೊಂದಿಗೆ 12,000 - 25,000/-. 8951951606

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆ ಮಾಡಿ: 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ವ್ಯಾಪಾರ

Business Offers

General

ಸಂಪರ್ಕಿಸಿ: 150 ಕ್ಕೂ ಹೆಚ್ಚಿನ ಉದ್ಯೋಗಾವಕಾಶದ ತರಬೇತಿಗಳ ತಾಲೂಕುವಾರು ಫ್ರಾಂಚಾಯ್ಸಿಗಾಗಿ ಹಾಗೂ ಬ್ಯಾಂಕಿಂಗ್ ಸೇವಾ ಸಂಘಟನೆಯ ಪ್ರತಿನಿಧಿಯಾಗಲು/ ಮುನ್ನಡೆಸಲು 9342326501

ಭವಿಷ್ಯ

Astrology

“ಕೆಲಸಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಪ್ರವಾಸ

Travel

ವಿಮಾನ/ A/C ಬಸ್ಸಿನಲ್ಲಿ 10.11.2022 02.02.2023 ರಿಂದ 11 ದಿನಗಳು ಉಜ್ಜಯಿನಿ ಸೋಮನಾಥ್ ದ್ವಾರಕಾ ನಿಷ್ಕಳಂಕ ಮಹದೇವ ವಲ್ಲಭ ಬಾಯಿ ಪಟೇಲರ ಪ್ರತಿಮೆ 11.11.2022 ರಿಂದ 12/10/8 ದಿನಗಳು ದೆಹಲಿ,ಹರಿದ್ವಾರ್.ಕಾಶಿ ನೈಮಿಶಾರಣ್ಯ,ಗಯಾ ಡಿಸೆಂಬರ್ ಜನವರಿಯಲ್ಲಿ ಸಿಂಗಾಪುರ್ ಮಲೇಶಿಯಾ,ದುಬೈ ಪ್ರವಾಸ. ಸಂಪರ್ಕಿಸಿ: ಅನಿತಾ ಟ್ರಾವಲ್ಸ್ ಬೆಂಗಳೂರು-20. 9448602641 7760884305

★12.12.2022 21ದಿನಗಳು★ ಪಂಚದ್ವಾರಕ 8ಜ್ಯೋತಿರ್ಲಿಂಗ ಪ್ರವಾಸ,6ದಿನಗಳು ರಾಜಸ್ಥಾನ್ ಪ್ರವಾಸ.18.12.2022 10ದಿನಗಳು ಗುಜರಾತ್, ಮಧ್ಯಪ್ರದೇಶಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500 6363416487

15.11.2022ರಿಂದ 11ದಿನಗಳ ಗುಜರಾತ್ ಪ್ರವಾಸ.`ಜನವರಿ, ಫೆಬ್ರವರಿ ದುಬೈ, ಹಾಗೂ ಸಿಂಗಪೂರ್`ಪ್ರವಾಸ 10.2.2023 ಕಾಶಿ,ಆಗ್ರಾ, ಮಥುರಾ ಪ್ರವಾಸ 12ದಿನಗಳು. ನಂದಿನಿ ಟೂರಿಸ್ಟ್ 9916574089.

DH ಪ್ರಜಾವಾಣಿ
Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ತೆರೆ: ರೈಲ್ವೇಸ್ ತಂಡಕ್ಕೆ ಸಮಗ್ರ ಪ್ರಶಸ್ತಿ

ಸಿಂಚಲ್‌ಗೆ ಬೆಳ್ಳಿ; ರಿಲೇ ತಂಡಗಳಿಗೆ ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದವರು ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು. ಇದರೊಂದಿಗೆ ಐದು ದಿನಗಳ ಕೂಟಕ್ಕೆ ತೆರೆಬಿದ್ದಿತು. 297 ಪಾಯಿಂಟ್ಸ್ ಕಲೆಹಾಕಿದ ರೈಲ್ವೇಸ್ ತಂಡದವರು ಸಮಗ್ರ ಚಾಂಪಿಯನ್ ಎನಿಸಿಕೊಂಡರು.

ಕರ್ನಾಟಕ ತಂಡ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 10 ಪದಕ (ಒಂದು ಚಿನ್ನ, ಮೂರು ಬೆಳ್ಳಿ ಮತ್ತು ಆರು ಕಂಚು) ಗೆದ್ದಿತು. ಮಹಿಳೆಯರ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ಬುಧವಾರ ರಾಜ್ಯದ ಸಿಂಚಲ್ ಕಾವೇರಮ್ಮ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು. ಅವರು 58.84 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಈ ವಿಭಾಗದಲ್ಲಿ ತಮಿಳುನಾಡಿನ ವಿದ್ಯಾ ರಾಮರಾಜ್ (56.97 ಸೆ.) ಚಿನ್ನ ಜಯಿಸಿದರು.

ಪುರುಷರ 200 ಮೀ. ಓಟದಲ್ಲಿ ಅಭಿನ್ ದೇವಾಡಿಗ (20.97 ಸೆ.) ಕಂಚು ಗೆದ್ದರು.

4X400 ಮೀ. ರಿಲೇಯಲ್ಲಿ ಕರ್ನಾಟಕದ ಪುರುಷ ಮತ್ತು ಮಹಿಳಾ ಎರಡೂ ತಂಡಗಳು ಕಂಚಿನ ಪದಕ ಗೆದ್ದುಕೊಂಡವು. ಪುರುಷರ ತಂಡದಲ್ಲಿ ಎಂ. ಸಿದ್ದಪ್ಪ ಹೆಳವಿ, ಗೌರಿಶಂಕರ್ ವಿ, ಜೀವನ್ ಕೆ.ಎಸ್ ಮತ್ತು ನಿಹಾಲ್ ಜೋಯಲ್ ಇದ್ದರು. ಮಹಿಳಾ ತಂಡವು ಸಿಂಚಲ್ ಕಾವೇರಮ್ಮ, ಅರ್ಪಿತಾ ಇ.ಬಿ, ಇಂಚರ ಎನ್.ಎಸ್ ಮತ್ತು ಲಿಖಿತಾ ಎಂ. ಅವರನ್ನು ಒಳಗೊಂಡಿತ್ತು.

ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಉತ್ತರ ಪ್ರದೇಶದ ಶೈಲಿ ಸಿಂಗ್ (6.41 ಮೀ) ಚಿನ್ನ ಜಯಿಸಿದರು.

ಸರ್ವಿಸಸ್‌ನ ತಜಿಂದರ್ ಸಿಂಗ್ ತೂರ್ ಶ್ರೇಷ್ಠ ಪುರುಷ ಅಥ್ಲೀಟ್ ಎನಿಸಿಕೊಂಡರೆ, ರೈಲ್ವೇಸ್‌ನ ಜ್ಯೋತಿ ಯರಾಜಿ ಅವರಿಗೆ ಶ್ರೇಷ್ಠ ಮಹಿಳಾ ಅಥ್ಲೀಟ್ ಗೌರವ ಒಲಿಯಿತು.


ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಉತ್ತರಪ್ರದೇಶದ ಶೈಲಿ ಸಿಂಗ್ – ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಫಲಿತಾಂಶಗಳು: ಪುರುಷರು: 200 ಮೀ. ಓಟ: ರಗುಲ್ ಕುಮಾರ್ ಜಿ. (ತಮಿಳುನಾಡು, ಕಾಲ: 20.87ಸೆ.)-1, ರಾಹುಲ್ ಕದಂ (ಮಹಾರಾಷ್ಟ್ರ)-2, ಅಭಿನ್ ದೇವಾಡಿಗ (ಕರ್ನಾಟಕ)-3

10 ಸಾವಿರ ಮೀ. ಓಟ: ಮುರಳಿಕುಮಾರ್ ಗವಿತ್ (ಗುಜರಾತ್, ಕಾಲ: 29 ನಿ. 50.11 ಸೆ.)-1, ಸಾವನ್ ಭರ್ವಾಲ್ (ಸರ್ವಿಸಸ್)-2, ಮೋಹನ್ ಸೈನಿ(ಸರ್ವಿಸಸ್)-3.

ಹ್ಯಾಮರ್ ಥ್ರೊ: ನಿತೇಶ್ ಪೂನಿಯಾ (ರಾಜಸ್ಥಾನ, ದೂರ: 65.95 ಮೀ.)-1, ಹರ್‌ವಿಂದರ್ ಸಿಂಗ್ (ಉತ್ತರ ಪ್ರದೇಶ)-2, ನೀರಜ್ ಕುಮಾರ್ (ಸರ್ವಿಸಸ್)-3.

35 ಕಿ.ಮೀ. ನಡಿಗೆ: ರಾಮ್ ಬಾಬು (ಉತ್ತರ ಪ್ರದೇಶ, ಕಾಲ: 2 ತಾಸು 39 ನಿ. 5 ಸೆ.)-1, ಏಕನಾಥ್ (ರೈಲ್ವೇಸ್)-2, ಚಂದನ್ ಸಿಂಗ್ (ಸರ್ವಿಸಸ್)-3.

ಟ್ರಿಪಲ್ ಜಂಪ್: ಅರುಣ್ ಎ.ಬಿ. (ಸರ್ವಿಸಸ್, ದೂರ: 16.37 ಮೀ.)-1, ಮೊಹಮ್ಮದ್ ಸಲಾವುದ್ದೀನ್ (ತಮಿಳುನಾಡು)-2, ಅರ್ಪಿಂದರ್ ಸಿಂಗ್ (ಒಎನ್‌ಜಿಸಿ)-3

4X400 ಮೀ. ರಿಲೇ: ರೈಲ್ವೇಸ್-1 (ಕಾಲ: 3 ನಿ. 6.77 ಸೆ.), ಸರ್ವಿಸಸ್-2, ಕರ್ನಾಟಕ-3

ಮಹಿಳೆಯರು: 200 ಮೀ. ಓಟ: ಅರ್ಚನಾ ಸುಶೀಂದ್ರನ್ (ತಮಿಳುನಾಡು, ಕಾಲ: 23.43 ಸೆ.)-1, ಶ್ರಬಣಿ ನಂದಾ (ಒಡಿಶಾ)-2, ಚಂದ್ರ ಲೇಖಾ ಆನಂದ್ (ರೈಲ್ವೇಸ್)-3

10 ಸಾವಿರ ಮೀ. ಓಟ: ಅಂಕಿತಾ (ರೈಲ್ವೇಸ್, ಕಾಲ: 34 ನಿ.39.05 ಸೆ.)-1, ಪೂಜಾ ಹರಿಜನ್ (ರಾಜಸ್ಥಾನ)-2, ರಿಚಾ ಬದೌರಿಯಾ (ಉತ್ತರಪ್ರದೇಶ)-3

35 ಕಿ.ಮೀ. ನಡಿಗೆ: ಪಾಯಲ್ (ಉತ್ತರಾಖಂಡ, ಕಾಲ: 3 ತಾಸು 4 ನಿ. 48 ಸೆ.)-1, ರಮಣದೀಪ್ ಕೌರ್ (ರೈಲ್ವೇಸ್)-2, ಮಂಜು ರಾಣಿ (ಪಂಜಾಬ್)-3

ಹ್ಯಾಮರ್ ಥ್ರೊ: ಕೆ.ಎಂ. ರಚನಾ (ಉತ್ತರ ಪ್ರದೇಶ, ದೂರ: 63.66 ಮೀ.)-1, ಸರಿತಾ ಸಿಂಗ್ (ರೈಲ್ವೇಸ್)-2, ತಾನ್ಯಾ ಚೌಧರಿ (ಉತ್ತರ ಪ್ರದೇಶ)-3.

ಲಾಂಗ್‌ಜಂಪ್: ಶೈಲಿ ಸಿಂಗ್ (ಉತ್ತರ ಪ್ರದೇಶ, ದೂರ: 6.41 ಮೀ.)-1, ಶೃತಿಲಕ್ಷ್ಮಿ (ಕೇರಳ)-2, ನಯನಾ ಜೇಮ್ಸ್ (ಕೇರಳ)-3

3000 ಮೀ. ಸ್ಟೀಪಲ್‌ಚೇಸ್: ಪಾರುಲ್ ಚೌಧರಿ (ರೈಲ್ವೇಸ್, ಕಾಲ: 9 ನಿ.48.28ಸೆ.)-1, ಕೋಮಲ್ (ರೈಲ್ವೇಸ್)-2, ವೈಷ್ಣವಿ ಸಾವಂತ್ (ಮಹಾರಾಷ್ಟ್ರ)-3

400 ಮೀ. ಹರ್ಡಲ್ಸ್: ಆರ್. ವಿದ್ಯಾ ರಾಮರಾಜ್ (ರೈಲ್ವೇಸ್, ಕಾಲ: 56.97ಸೆ.)-1, ಸಿಂಚಲ್ ಕಾವೇರಮ್ಮ (ಕರ್ನಾಟಕ)-2, ವೀರ್‌ಪಾಲ್ ಕೌರ್ (ಪಂಜಾಬ್)-3

4X400 ಮೀ. ರಿಲೇ: ರೈಲ್ವೇಸ್-1 (ಕಾಲ: 3 ನಿ.36.72 ಸೆ.), ಹರಿಯಾಣ-2, ಕರ್ನಾಟಕ-3

4X400 ಮೀ. ರಿಲೇಯಲ್ಲಿ ಕಂಚು ಗೆದ್ದ ಕರ್ನಾಟಕ ತಂಡದ ಸಿಂಚಲ್ ಕಾವೇರಮ್ಮ ಅರ್ಪಿತಾ, ಇಂಚರ ಮತ್ತು ಲಿಖಿತಾ

ಮುಖ್ಯಾಂಶಗಳು
- ಉತ್ತರಪ್ರದೇಶದ ಶೈಲಿ ಸಿಂಗ್‌ಗೆ ಲಾಂಗ್‌ಜಂಪ್ ಚಿನ್ನ
- 400 ಮೀ. ಹರ್ಡಲ್ಸ್‌ನಲ್ಲಿ ಸಿಂಚಲ್ ಮಿಂಚು
- ಅಭಿನ್ ದೇವಾಡಿಗಗೆ 200 ಮೀ. ಓಟದಲ್ಲಿ ಪದಕ

ವಿಂಡೀಸ್ ಆಸೆ ಜೀವಂತ

ಟಿ20 ವಿಶ್ವಕಪ್ ಕ್ರಿಕೆಟ್: ಜಿಂಬಾಬ್ವೆ ಎದುರು ಜಯಭೇರಿ

ಹೋಬರ್ಟ್ (ಪಿಟಿಐ): ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವು ಜಿಂಬಾಬ್ವೆ ತಂಡವನ್ನು ಮಣಿಸಿ, ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 12 ಹಂತ ತಲುಪುವ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಬುಧವಾರ ಇಲ್ಲಿ ನಡೆದ ಬಿ ಗುಂಪಿನ ಅರ್ಹತಾ ಹಣಾಹಣಿಯಲ್ಲಿ ನಿಕೋಲಸ್ ಪೂರನ್ ನಾಯಕತ್ವದ ವೆಸ್ಟ್ ಇಂಡೀಸ್ 31 ರನ್‌ಗಳಿಂದ ಜಿಂಬಾಬ್ವೆ ತಂಡವನ್ನು ಸೋಲಿಸಿತು. ಮೊದಲ ಪಂದ್ಯದಲ್ಲಿ ಸ್ಕಾಟ್ಲೆಂಡ್ ಎದುರು ಆಘಾತ ಅನುಭವಿಸಿದ್ದ ವಿಂಡೀಸ್ ಈ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿತ್ತು.

ಬೆಲ್ಲೆರಿವ್ ಓವಲ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟ್ ಮಾಡಿದ ಪೂರನ್ ಪಡೆ 20 ಓವರ್‌ಗಳಲ್ಲಿ ಏಳು ವಿಕೆಟ್ ಕಳೆದುಕೊಂಡು 153 ರನ್ ಪೇರಿಸಿತು. ಬಳಿಕ ಎದುರಾಳಿಯನ್ನು 19ನೇ ಓವರ್‌ನಲ್ಲಿ 122 ರನ್‌ಗಳಿಗೆ ಆಲೌಟ್ ಮಾಡಿತು.

ಗುರಿ ಬೆನ್ನತ್ತಿದ ಜಿಂಬಾಬ್ವೆ ಉತ್ತಮ ಆರಂಭವನ್ನೇ ಪಡೆದಿತ್ತು. ವೆಸ್ಲಿ ಮಧೆವೆರ್ (27) ಮತ್ತು ನಾಯಕ ರೆಜಿಸ್ ಚಕಾಬ್ವಾ (13) ಮೊದಲ ವಿಕೆಟ್ ಜೊತೆಯಾಟದಲ್ಲಿ 29 ರನ್ ಸೇರಿಸಿದರು. ಆದರೆ ಬಳಿಕ ನಿರಂತರವಾಗಿ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು.

ಮಧ್ಯಮ ಕ್ರಮಾಂಕದಲ್ಲಿ ಲ್ಯೂಕ್ ಜಾಂಗ್ವೆ (29) ಪ್ರಯತ್ನಿಸಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ.

ವೇಗಿ ಅಲ್ಜರಿ ಜೋಸೆಫ್ (16ಕ್ಕೆ 4) ವಿಂಡೀಸ್ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಅನುಭವಿ ಆಲ್‌ರೌಂಡರ್ ಜೇಸನ್ ಹೋಲ್ಡರ್ (12ಕ್ಕೆ 3) ಕೂಡ ಕಾಣಿಕೆ ನೀಡಿದರು.

ಇದಕ್ಕೂ ಮೊದಲು ವೆಸ್ಟ್ ಇಂಡೀಸ್ ಪರ ಬ್ಯಾಟಿಂಗ್‌ನಲ್ಲಿ ಆರಂಭಿಕ ಆಟಗಾರ ಜಾನ್ಸನ್ ಚಾರ್ಲ್ಸ್ (45, 36ಎ, 4X3, 6X2) ಮಿಂಚಿದರು. ರೋವಮನ್ ಪೋವೆಲ್ (28) ಮತ್ತು ಅಕೀಲ್ ಹುಸೇನ್ (23) ಕೊಡುಗೆ ನೀಡಿದರು.

ಸಿಕಂದರ್ ರಾಜಾ (19ಕ್ಕೆ 3) ಜಿಂಬಾಬ್ವೆ ಬೌಲಿಂಗ್‌ನಲ್ಲಿ ಸ್ವಲ್ಪ ಪರಿಣಾಮಕಾರಿ ಎನಿಸಿದರು.

ವಿಕೆಟ್ ಗಳಿಸಿದ ಅಲ್ಜರಿ ಜೋಸೆಫ್ ಸಂಭ್ರಮ– ಎಎಫ್‌ಪಿ ಚಿತ್ರ

ಬಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಐರ್ಲೆಂಡ್ ತಂಡವು ಆರು ವಿಕೆಟ್‌ಗಳಿಂದ ಸ್ಕಾಟ್ಲೆಂಡ್ ತಂಡವನ್ನು ಪರಾಭವಗೊಳಿಸಿತು.

ವೆಸ್ಟ್ ಇಂಡೀಸ್ ಗೆಲುವಿನೊಂದಿಗೆ ಬಿ ಗುಂಪಿನ ಎಲ್ಲ ತಂಡಗಳೂ ತಲಾ ಎರಡು ಪಾಯಿಂಟ್ಸ್ ಹೊಂದಿದ್ದು, ಸೂಪರ್ 12 ಹಂತ ತಲುಪಲು ತೀವ್ರ ಪೈಪೋಟಿ ಏರ್ಪಟ್ಟಿದೆ.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 7ಕ್ಕೆ 153 (ಜಾನ್ಸನ್ ಚಾರ್ಲ್ಸ್ 45, ಎವಿನ್ ಲೂಯಿಸ್ 15, ರೋವಮನ್ ಪೋವೆಲ್ 28, ಅಕೀಲ್ ಹುಸೇನ್ 23; ಸಿಕಂದರ್ ರಾಜಾ 19ಕ್ಕೆ 3, ಬ್ಲೆಸಿಂಗ್ ಮುಜರಬಾನಿ 38ಕ್ಕೆ 2). ಜಿಂಬಾಬ್ವೆ: 18.2 ಓವರ್‌ಗಳಲ್ಲಿ 122 (ವೇಸ್ಲಿ ಮಧೆವೆರ್ 27, ರೆಗಿಸ್ ಚಕಾಬ್ವಾ 13, ಸಿಕಂದರ್ ರಾಜಾ 14, ರ್‍ಯಾನ್ ಬರ್ಲ್ 17, ಲ್ಯೂಕ್ ಜಾಂಗ್ವೆ 29; ಅಲ್ಜರಿ ಜೋಸೆಫ್ 16ಕ್ಕೆ 4, ಜೇಸನ್ ಹೋಲ್ಡರ್ 12ಕ್ಕೆ 3; ಒಬೆದ್ ಮೆಕಾಯ್ 19ಕ್ಕೆ 1). ಫಲಿತಾಂಶ: ವೆಸ್ಟ್ ಇಂಡೀಸ್ ತಂಡಕ್ಕೆ 31 ರನ್‌ಗಳ ಗೆಲುವು.

ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 5ಕ್ಕೆ 176 (ಮೈಕೆಲ್ ಜೋನ್ಸ್ 86, ಮ್ಯಾಥ್ಯು ಕ್ರಾಸ್ 28, ರಿಚಿ ಬ್ಯಾರಿಂಗ್ಟನ್ 37; ಜೋಶ್ ಲಿಟಲ್ 30ಕ್ಕೆ 1, ಮಾರ್ಕ್ ಅಡೈರ್ 23ಕ್ಕೆ 1, ಕರ್ಟಿಸ್ ಕ್ಯಾಂಪರ್ 9ಕ್ಕೆ 2). ಐರ್ಲೆಂಡ್: 19 ಓವರ್‌ಗಳಲ್ಲಿ 4ಕ್ಕೆ 180 (ಲೋರ್ಸನ್ ಟಕ್ಕರ್ 20, ಕರ್ಟಿಸ್ ಕ್ಯಾಂಪರ್ ಔಟಾಗದೆ 72, ಜಾರ್ಜ್ ಡಾಕ್ರೆಲ್ ಔಟಾಗದೆ 39; ಮಾರ್ಕ್ ವ್ಯಾಟ್ 39ಕ್ಕೆ 1, ಬ್ರಾಡ್ ವೀಲ್ 25ಕ್ಕೆ 1, ಸೂಫಿಯಾನ್ ಶರೀಫ್ 32ಕ್ಕೆ 1, ಮೈಕಲ್ ಲೀಸ್ಕ್ 16ಕ್ಕೆ 1). ಫಲಿತಾಂಶ: ಐರ್ಲೆಂಡ್ ತಂಡಕ್ಕೆ ಆರು ವಿಕೆಟ್‌ಗಳ ಜಯ.

ತುರ್ತುಸಭೆ ನಡೆಸಲು ಎಸಿಸಿಗೆ ಪಿಸಿಬಿ ಮನವಿ

‘ಈ ಹೇಳಿಕೆ ನಿರಾಶೆ ಉಂಟುಮಾಡಿದೆ. ಎಸಿಸಿ ಅಥವಾ ನಮ್ಮ ಜತೆ ಸಮಾಲೋಚನೆ ನಡೆಸದೆಯೇ ಏಕಪಕ್ಷೀಯ ಹೇಳಿಕೆ ನೀಡಲಾಗಿದೆ’ ಎಂದಿದೆ ಪಿಸಿಬಿ.

‘ಶಾ ಹೇಳಿಕೆಯಿಂದ ಕ್ರಿಕೆಟ್ ಸಮುದಾಯದಲ್ಲಿ ಒಡಕು’

ಲಾಹೋರ್ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ), ‘ಅಂತಹ ಹೇಳಿಕೆಗಳು ಏಷ್ಯನ್ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್ ಸಮುದಾಯದಲ್ಲಿ ಒಡಕು ಉಂಟುಮಾಡಲಿದೆ’ ಎಂದು ಎಚ್ಚರಿಸಿದೆ.

‘ಭಾರತ ತಂಡ 2023ರ ಏಷ್ಯಾಕಪ್‌ನಲ್ಲಿ ಆಡಲು ಪಾಕ್‌ಗೆ ತೆರಳುವುದಿಲ್ಲ. ಟೂರ್ನಿಯನ್ನು ಪಾಕ್ ಬದಲು ತಟಸ್ಥ ತಾಣದಲ್ಲಿ ಆಯೋಜಿಸಲಾಗುವುದು’ ಎಂದಿದ್ದರು ಜಯ್ ಶಾ.

ಶಾ ಅವರು ಮಂಗಳವಾರ ನೀಡಿದ್ದ ಹೇಳಿಕೆಗೆ ಇದೇ ಮೊದಲ ಬಾರಿ ಅಧಿಕೃತವಾಗಿ ಪ್ರತಿಕ್ರಿಯಿಸಿರುವ ಪಿಸಿಬಿ, ‘ಇಂತಹ ಹೇಳಿಕೆಗಳು ಒಟ್ಟಾರೆಯಾಗಿ ಕ್ರಿಕೆಟ್ ವಲಯದಲ್ಲಿ ಒಡಕು ಮೂಡಿಸಲಿದೆ. 2023 ರಲ್ಲಿ ಭಾರತ ಆತಿಥ್ಯ ವಹಿಸಲಿರುವ ಏಕದಿನ ವಿಶ್ವಕಪ್ ಟೂರ್ನಿ ಹಾಗೂ 2024 ರಿಂದ 2031ರ ಅವಧಿಯಲ್ಲಿ ಭಾರತದಲ್ಲಿ ನಡೆಯಲಿರುವ ಎಲ್ಲ ಐಸಿಸಿ ಟೂರ್ನಿಗಳಲ್ಲಿ ಪಾಕಿಸ್ತಾನದ ಪಾಲ್ಗೊಳ್ಳುವಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ’ ಎಂದು ಹೇಳಿದೆ.

‘ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನಿಂದ (ಎಸಿಸಿ) ನಮಗೆ ಇದುವರೆಗೆ ಯಾವುದೇ ಸ್ಪಷ್ಟೀಕರಣ ಬಂದಿಲ್ಲ. ಇಂತಹ ಸೂಕ್ಷ್ಮ ವಿಷಯದ ಬಗ್ಗೆ ಚರ್ಚಿಸಲು ಶೀಘ್ರದಲ್ಲೇ ತುರ್ತು ಸಭೆ ನಡೆಸುವಂತೆ ಎಸಿಸಿಗೆ ಮನವಿ ಮಾಡಿದ್ದೇವೆ’ ಎಂದಿದೆ.

ವಿವಾದ ಬಗೆಹರಿಯುವ ವಿಶ್ವಾಸ: ಬಿಸಿಸಿಐ ಮತ್ತು ಪಿಸಿಬಿ ನಡುವಿನ ತಿಕ್ಕಾಟದ ಬಗ್ಗೆ ಐಸಿಸಿ ಇದುವರೆಗೆ ಯಾವುದೇ ಹೇಳಿಕೆ ನೀಡಿಲ್ಲ. ಆದರೆ ಈ ವಿವಾದ ಶೀಘ್ರದಲ್ಲೇ ಬಗೆಹರಿಯಲಿದೆ ಎಂಬ ವಿಶ್ವಾಸವನ್ನು ಎಸಿಸಿಯ ಹಿರಿಯ ಅಧಿಕಾರಿಯೊಬ್ಬರು ವ್ಯಕ್ತಪಡಿಸಿದ್ದಾರೆ.

‘ಏಷ್ಯಾಕಪ್‌ನ ಅತಿದೊಡ್ಡ ಪಂದ್ಯವೆಂದರೆ ಭಾರತ–ಪಾಕಿಸ್ತಾನ ನಡುವಣ ಪೈಪೋಟಿ. ಇವೆರಡರಲ್ಲಿ ಒಂದು ತಂಡ ಆಡದಿದ್ದರೆ, ಟೂರ್ನಿ ನಡೆಸುವುದರಲ್ಲಿ ಅರ್ಥವಿಲ್ಲ. ಏಷ್ಯಾಕಪ್‌ಗೆ ಇನ್ನೂ ಸಾಕಷ್ಟು ಸಮಯವಿದ್ದು, ಆ ವೇಳೆಗೆ ವಿವಾದ ಬಗೆಹರಿಯುವ ವಿಶ್ವಾಸವಿದೆ. ಬಿಸಿಸಿಐ ತನ್ನ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸದಿದ್ದರೆ, ತಟಸ್ಥ ತಾಣದಲ್ಲಿ ಟೂರ್ನಿ ಆಯೋಜಿಸುವುದೇ ನಮ್ಮ ಮುಂದಿರುವ ಅತ್ಯುತ್ತಮ ಆಯ್ಕೆ’ ಎಂದಿದ್ದಾರೆ.

ಕಬಡ್ಡಿ: ಗೆದ್ದು ಬೀಗಿದ ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭರತ್ ಮತ್ತು ವಿಕಾಸ್ ಖಂಡೋಲ ಅವರ ಚುರುಕಿನ ಆಟದ ನೆರವಿನಿಂದ ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಮೂರನೇ ಗೆಲುವು ದಾಖಲಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬುಲ್ಸ್ 45–28 ರಲ್ಲಿ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು. ಐದು ಪಂದ್ಯಗಳಿಂದ 16 ಪಾಯಿಂಟ್ಸ್ ಸಂಗ್ರಹಿಸಿರುವ ಬುಲ್ಸ್, ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಮೊದಲಾರ್ಧದಲ್ಲಿ 18–12 ರಲ್ಲಿ ಮುನ್ನಡೆ ಸಾಧಿಸಿದ್ದ ಬುಲ್ಸ್ ತಂಡದ ಪರ ಭರತ್ 12 ಹಾಗೂ ವಿಕಾಸ್ 7 ಪಾಯಿಂಟ್ಸ್ ಗಳಿಸಿದರು.

ಜೈಂಟ್ಸ್ ಜಯಭೇರಿ: ದಿನದ ಮೊದಲ ಪಂದ್ಯದಲ್ಲಿ ನಾಯಕ ಚಂದ್ರನ್ ರಂಜಿತ್ ಅವರ ಸೊಗಸಾದ ಆಟದ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡ 51–45 ರಲ್ಲಿ ಯು.ಪಿ ಯೋಧಾಸ್ ತಂಡವನ್ನು ಮಣಿಸಿತು.

ಮೊದಲಾರ್ಧ ಕೊನೆಗೊಂಡಾಗ 19–21 ರಲ್ಲಿ ಹಿನ್ನಡೆಯಲ್ಲಿದ್ದ ಜೈಂಟ್ಸ್ ಎರಡನೇ ಅವಧಿಯಲ್ಲಿ ತಿರುಗೇಟು ನೀಡಿತು. ರಂಜಿತ್ 20 ಪಾಯಿಂಟ್ಸ್ ಸಂಗ್ರಹಿಸಿದರು. ಅವರಿಗೆ ಉತ್ತಮ ಸಾಥ್ ನೀಡಿದ ರಾಕೇಶ್ 16 ಪಾಯಿಂಟ್ಸ್ ಕಲೆಹಾಕಿದರು.

ಯೋಧಾಸ್ ತಂಡಕ್ಕೆ ಪ್ರದೀಪ್ ನರ್ವಾಲ್ 17 ಹಾಗೂ ಸುರೇಂದರ್ ಗಿಲ್ 14 ಪಾಯಿಂಟ್ಸ್ ಗಳಿಸಿದರು.

ತಮಿಳ್ ತಲೈವಾಸ್ ಮತ್ತು ಬೆಂಗಳೂರು ಬುಲ್ಸ್ ಪೈಪೋಟಿ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	5	5	0	0	25
ಜೈಪುರ	5	4	1	0	21
ಬೆಂಗಳೂರು	5	3	2	0	16
ಬೆಂಗಾಲ್	5	3	2	0	15
ಪುಣೇರಿ	5	2	2	1	14
ಗುಜರಾತ್	5	2	2	1	14

ಭಾರತ– ನ್ಯೂಜಿಲೆಂಡ್ ಅಭ್ಯಾಸ ಪಂದ್ಯ ರದ್ದು

ಬ್ರಿಸ್ಬೇನ್ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಇಲ್ಲಿನ ಗಾಬಾ ಕ್ರೀಡಾಂಗಣದಲ್ಲಿ ಬುಧವಾರ ನಡೆಯಬೇಕಿದ್ದ ಟಿ20 ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯ ಮಳೆಯಿಂದಾಗಿ ಒಂದೂ ಎಸೆತ ಕಾಣದೆ ರದ್ದುಗೊಂಡಿತು.

ಇದೇ ತಾಣದಲ್ಲಿ ಬುಧವಾರ ಬೆಳಿಗ್ಗೆ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ತಂಡಗಳ ನಡುವೆ ಅಭ್ಯಾಸ ಪಂದ್ಯ ಆಯೋಜಿಸಲಾಗಿತ್ತು. ಅಫ್ಗನ್ ತಂಡ ಪಾಕ್ ಗೆಲುವಿಗೆ 155 ರನ್‌ಗಳ ಗುರಿ ನೀಡಿತ್ತು. ಆದರೆ ಪಾಕಿಸ್ತಾನದ ಇನಿಂಗ್ಸ್ ವೇಳೆ ಮಳೆ ಸುರಿದು ಪಂದ್ಯ ಅರ್ಧದಲ್ಲೇ ಮೊಟಕುಗೊಂಡಿತು. ಮಧ್ಯಾಹ್ನದ ಬಳಿಕವೂ ಮಳೆ ಮುಂದುವರಿದ ಕಾರಣ ಭಾರತ– ಕಿವೀಸ್ ಪಂದ್ಯವೂ ನಡೆಯಲಿಲ್ಲ. ಸೋಮವಾರ ನಡೆದ ಮೊದಲ ಅಭ್ಯಾಸ ಪಂದ್ಯದಲ್ಲಿ ಭಾರತ, ಆರು ರನ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಮಣಿಸಿತ್ತು.

ರೋಹಿತ್ ಶರ್ಮ ಬಳಗ ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಭಾನುವಾರ, ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

23 ವರ್ಷದೊಳಗಿನವರ ವಿಶ್ವ ಕುಸ್ತಿಯಲ್ಲಿ ಕಂಚು

ಸಾಜನ್ ಐತಿಹಾಸಿಕ ಸಾಧನೆ

ಪೊಂತೆವೇದ್ರಾ, ಸ್ಪೇನ್ (ಪಿಟಿಐ): ಭಾರತದ ಗ್ರೀಕೊ ರೋಮನ್ ಕುಸ್ತಿಪಟು ಸಾಜನ್ ಭಾನ್ವಾಲಾ ಅವರು ಇಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.

ಈ ವಯೋವರ್ಗದ ವಿಶ್ವ ಚಾಂಪಿಯನ್‌ಷಿಪ್‌ನ ಗ್ರೀಕೊ ರೋಮನ್ ವಿಭಾಗದಲ್ಲಿ ಪದಕ ಗೆದ್ದ ಭಾರತದ ಮೊದಲ ಕುಸ್ತಿಪಟು ಎಂಬ ಗೌರವ ಅವರಿಗೆ ಒಲಿಯಿತು.

ಕಂಚಿನ ಪದಕ ನಿರ್ಣಯಿಸಲು ಬುಧವಾರ ನಡೆದ ಹಣಾಹಣಿಯಲ್ಲಿ ಅವರು ಉಕ್ರೇನ್‌ನ ದಿಮಿತ್ರೊ ವಸೆಟ್‌ಸ್ಕಿ ವಿರುದ್ಧ ಗೆದ್ದರು.

ಸಾಜನ್

ಜಿದ್ದಾಜಿದ್ದಿನ ಹೋರಾಟದಲ್ಲಿ ದಿಮಿತ್ರೊ 10–4 ಪಾಯಿಂಟ್ಸ್‌ಗಳ ಮುನ್ನಡೆ ಸಾಧಿಸಿದ್ದರು. ತಿರುಗೇಟು ನೀಡಿದ ಸಾಜನ್ ಕೊನೆಯ 35 ಸೆಕೆಂಡುಗಳು ಇರುವಾಗ ಮೇಲಿಂದ ಮೇಲೆ ಪಾಯಿಂಟ್ಸ್ ಕಲೆಹಾಕಿ 10–10 ರಲ್ಲಿ ಸಮಬಲ ಸಾಧಿಸಿದರು.

ಟೈಬ್ರೇಕರ್ ನಿಯಮದಂತೆ ಕೊನೆಯದಾಗಿ ಪಾಯಿಂಟ್ ಗಳಿಸಿದ ಸಾಜನ್ ಅವರನ್ನು ವಿಜೇತ ಎಂದು ಘೋಷಿಸಲಾಯಿತು.

ಸಾಜನ್ ಮೊದಲ ಸುತ್ತಿನಲ್ಲಿ 3–0 ರಲ್ಲಿ ಲಿಥುವೇನಿಯದ ಐಸ್ಟಿಸ್ ಲುಗ್‌ಮಿನಸ್ ಅವರನ್ನು ಮಣಿಸಿದ್ದರು. ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಮಾಲ್ಡೋವಾದ ಅಲೆಕ್ಸಾಂಡ್ರಿನ್ ಗುಟು ಕೈಯಲ್ಲಿ ಸೋತರು.

ಆದರೆ ಗುಟು ಅವರು ಫೈನಲ್ ಪ್ರವೇಶಿಸಿದ್ದರಿಂದ, ಭಾರತದ ಕುಸ್ತಿಪಟುಗೆ ‘ರಿಪೆಜ್’ನಲ್ಲಿ ಸ್ಪರ್ಧಿಸುವ ಅವಕಾಶ ಸಿಕ್ಕಿತು. ಅಲ್ಲಿ ಕಜಕಸ್ತಾನದ ರಸುಲ್ ಜುನಿಸ್ ವಿರುದ್ಧ ಗೆದ್ದು, ಕಂಚಿನ ಪದಕಕ್ಕಾಗಿ ಪೈಪೋಟಿ ನಡೆಸುವ ಅರ್ಹತೆ ಗಿಟ್ಟಿಸಿಕೊಂಡರು.

ಏಮ್‌ಚೆಸ್ ಟೂರ್ನಿ: ಭಾರತದ ಸವಾಲು ಅಂತ್ಯ

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿ.ಗುಕೇಶ್, ಅರ್ಜುನ್ ಎರಿಗೈಸಿ ಮತ್ತು ವಿದಿತ್ ಗುಜರಾತಿ ಅವರು ಏಮ್‌ಚೆಸ್ ರ್‍ಯಾಪಿಡ್ ಆನ್‌ಲೈನ್ ಚೆಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಸೋತರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿದೆ. ಗುಕೇಶ್, ಬುಧವಾರ 1.5–2.5 ಪಾಯಿಂಟ್‌ಗಳಿಂದ ಹಂಗರಿಯ ರಿಚರ್ಡ್ ರಾಪೋರ್ಟ್ ಕೈಯಲ್ಲಿ ಸೋತರು.

ಅರ್ಜುನ್, ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಎದುರು 0.5–2.5ರಿಂದ, ವಿದಿತ್ 0.5–2. ರಿಂದ ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ದುಡಾ ಎದುರು ಸೋತರು.

ವಿಶ್ವ ಶೂಟಿಂಗ್: ರಮಿತಾಗೆ 10 ಮೀ. ಏರ್ ರೈಫಲ್ ಚಿನ್ನ

ಕೈರೊ (ಪಿಟಿಐ): ಭಾರತದ ರಮಿತಾ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಜೂನಿಯರ್ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಈಜಿಪ್ಟ್ ಇಂಟರ್‌ನ್ಯಾಷನಲ್ ಒಲಿಂಪಿಕ್ ಸಿಟಿ ಶೂಟಿಂಗ್ ರೇಂಜ್‌ನಲ್ಲಿ ಬುಧವಾರ ಚಿನ್ನದ ಪದಕ ನಿರ್ಧರಿಸಲು ನಡೆದ ಸ್ಪರ್ಧೆಯಲ್ಲಿ ಅವರು 16–12 ರಲ್ಲಿ ಚೀನಾದ ಯಿಂಗ್ ಶೇನ್ ಅವರನ್ನು ಮಣಿಸಿದರು. ತಿಲೋತ್ತಮ ಸೇನ್ ಅವರು ಈ ವಿಭಾಗದಲ್ಲಿ ಕಂಚು ಜಯಿಸಿದರು.

50 ಮೀ. ಪಿಸ್ತೂಲ್ ಜೂನಿಯರ್ ಮಹಿಳೆಯರ ವಿಭಾಗದ ಮೂರೂ ಪದಕಗಳನ್ನು ಭಾರತ ಗೆದ್ದುಕೊಂಡಿತು. ದಿವಾಂಶಿ ಅವರು 547 ಸ್ಕೋರ್‌ಗಳೊಂದಿಗೆ ಚಿನ್ನ ಗೆದ್ದರೆ, ವರ್ಷಾ ಸಿಂಗ್ (539) ಮತ್ತು ತಿಯಾನಾ (523) ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ 25 ಮೀ. ಸ್ಟ್ಯಾಂಡರ್ಡ್ ಪಿಸ್ತೂಲ್ ವಿಭಾಗದಲ್ಲಿ ರಿಧಂ ಸಂಗ್ವಾನ್ 573 ಸ್ಕೋರ್‌ಗಳೊಂದಿಗೆ ಬೆಳ್ಳಿ ಜಯಿಸಿದರು. 575 ಸ್ಕೋರ್ ಮಾಡಿದ ಚೀನಾದ ಕ್ಸಿಯಾವೊ ಜಿಯಾರುಯಿಕ್ಸುವಾನ್ ಚಿನ್ನ ಪಡೆದರು. ಪುರುಷರ 25 ಮೀ. ಸ್ಟ್ಯಾಂಡರ್ಡ್ ಪಿಸ್ತೂಲ್ ಸ್ಪರ್ಧೆಯಲ್ಲಿ ವಿಜಯವೀರ್ (574) ಕಂಚು ಗೆದ್ದುಕೊಂಡರು.

ಏಳನೇ ದಿನದ ಸ್ಪರ್ಧೆಗಳ ಬಳಿಕ ಭಾರತ 10 ಚಿನ್ನ, 5 ಬೆಳ್ಳಿ ಮತ್ತು 10 ಕಂಚುಗಳೊಂದಿಗೆ ಒಟ್ಟು 25 ಪದಕಗಳನ್ನು ಗೆದ್ದು ಚೀನಾದ ಬಳಿಕ ಎರಡನೇ ಸ್ಥಾನದಲ್ಲಿದೆ.

ರಮಿತಾ

ಬ್ಯಾಡ್ಮಿಂಟನ್: ಭಾರತಕ್ಕೆ ಜಯ

ನವದೆಹಲಿ (ಪಿಟಿಐ): ಭಾರತ, ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಸ್ಲೊವೇನಿಯಾ ಎದುರು ಗೆದ್ದಿತು.

ಸ್ಪೇನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಭಾರತ 5–0ಯಿಂದ ಗೆದ್ದಿತು. ಭಾರತ ತಂಡದಲ್ಲಿ ವಿಘ್ನೇಶ್ ತತಿನೇನಿ, ಶ್ರೀನಿಧಿ ನಾರಾಯಣ್, ಆಯುಷ್ ಶೆಟ್ಟಿ, ನಿಕೋಲಸ್ ರಾಜ್, ತುಷಾರ್, ರಕ್ಷಿತಾ ರಾಮರಾಜ್ ಮತ್ತು ಶ್ರೇಯಾ ಬಾಲಾಜಿ ಇದ್ದಾರೆ.

ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್: ಸಾತ್ವಿಕ್–ಚಿರಾಗ್ ಜಯಭೇರಿ; ಸೈನಾ ನೆಹ್ವಾಲ್‌ಗೆ ನಿರಾಸೆ

ಪ್ರೀ ಕ್ವಾರ್ಟರ್‌ಗೆ ಲಕ್ಷ್ಯ ಸೇನ್, ಪ್ರಣಯ್

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತದ ಯುವ ಆಟಗಾರ ಲಕ್ಷ್ಯ ಸೇನ್ ಮತ್ತು ಎಚ್.ಎಸ್.ಪ್ರಣಯ್ ಅವರು ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಲಕ್ಷ್ಯ 21–16, 21–12 ರಲ್ಲಿ ಇಂಡೊನೇಷ್ಯಾದ ಆಂಥೋನಿ ಸಿನಿಸುಕ ಗಿಂಟಿಂಗ್ ವಿರುದ್ಧ ಗೆದ್ದರು. ಎರಡೂ ಗೇಮ್‌ಗಳಲ್ಲಿ ಶಿಸ್ತಿನ ಆಟವಾಡಿದ ಅವರು 39 ನಿಮಿಷಗಳಲ್ಲಿ ಪಂದ್ಯ ತಮ್ಮದಾಗಿಸಿಕೊಂಡರು.

ಗಿಂಟಿಂಗ್ ಎದುರು ಸೇನ್‌ಗೆ ಈ ವರ್ಷ ದೊರೆತ 3ನೇ ಗೆಲುವು ಇದು. ಮಾರ್ಚ್‌ನಲ್ಲಿ ನಡೆದಿದ್ದ ಜರ್ಮನ್ ಓಪನ್ ಮತ್ತು ಮೇ ತಿಂಗಳಲ್ಲಿ ನಡೆದಿದ್ದ ಥಾಮಸ್ ಕಪ್ ಟೂರ್ನಿಯಲ್ಲೂ ಅವರು ಗಿಂಟಿಂಗ್‌ಗೆ ಸೋಲುಣಿಸಿದ್ದರು.

ಲಕ್ಷ್ಯ, ಕ್ವಾರ್ಟರ್ ಫೈನಲ್‌ನಲ್ಲಿ ಪ್ರಣಯ್ ಅವರ ಸವಾಲು ಎದುರಿಸಲಿದ್ದಾರೆ. ಪ್ರಣಯ್ 21–13, 22–20 ರಲ್ಲಿ ಚೀನಾದ ಜಾವೊ ಜುನ್ ಪೆಂಗ್ ಅವರನ್ನು ಪರಾಭವಗೊಳಿಸಿದರು. ಈ ವರ್ಷ ಜೂನ್‌ನಲ್ಲಿ ಇಂಡೊನೇಷ್ಯಾ ಓಪನ್ ಮತ್ತು ಆಗಸ್ಟ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಣಯ್, ಇದೇ ಎದುರಾಳಿಗೆ ಸೋತಿದ್ದರು.

ಸೈನಾಗೆ ನಿರಾಸೆ: ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಮೊದಲ ಸುತ್ತಿನಲ್ಲೇ ಮುಗ್ಗರಿಸಿದರು. ಅವರು 17–21, 21–19, 11–21 ರಲ್ಲಿ ಚೀನಾದ ಜಾಂಗ್ ಯಿ ಮನ್ ಎದುರು ಸೋತರು. ಇದರೊಂದಿಗೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಸವಾಲಿಗೆ ತೆರೆಬಿದ್ದಿದೆ.

ಸಾತ್ವಿಕ್- ಚಿರಾಗ್ ಜೋಡಿಗೆ ಜಯ: ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಭರವಸೆ ಎನಿಸಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಶುಭಾರಂಭ ಮಾಡಿದರು. ಈ ಜೋಡಿಯು 21–15, 21–19 ರಲ್ಲಿ ಕೊರಿಯಾದ ಕಾಂಗ್ ಮಿನ್ ಹ್ಯೂಕ್-ಸಿಯೊ ಸುಂಗ್ ಜಾಯೆ ಅವರನ್ನು ಮಣಿಸಿತು.

ಲಕ್ಷ್ಯ ಸೇನ್

176 ತರಬೇತುದಾರರ ಹುದ್ದೆ ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡಾಪಟುಗಳಿಗೆ ತರಬೇತಿ ನೀಡುವುದೂ ಸೇರಿದಂತೆ ಕ್ರೀಡಾ ಇಲಾಖೆಯ ಕಾರ್ಯಕ್ರಮಗಳನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನ ಮಾಡುವುದಕ್ಕಾಗಿ 176 ಕ್ರೀಡಾ ತರಬೇತುದಾರರ ಹುದ್ದೆಗಳನ್ನು ಸೃಜಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದ ಎಲ್ಲ ತಾಲ್ಲೂಕುಗಳಿಗೂ ತಲಾ ಒಬ್ಬ ಕ್ರೀಡಾ ತರಬೇತುದಾರರನ್ನು ನೇಮಿಸುವ ಉದ್ದೇಶದಿಂದ ಹಾಲಿ ಇರುವ 12 ಹುದ್ದೆಗಳ ಜತೆಗೆ ಹೊಸದಾಗಿ 235 ಹುದ್ದೆಗಳಿಗೆ ಮಂಜೂರಾತಿ ನೀಡುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಆರ್ಥಿಕ ಇಲಾಖೆಯು ಹಳೆಯ 176 ತಾಲ್ಲೂಕುಗಳಿಗೆ ಸೀಮಿತವಾಗಿ ಕ್ರೀಡಾ ತರಬೇತುದಾರರ ಹುದ್ದೆ ಸೃಜಿಸಲು ಮಾತ್ರ ಒಪ್ಪಿಗೆ ನೀಡಿತ್ತು.

ಕ್ರೀಡಾ ತರಬೇತುದಾರರ ಹುದ್ದೆಗಳಿಗೆ ನೇಮಕಗೊಳ್ಳುವವರು ತಾಲ್ಲೂಕು ಮಟ್ಟದಲ್ಲಿ ಇಲಾಖೆಯ ಯೋಜನೆ, ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿ ನಿರ್ವಹಿಸಬೇಕು. ಗ್ರಾಮೀಣ ಮತ್ತು ಸಾಂಪ್ರದಾಯಿಕ ಕ್ರೀಡೆಗಳು ಸೇರಿದಂತೆ ಕ್ರೀಡಾ ಚಟುವಟಿಕೆಗಳಿಗೆ ತರಬೇತಿ ನೀಡಬೇಕು. ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ವಹಣೆ ಮಾಡಬೇಕು. ವಿವಿಧ ಶಿಕ್ಷಣ ಸಂಸ್ಥೆಗಳ ದೈಹಿಕ ಶಿಕ್ಷಣ ಶಿಕ್ಷಕರ ಜತೆ ಸಮನ್ವಯ ಸಾಧಿಸಬೇಕು ಎಂದು ಅ.10ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

‘235 ಕ್ರೀಡಾ ತರಬೇತುದಾರರ ಹುದ್ದೆ ಸೃಜಿಸಲು ಪ್ರಸ್ತಾವ ಸಲ್ಲಿಸಲಾಗಿತ್ತು. ಈಗ 176 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ’ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣ ಗೌಡ ಅವರು ತಿಳಿಸಿದ್ದಾರೆ.

ಕ್ರಿಕೆಟ್: ಕರ್ನಾಟಕ ತಂಡಕ್ಕೆ ವೀರೋಚಿತ ಸೋಲು

ಬೆಂಗಳೂರು: ಕರ್ನಾಟಕ ತಂಡದವರು ಬಿಸಿಸಿಐ 19 ವರ್ಷದೊಳಗಿನವರ ವಿನೂ ಮಂಕಡ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ರಾಜಸ್ಥಾನ ಎದುರು ಎರಡು ರನ್‌ಗಳಿಂದ ಸೋತರು.

ಕೇರಳದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ 46.5 ಓವರ್‌ಗಳಲ್ಲಿ 214 ರನ್ ಗಳಿಸಿ ಆಲೌಟ್ ಆಯಿತು. ಕರ್ನಾಟಕ 48.4 ಓವರ್ ಗಳಲ್ಲಿ 212 ರನ್‌ಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸುದ್ದಿ

ಸಾಯ್ ಕೇಂದ್ರಗಳಿಗೆ ₹ 25 ಕೋಟಿ ಅನುದಾನ

ನವದೆಹಲಿ (ಪಿಟಿಐ): ದೇಶದ ವಿವಿಧೆಡೆಯಿರುವ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರಗಳಲ್ಲಿನ ಸಲಕರಣೆಗಳನ್ನು ಮೇಲ್ದರ್ಜೆಗೇರಿಸಲು ₹ 25 ಕೋಟಿ ವಿಶೇಷ ಅನುದಾನವನ್ನು ಕೇಂದ್ರ ಕ್ರೀಡಾ ಸಚಿವಾಲಯ ಮಂಜೂರು ಮಾಡಿದೆ.

ಅಥ್ಲೀಟ್‌ಗಳ ತರಬೇತಿಗೆ ಆಧುನಿಕ ಕ್ರೀಡಾ ಸಲಕರಣೆಗಳನ್ನು ಒದಗಿಸುವ ತೀರ್ಮಾನವನ್ನು ಭಾರತ ಕ್ರೀಡಾ ಪ್ರಾಧಿಕಾರದ 56ನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು. ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಾಯ್ ಕೇಂದ್ರಗಳಲ್ಲಿ ಬಳಕೆಯಾಗದೇ ಇರುವ ಮೂಲಸೌಕರ್ಯಗಳನ್ನು ಕ್ರೀಡೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಳಸುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ನಿರ್ಧಾರವನ್ನೂ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ.

ಫುಟ್‌ಬಾಲ್: ಅರ್ಹತೆ ಪಡೆಯಲು ಭಾರತ ವಿಫಲ

ಕುವೈತ್ ಸಿಟಿ (ಪಿಟಿಐ): ಭಾರತ ತಂಡ ಎಎಫ್‌ಸಿ 20 ವರ್ಷದೊಳಗಿನವರ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ 2–1 ಗೋಲುಗಳಿಂದ ಕುವೈತ್ ತಂಡವನ್ನು ಮಣಿಸಿತು. ಆದರೂ ಮುಂದಿನ ವರ್ಷ ನಡೆಯಲಿರುವ ಎಎಫ್‌ಸಿ ಏಷ್ಯಾಕಪ್‌ಗೆ ಅರ್ಹತೆ ಪಡೆಯಲು ವಿಫಲವಾಯಿತು.

‘ಎ’ ಗುಂಪಿನಲ್ಲಿ ಭಾರತ ಮೂರನೇ ಸ್ಥಾನ ಗಳಿಸಿತು. ಮೊದಲ ಎರಡು ಸ್ಥಾನಗಳನ್ನು ಪಡೆದ ಆಸ್ಟ್ರೇಲಿಯಾ ಮತ್ತು ಇರಾಕ್ ತಂಡಗಳು ಅರ್ಹತೆ ಪಡೆದುಕೊಂಡವು.

ಭಾರತ ತಂಡ ಈ ಹಿಂದಿನ ಪಂದ್ಯಗಳಲ್ಲಿ 2–4 ಮತ್ತು 1–4 ರಲ್ಲಿ ಕ್ರಮವಾಗಿ ಇರಾಕ್ ಹಾಗೂ ಆಸ್ಟ್ರೇಲಿಯಾ ಎದುರು ಸೋಲು ಅನುಭವಿಸಿತ್ತು.

ಕುವೈತ್ ವಿರುದ್ಧ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ನಾಯಕ ತೈಸೊನ್ ಸಿಂಗ್ ಮತ್ತು ಗುರುಕೀರತ್ ಸಿಂಗ್ ಅವರು ಭಾರತ ತಂಡಕ್ಕೆ ಗೋಲು ತಂದಿತ್ತರು. ಆತಿಥೇಯ ತಂಡದ ಪರ ಸಲೇಹ್ ಅಲ್‌ಮೆಹ್ತಾಬ್ ಗೋಲು ಗಳಿಸಿದರು.

ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ 29ರಿಂದ

ಬೆಂಗಳೂರು: ಕರ್ನಾಟಕ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ಇದೇ 29ರಿಂದ ನವೆಂಬರ್ 5ರವರೆಗೆ ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಆಯೋಜಿಸಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಪುರುಷ ಮತ್ತು ಮಹಿಳೆಯರಿಗಾಗಿ ಈ ಚಾಂಪಿಯನ್‌ಷಿಪ್ ನಡೆಯಲಿದೆ.

Cheil-13654/22